RNI .KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 100 ಪುಟ: 06 ಶನಿವಾರ 15-03-2025 ₹ 3 Mail:mussanje2010@gmail.com www.mussanjenews.com

# ಮುಸ್ಸಂಜೆ


ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)

Executive Editor: L P Babu

Honourary Editor: Venkatesh

ಸುದ್ದಿ, ಜಾಹೀರಾತು ಹಾಗೂ ಪತ್ರಿಕೆಗೆ ಚಂದಾದಾರರಾಗಲು ಸಂಪರ್ಕಿಸಿ: 9448074878



2000 ಕೋಟಿ ಕಲೆಕ್ಷನ್ ಮಾಡಿದ ಹೀರೋಯಿನ್!

60ರ ಹರೆಯದಲ್ಲಿ ಅಮೀರ್ ಖಾನ್

5 ಪಂದ್ಯಗಳಿಗೆ ರೋಹಿತ್ ನಾಯಕ ಪುಟ 6

# ಇ.ಡಿ ತನಿಖೆ ಚುರುಕು

## ಹವಾಲ ಶಂಕೆ; ಮತ್ತೆ ಬಂಧನದ ಭೀತಿಯಲ್ಲಿ ರನ್ಯಾ-ತರುಣ್, ನಟಿ ಆಪ್ತರಿಗೂ ಸಂಕಷ್ಟ

**ಬೆಂಗಳೂರು:** ನಟಿ ರನ್ಯಾರಾವ್ ಸ್ಮಗ್ಲಿಂಗ್ ಪ್ರಕರಣದಲ್ಲಿ ಹವಾಲ ಶಂಕೆ ವ್ಯಕ್ತಪಡಿಸಿರುವ ಜಾರಿ ನಿರ್ದೇಶನಾಲಯದ(ಇಡಿ) ಅಧಿಕಾರಿಗಳು ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ಅಕ್ರಮ ಹಣ ವರ್ಗಾವಣೆ ಆರೋಪದ ಕಾರ್ಯಾಚರಣೆ ಕೈಗೊಂಡಿರುವ ಇ.ಡಿ ಅಧಿಕಾರಿಗಳು ರನ್ಯಾರಾವ್ ಅವರ ಆಪ್ತ ಹಾಗೂ ಕಾರು ಚಾಲಕ ದೀಪಕ್ ಎಂಬಾತನನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ.

ಪ್ರಕರಣದಲ್ಲಿ ಭಾರೀ ದೊಡ್ಡಮಟ್ಟದ ಹಣದ ವಹಿವಾಟು ನಡೆದಿರುವ ಹಿನ್ನೆಲೆಯಲ್ಲಿ ಈ ವ್ಯಾಪಕ ಜಾಲದ ಹಿಂದೆ ಬಿದ್ದಿರುವ ಅಧಿಕಾರಿಗಳ ತಂಡ ರನ್ಯಾರಾವ್ ಆಪ್ತ ವಲಯಗಳಲ್ಲಿ ಗುರುತಿಸಿಕೊಂಡಿರುವವರನ್ನು ವಿಚಾರಣೆಗೆ ಒಳಪಡಿಸುತ್ತಿದ್ದಾರೆ.

ಈತನನ್ನು ಅಜ್ಞಾತ ಸ್ಥಳಕ್ಕೆ ಕರೆದೊಯ್ದು ವಿಚಾರಣೆ ಆರಂಭಿಸಿರುವ ಇಡಿ ತಂಡ ಈತನ ಮಾಹಿತಿ ಆಧಾರದ ಮೇಲೆ ಜಾಲವನ್ನು ಭೇದಿಸಲು ಮುಂದಾಗಿದ್ದಾರೆ ಅಲ್ಲದೇ ಪ್ರಕರಣದ ಪ್ರಮುಖ ರೂವಾರಿ ಅವರನ್ನು ಕೂಡ ವಶಕ್ಕೆ ಪಡೆದು ವಿಚಾರಣೆ ನಡೆಸಲಿದೆ.

ಈಗಾಗಲೇ ನ್ಯಾಯಾಂಗ ಬಂಧನದಲ್ಲಿರುವ ರನ್ಯಾರಾವ್ ಆಕೆಯ ಸ್ನೇಹಿತ ತರುಣ್ ಇಬ್ಬರನ್ನು ನ್ಯಾಯಾಲಯದ ಅನುಮತಿ ಪಡೆದು ವಶಕ್ಕೆ ಪಡೆಯುವ ಸಾಧ್ಯತೆ ಇದೆ. ಶನಿವಾರ ಚಾಲಕನ ವಿಚಾರಣೆ ಪೂರ್ಣಗೊಳಿಸಿ ಸೋಮವಾರ ಈ ಇಬ್ಬರನ್ನು ವಶಕ್ಕೆ ಪಡೆಯಲು ಇಡಿ ಸಿದ್ಧತೆ ಮಾಡಿಕೊಂಡಿದೆ ಎಂದು ಹೇಳಲಾಗಿದೆ.

ರನ್ಯಾರಾವ್ ಮತ್ತು ತರುಣ್ ಅವರುಗಳನ್ನು ಬಂಧಿಸಿ, ಇಡಿ ಅಧಿಕಾರಿಗಳು ದೆಹಲಿಗೆ ಕರೆದೊಯ್ದು ವಿಚಾರಣೆ ನಡೆಸಲಿದ್ದಾರೆ.

ಈಗಾಗಲೇ ರನ್ಯಾರಾವ್ ಸೇರಿದಂತೆ ಆಕೆಯ ಆಪ್ತರ ಸ್ಥಳಗಳ ಮೇಲೆ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ಜಪ್ತಿ ಮಾಡಲಾಗಿದ್ದು, ಈ ಸಂಬಂಧ ವಿಚಾರಣೆ ನಡೆಸಬೇಕಾಗಿರುವ ಕಾರಣ ಇ.ಡಿ. ಅಧಿಕಾರಿಗಳು ತಮ್ಮ ವಶಕ್ಕೆ ಪಡೆಯುವ ನಿರೀಕ್ಷೆ ಇದೆ.

ಈ ಹಿನ್ನೆಲೆಯಲ್ಲಿ ಇ.ಡಿ. ಅಧಿಕಾರಿಗಳು ಬಾಡಿ ವಾರೆಂಟ್ ಮೂಲಕ ವಶಕ್ಕೆ ಪಡೆದುಕೊಳ್ಳಲಿದ್ದಾರೆ ಎನ್ನಲಾಗಿದೆ.

ಈ ನಡುವೆ, ಸಿಬಿಐ ಅಧಿಕಾರಿಗಳು ಸಹ ಎಫ್ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೆರೆಯಾದ ವಿದೇಶಿ



ಆರೋಪಿಗಳಿಗೂ ರನ್ಯಾರಾವ್ ಅವರಿಗೂ ನಂಟಿರುವ ಬಗ್ಗೆ ಡಿಆರ್ಐ ಅಧಿಕಾರಿಗಳು ಸಿಬಿಐಗೆ ಪತ್ರ ಬರೆದು ಅನುಮಾನ ವ್ಯಕ್ತಪಡಿಸಿದ್ದಾರೆ.

## ಸರ್ಕಾರಿ ಕಾರಲ್ಲೇ ರನ್ಯಾ ಚಿನ್ನ ಸಾಗಾಟ

**ಬೆಂಗಳೂರು:** ಚಿನ್ನ ಕಳ್ಳ ಸಾಗಾಣಿಕೆ ಪ್ರಕರಣದಲ್ಲಿ ಸಿಕ್ಕಿ ಬಿದ್ದಿರುವ ನಟಿ ರನ್ಯಾರಾವ್ ಪ್ರಕರಣ ಕುರಿತಂತೆ ಡಿಆರ್ಐ ನಡೆಸುತ್ತಿರುವ ತನಿಖೆಯಲ್ಲಿ ಸ್ಫೋಟಕ ಮಾಹಿತಿಗಳು ಲಭ್ಯವಾಗುತ್ತಿವೆ.


ದುಬೈನಿಂದ ಕೆಂಪೇಗೌಡ ವಿಮಾನನಿಲ್ದಾಣಕ್ಕೆ ರನ್ಯಾ ಬಂದಿಳಿದ ಬಳಿಕ ಸರ್ಕಾರಿ ವಾಹನದಲ್ಲೇ ಚಿನ್ನ ಸಾಗಿಸುತ್ತಿದ್ದ ಸ್ಫೋಟಕ ಮಾಹಿತಿ ತನಿಖೆಯಿಂದ ಬಹಿರಂಗವಾಗಿದೆ.

ಈಗಾಗಲೇ ತನಿಖೆಯಲ್ಲಿ ಸಚಿವರ ಕೈವಾಡವಿರುವ ಅಂಶ ಸಾಕಷ್ಟು ಸದ್ದು ಮಾಡುತ್ತಿದೆ. ಇದರ ಬೆನ್ನಲ್ಲೆ ಸರ್ಕಾರಿ ಕಾರಿನಲ್ಲಿ ಚಿನ್ನ ಸಾಗಾಣಿಕೆ ಮಾಡಿರುವ ಅಂಶ ಪತ್ತೆಯಾಗಿರುವುದು ರನ್ಯಾಗೆ ಮತ್ತೊಂದು ಕಂಟಕ ಎದುರಾಗಿದೆ.

ರಾಜ್ಯ ಪೊಲೀಸ್ ಇಲಾಖೆಯಲ್ಲಿ ಐಪಿಎಸ್ ಅಧಿಕಾರಿಗಳಿಗೆ ಎರಡು ಹೆಚ್ಚುವರಿ ಕಾರುಗಳನ್ನು ನೀಡಲಾಗುತ್ತದೆ. ಈ ಹೆಚ್ಚುವರಿ ಕಾರು ಅಧಿಕಾರಿಯವರ ಕುಟುಂಬದವರಿಗೆ ಬಳಕೆಯಾಗುತ್ತದೆ.

ಅದೇ ರೀತಿ, ಡಿಜಿಪಿ ರಾಮಚಂದ್ರ ರಾವ್ ಅವರಿಗೂ ಕೂಡ ಸರ್ಕಾರ ಹೆಚ್ಚುವರಿ ಕಾರು ನೀಡಲಾಗಿತ್ತು. ಈ ಸರ್ಕಾರಿ ವಾಹನದಲ್ಲೇ ರನ್ಯಾ ರಾವ್ ಚಿನ್ನವನ್ನು ಸಾಗಿಸಿದ್ದಾರೆ. ರನ್ಯಾ ರಾವ್ ಇದೇ ವಾಹನದಲ್ಲಿ ಹಲವು ಬಾರಿ ವಿಮಾನ ನಿಲ್ದಾಣಕ್ಕೆ ಓಡಾಡುತಿದ್ದರು ಎಂದು ತನಿಖೆ ವೇಳೆ ತಿಳಿದುಬಂದಿದೆ.

**ವಿಮಾನ ನಿಲ್ದಾಣ ಸಿಬ್ಬಂದಿಗೆ ನೋಟಿಸ್:** ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರೋಟೋಕಾಲ್ ಸಿಬ್ಬಂದಿಗೆ ಸಿಬಿಐ ಅಧಿಕಾರಿ ಗೌರವ್ ಗುಪ್ತಾ ನೇತೃತ್ವದಲ್ಲಿ ತನಿಖೆ ಗೌರವ್ ಗುಪ್ತಾ ನೇತೃತ್ವದ ತನಿಖಾ ತಂಡ ನೋಟಿಸ್ ಜಾರಿ ಮಾಡಿದೆ. ಬಸವರಾಜು, ಮಹಾಂತೇಶ್, ವೆಂಕಟರಾಜುಗೆ ನೋಟಿಸ್ ಜಾರಿ ಮಾಡಲಾಗಿದೆ.




ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಕೆರವಡಿ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಹಾಗೂ ಗುರುವಂದನೆ ಮತ್ತು ಸ್ನೇಹ ಸಮ್ಮೀಲನ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾವೇರಿ - ಗದಗ ಲೋಕಸಭಾ ಕ್ಷೇತ್ರದ ಸಂಸದ ಬಸವರಾಜ ಬೊಮ್ಮಾಯಿರವರು ಭಾಗವಹಿಸಿ ಮಾತನಾಡಿದರು. ಈ ಸಂಧರ್ಭದಲ್ಲಿ ಸಚಿವ ಮಧು ಬಂಗಾರಪ್ಪ, ಶಾಸಕ ಬಸವರಾಜ ಶಿವಣ್ಣನವರ ಮಾಜಿ ಶಾಸಕ ವೀರುಪಾಕ್ಷಪ್ಪ ಬಳ್ಳಾರಿ, ಎಸ್ ಆರ್ ಪಾಟೀಲ್ ಹೆಸ್ಕಾಂ ಅಧ್ಯಕ್ಷ ಸೈಯದ್ ಅಜ್ಜಂಪೀರ ಖಾದ್ರಿ , ಎಸ್.ಡಿ.ಎಂ.ಸಿ ಅಧ್ಯಕ್ಷ ಹೇಮಪ್ಪ ಸೇರಿದಂತೆ ಎಸ್.ಡಿ.ಎಂ.ಸಿ ಯ ಸರ್ವ ಸದಸ್ಯರು, ಶಾಲೆಯ ಸರ್ವ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸೌಹಾರ್ದತೆ ಹಾಳು ಮಾಡುವವರನ್ನು ನಿರ್ಲಕ್ಷಿಸುವುದೇ ಸೂಕ್ತ

ಮಂಗಳೂರು: ಕರಾವಳಿಯ ಭಾಗದಲ್ಲಿ ಸೌಹಾರ್ದತೆಯನ್ನು ಹಾಳುಗೆಡವಲು ಪ್ರಯತ್ನಿಸುವವರನ್ನು ನಿರ್ಲಕ್ಷಿಸುವುದೇ ಸೂಕ್ತ ಮಾರ್ಗ ಎಂದು ವಿಧಾನಸಭೆಯ ಅಧ್ಯಕ್ಷ ಯು.ಟಿ.ಖಾದರ್ ಹೇಳಿದ್ದಾರೆ.



ಸುದ್ದಿಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಶಾಂತಿ ನೆಮ್ಮದಿ ಸೌಹಾರ್ದತೆಯನ್ನು ಹಾಳುಗೆಡವಲು ಸಾಕಷ್ಟು ಮಂದಿ ಪದೇಪದೇ ಪ್ರಯತ್ನ ಮಾಡುತ್ತಲೇ ಇದ್ದಾರೆ. ಅಂತವರನ್ನು ನಿರ್ಲಕ್ಷಿಸುವುದು ಸೂಕ್ತ ಮಾರ್ಗ. 10 ಪ್ರಕರಣ ದಾಖಲಿಸಿದರೂ ಅಂತಹ ವ್ಯಕ್ತಿಗಳು ತಮ್ಮ ಚಾಳಿಯನ್ನು ಬಿಡುವುದಿಲ್ಲ, ಅವರು ಪ್ರಚೋದನಾಕಾರಿ ಭಾಷಣ ಮಾಡಿದರೆ ಅವರ ಕಾರ್ಯಕ್ರಮದಲ್ಲಿದ್ದ ಬೆರಳೆಣಿಕೆಯ ಜನರಿಗೆ ವಿಷಯ ತಿಳಿಯುತ್ತದೆ. ಅಲ್ಲಿಗೆ ಅದು ಮುಗಿಯುತ್ತದೆ. ಒಂದು ವೇಳೆ ಪ್ರಕರಣ ದಾಖಲಿಸಿ ಪ್ರತಿ ಟೀಕೆಗಳನ್ನು ಮಾಡಿದರೆ ವ್ಯಕ್ತಿಗಳಿಗೆ ದೊಡ್ಡ ಮಟ್ಟದ ಪ್ರಚಾರ ಸಿಗುತ್ತದೆ. ಅವರು ಆಡಿದ ಮಾತುಗಳು ದೂರದಲ್ಲಿ ಎಲ್ಲೋ ಇದ್ದ ಜನರಿಗೆ ತಲುಪುತ್ತದೆ ಎಂದು ಹೇಳಿದರು.

ಪ್ರಚೋದನಾಕಾರಿ ಭಾಷಣ ಮಾಡಿದವರ ಮಾತುಗಳನ್ನು ಇತ್ತೀಚೆಗೆ ಊರಿನ ಜನ ಕಿವಿಗೊಟ್ಟು ಕೇಳುತ್ತಿಲ್ಲ. ಎಷ್ಟೇ ಬಾಯಿ ಬಡಿದುಕೊಂಡು ಭಾಷಣ ಮಾಡಿದರೂ, ಹಿಂದೂ ಮುಸ್ಲಿಂ ಕ್ರಿಶ್ಚಿಯನ್ ಬೇಧಭಾವವಿಲ್ಲದೆ ಒಗ್ಗಟ್ಟಿನಲ್ಲಿದ್ದಾರೆ. ಹೊರಗಿನಿಂದ ಬಂದವರು ಶಾಂತಿಭಂಗ ಮಾಡುವ ಪುಟ 2

## ಕಾಂಗ್ರೆಸ್‌ನಲ್ಲಿ ಆಂತರಿಕ ಬೇಗುದಿ ಇಲ್ಲ

**ವಿಜಯಪುರ:** ಉಪಮುಖ್ಯಮಂತ್ರಿ ಡಿ.ಕೆಶಿವಕುಮಾರ್ ಅವರು ಕರೆದಿದ್ದ ಡಿನ್ನರ್ ಪಾರ್ಟಿಗೆ ಪರಮೇಶ್ವರ್ ಅವರು ಬಾರದೇ ಇರುವುದನ್ನು ಬೇರೆ ರೀತಿಯಲ್ಲಿ ಅರ್ಥೈಸಿಕೊಳ್ಳುವ ಅವಶ್ಯಕತೆಯಿಲ್ಲ. ಪಕ್ಷದಲ್ಲಿ ಯಾವುದೇ ಆಂತರಿಕ ಬೇಗುದಿ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ. ಶನಿವಾರ ನಗರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಇದೆಲ್ಲಾ ಮಾಧ್ಯಮಗಳ ಸೃಷ್ಟಿ ಎಂದರು. ನಾನು ಅಟೆಂಡ್ ಆಗಿದ್ದೆ, ಫೋಟೋ ನೋಡಿದ್ದೀರಿ. ಸತೀಶ್ ಜಾರಕಿಹೊಳಿ, ಖಂಡ್ರೆ, ರಾಜಣ್ಣ ಅಟೆಂಡ್ ಆಗಿದ್ದಾರೆ ಎಂದು ಪುಟ 2



## ಕಾರಿನ ಮೇಲೆ ಬಿದ್ದ ಕಾಂಕ್ರೀಟ್ ಮಿಕ್ಸರ್ ಲಾರಿ

**ಬೆಳಗಾವಿ:** ಚಲಿಸುತ್ತಿದ್ದ ಕಾರಿನ ಮೇಲೆಯೇ ಕಾಂಕ್ರಿಟ್ ಮಿಕ್ಸರ್ ಲಾರಿ ಬಿದ್ದು ಪವಾಡ ದೃಶವಾಗಿ ಇಬ್ಬರು ಪಾರಾಗಿರುವ ಘಟನೆ ಬೆಳಗಾವಿಯಲ್ಲಿ ನಡೆದಿದೆ. ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿ ಬಳಿ ಸರ್ವಿಸ್ ರಸ್ತೆಯಲ್ಲಿ ಈ ದುರ್ಘಟನೆ ಸಂಭವಿಸಿದೆ. ಸದ್ಯ ಕಾರಿನಲ್ಲಿದ್ದ ಪರಪ್ಪ ಬಾಳೆಕಾಯಿ, ನಿಂಗಪ್ಪ ಕೊಪ್ಪದ ಇಬ್ಬರು ಅಪಾಯದಿಂದ ಪಾರಾಗಿದ್ದು ಬದುಕುಳಿದಿದ್ದಾರೆ. ಪುಟ 2

## ಯುವಕ ಸಾವು: ತನಿಖೆಗೆ ಆಗ್ರಹ

**ಮೈಸೂರು:** ಕ್ರಿಕೆಟ್ ಆಡಲು ಹೋಗಿದ್ದ ಯುವಕ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಹೆಚ್ ಡಿ ಕೋಟೆ ತಾಲ್ಲೂಕಿನಲ್ಲಿ ನಡೆದಿದೆ. ಹೆಚ್ ಡಿ ಕೋಟೆ ತಾಲ್ಲೂಕಿನ ವಡ್ಡರಗುಡಿ ಗ್ರಾಮದ ದಿವ್ಯಾ ಕುಮಾರ್ ಮೃತ ಯುವಕ. ಫೆಬ್ರವರಿ 24 ರಂದು ಬೀಚನಹಳ್ಳಿಯಲ್ಲಿ ನೇರಳೆ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ ಆಯೋಜನೆ ಮಾಡಲಾಗಿತ್ತು. ಫೈನಲ್ ಪಂದ್ಯದಲ್ಲಿ ಜೆಪಿ ವಾರಿಯರ್ಸ್ ಪುಟ 2

## ಹಿರಿಯ ಸಾಹಿತಿ ಡಾ.ಪಂಚಾಕ್ಷರಿ ನಿಧನ

**ಧಾರವಾಡ:** ಕನ್ನಡದ ಹಿರಿಯ ಸಾಹಿತಿ, ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟಗಾರ, ಡಾ.ಪಂಚಾಕ್ಷರಿ ಹಿರೇಮಠ (92) ಶನಿವಾರ ಬೆಳಗ್ಗೆ ಧಾರವಾಡದ ಜಯನಗರದಲ್ಲಿನ ಅವರ ನಿವಾಸದಲ್ಲಿ ನಿಧನರಾಗಿದ್ದಾರೆ. ಪಂಚಾಕ್ಷರಿ ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಡಾ.ಪಂಚಾಕ್ಷರಿ ಹಿರೇಮಠ ಅವರು ಕೊಪ್ಪಳ ಜಿಲ್ಲೆಯ ಬಿಸರಹಳ್ಳಿಯಲ್ಲಿ 1933ರಲ್ಲಿ ಜ.6ರಂದು ಜನಿಸಿದ್ದಾರೆ. ನಿಜವಾದ ಪುಟ 2

## ಪ್ರವಾಸಿಗರ ಸುರಕ್ಷತೆ: ಪ್ರತ್ಯೇಕ ಠಾಣೆ ಸ್ಥಾಪಿಸಲು ಮನವಿ

**ಬೆಂಗಳೂರು:** ದೇಶಿ - ವಿದೇಶಿ ಪ್ರವಾಸಿಗರ ಸುರಕ್ಷತೆ, ಭದ್ರತೆಗಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಂಪಿಯಲ್ಲಿ ವಿಶೇಷ ಪ್ರತ್ಯೇಕ ಪೊಲೀಸ್ ಉಪ ವಿಭಾಗ (ಡಿವೈಎಸ್ಪಿ) ಕಚೇರಿ ಆರಂಭಿಸುವಂತೆ ಶಾಸಕ ಜಿ.ಜನಾರ್ದನ ರೆಡ್ಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಈ ಬಗ್ಗೆ ಬೆಂಗಳೂರಿನ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಶಾಸಕ ಜನಾರ್ದನ ರೆಡ್ಡಿ, ಹಂಪಿಯಲ್ಲಿ ಪೊಲೀಸ್ ಉಪ ವಿಭಾಗ ಕಚೇರಿ ಸ್ಥಾಪನೆ ಹಾಗೂ ಆನೆಗೊಂದಿಯಲ್ಲಿ ಪ್ರವಾಸಿಗರ ಸುರಕ್ಷತೆಗಾಗಿ ಪ್ರತ್ಯೇಕ ಪೊಲೀಸ್ ಠಾಣೆ ಸ್ಥಾಪನೆಯ ಅಗತ್ಯ, ಮಹತ್ವದ ಬಗ್ಗೆ ಶಾಸಕ ರೆಡ್ಡಿ, ಸಿಎಂಗೆ ವಿವರಿಸಿದರು.



ವರ್ಷಕ್ಕೆ 40 ಲಕ್ಷ ಪ್ರವಾಸಿಗರು: ಹಂಪಿ ಹಾಗೂ ಆನೆಗೊಂದಿಯ ವಿಶ್ವವಿಖ್ಯಾತ ಮತ್ತು ಐತಿಹಾಸಿಕ ತಾಣಗಳಾಗಿವೆ. ಈ ತಾಣಗಳ ವೀಕ್ಷಣೆಗೆಂದು ಪ್ರತಿವರ್ಷ ದೇಶಾದ್ಯಂತದ ಸುಮಾರು 40 ಲಕ್ಷ ಪ್ರಮಾಣದಷ್ಟು ಪುಟ 2

## ಕಾಡಾನೆ ದಾಳಿಗೆ ಮಹಿಳೆ ಸಾವು; ತುರ್ತು ಸಭೆ ಬೇಲೂರು 3 ಆನೆ ಸೆರೆ ಕಾರ್ಯಾಚರಣೆ

**ಬೆಂಗಳೂರು:** ಬೇಲೂರು ತಾಲೂಕಿನ ಬಿಕ್ಕೋಡು, ಅರೆಹಳ್ಳಿ ಸುತ್ತಮುತ್ತ ಜನರಿಗೆ ಉಪಟಳ ನೀಡುತ್ತಿರುವ 3 ಪುಂಡಾನೆ ಗುರುತಿಸಿದ್ದು, ಈ ಆನೆಗಳನ್ನು ಸೆರೆ ಹಿಡಿಯಲು ಮತ್ತು ಕೂಡಲೇ ಇದೇ ಪ್ರದೇಶದಲ್ಲಿ ಆನೆ ಕಾರ್ಯಪಡೆಯ ಕಚೇರಿ ಸ್ಥಾಪಿಸಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ದರ್ಜೆಯ ಅಧಿಕಾರಿಯನ್ನು ನಿಯೋಜಿಸುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸೂಚನೆ ನೀಡಿದ್ದಾರೆ.

ಬೇಲೂರು ತಾಲೂಕು ಕೋಗೋಡಿನ ತೋಟದಲ್ಲಿ ನಿನ್ನೆ ಮಹಿಳೆಯೊಬ್ಬರು ಆನೆ ದಾಳಿಯಿಂದ ಮೃತಪಟ್ಟ ಹಿನ್ನೆಲೆಯಲ್ಲಿ ವಿಕಾಸಸೌಧದ ತಮ್ಮ ಕಚೇರಿಯಲ್ಲಿಂದು ಅರಣ್ಯಾಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿದ ಸಚಿವರು, ಹಾಸನ ವಲಯಕ್ಕೆ 2 ಥರ್ಮಲ್ ಕ್ಯಾಮರಾ



ಸಹಿತ ಡ್ರೋನ್ ಖರೀದಿಸಿ ರಾತ್ರಿಯ ವೇಳೆ ಕೂಡ ಆನೆಗಳ ಸಂಚಾರದ ಬಗ್ಗೆ ನಿಗಾ ಇಟ್ಟು, ಸ್ಥಳೀಯರಿಗೆ ಸಕಾಲದಲ್ಲಿ ಮಾಹಿತಿ ನೀಡಲು ಸೂಚಿಸಿದರು.

ಆನೆಗಳ ಸಮಸ್ಯೆ ಹೆಚ್ಚಿರುವ ಪ್ರದೇಶದಲ್ಲಿ ತುರ್ತು ಸ್ಪಂದನೆಗಳಾಗಿ 2 ಹೆಚ್ಚುವರಿ ಜೀಪುಗಳು ಪುಟ 2

## ಸಚಿವ ಸೋಮಣ್ಣಗೆ 'ಡಬಲ್ ಕಂಗ್ರಾಜುಲೇಷನ್' ಎಂದಿದ್ದ ಮೋದಿ

ತುಮಕೂರು: ಕೇಂದ್ರ ಸಚಿವನಾಗಿ ಬಡ್ತಿ ಪಡೆದ ಕ್ಷಣವನ್ನು ರಾಜ್ಯ ರೈಲ್ವೆ ಸಚಿವ ವಿ.ಸೋಮಣ್ಣ ಅವರು ತಮ್ಮ ಜನತೆ ಮುಂದೆ ಬಿಚ್ಚಿಟ್ಟಿದ್ದಾರೆ.

ತುರುವೇಕೆರೆ ಪಟ್ಟಣದಲ್ಲಿ ನಡೆದ ಸವಲತ್ತು ವಿತರಣೆ ಹಾಗೂ ಸಾರ್ವಜನಿಕ ಕುಂದುಕೊರತೆ ಸಭೆಯಲ್ಲಿ ಮಾತನಾಡಿದ ಸಚಿವರು, "ಇದು ದೇವರ ಸಭೆ, ಗಣಪತಿ ಎದುರಿಗೆ ಮಾತನಾಡುತ್ತಿದ್ದೇನೆ. ಒಳ್ಳೆತನ ಇದ್ದುದಕ್ಕೆ ನೀವು ಇಷ್ಟು ದೊಡ್ಡತನದಲ್ಲಿ ಆಶೀರ್ವಾದ ಮಾಡಿದ್ದೀರಿ. ನೀವು ನನ್ನನ್ನು ಎಂಪಿ ಆಗಿ ಹೋಗಿ ಅಂತ ಕಳುಹಿಸಿದ್ರಿ. ಸಂಸದನಾಗಿ ಆಯ್ಕೆ ಆದ ಮೂರು ದಿನದ ನಂತರ ನಾನು ದೆಹಲಿಗೆ ಹೋಗಿದ್ದೆ. ಆಗ ಅಲ್ಲಿ ಎಲ್ಲರೂ ಪ್ರಧಾನಿ ಮೋದಿ ಅವರಿಗೆ ವಿಶ್ ಮಾಡುತ್ತಿದ್ದರು. ನಾನು ಮಾಡಿರಲಿಲ್ಲ. ನಮ್ಮ ಬಿ.ಎಲ್. ಸಂತೋಷ್ ಅವರು ನನ್ನನ್ನು ಕರೆದು ಹೋಗ್ರೀ ವಿಶ್ ಮಾಡಿ ಬನ್ನಿ ಪ್ರಧಾನಿಗೆ ಅಂತ



ಹೇಳಿದರು. ಅವಾಗ ನಾನು 'ಬೇಡ ಸಾರ್.. ಎಂಪಿ ಆಗಿದ್ದೀನಿ ಇನ್ನು ವಿಶ್ ಮಾಡುವ ಅವಶ್ಯಕತೆ ಇಲ್ಲ' ಎಂದೆ".

ಆಫ್‌ಕೋ ಡಬಲ್ ಕಂಗ್ರಾಜುಲೇಷನ್: "ಆದರೂ ನನನ್ನು ಬಲವಂತ ಮಾಡಿ ಕೈಗೆ ಒಂದು ಗುಲಾಬಿ ಕೊಟ್ಟು ಮುಂದಕ್ಕೆ ತಳ್ಳಿದರು. ಅವಾಗ ಪ್ರಧಾನಿ ಮೋದಿ ಅವರು ನನ್ನನ್ನು ತಬ್ಬಿಕೊಂಡು 'ಸೋಮಣ್ಣ ಕಂಗ್ರಾಜುಲೇಷನ್.. ಆಫ್‌ಕೋ ಡಬಲ್ ಕಂಗ್ರಾಜುಲೇಷನ್ ' ಪುಟ 2

## ಗುಂಡಿಕ್ಕಿ ದರೋಡೆಕೋರರಿಬ್ಬರ ಸೆರೆ

ಹುಬ್ಬಳ್ಳಿ: ವಾಣಿಜ್ಯ ನಗರಿ ಹುಬ್ಬಳ್ಳಿಯಲ್ಲಿ ಇಂದು ಬೆಳ್ಳಂಬೆಳಿಗ್ಗೆ ಗುಂಡಿನ ಮೊರೆತ ಕೇಳಿ ಬಂದಿದೆ, ಇಬ್ಬರು ದರೋಡೆಕೋರರ ಕಾಲಿಗೆ ಪೊಲೀಸರು ಗುಂಡು ಹಾರಿಸಿ ಬಂಧಿಸಿದ್ದಾರೆ.

ಘಟನೆಯಲ್ಲಿ ಗಾಯಗೊಂಡ ಇಬ್ಬರು ಪೊಲೀಸ್ ಸಿಬ್ಬಂದಿ ಹಾಗೂ ಗುಂಡೇಟಿನಿಂದ ಗಾಯಗೊಂಡ ದರೋಡೆಕೋರರನ್ನು ನಗರದ ಕಿಮ್ಸ್‌ಗೆ ದಾಖಲಿಸಲಾಗಿದ್ದು ಚಿಕಿತ್ಸೆ ನೀಡಲಾಗುತ್ತಿದೆ.

ಗುಂಡೇಟು ತಿಂದು ಗಾಯಗೊಂಡ ದರೋಡೆಕೋರರ ತಂಡದ ಹಿನ್ನೆಲೆ ರೋಚಕವಾಗಿದ್ದು, ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಅದರ ವಿವರಗಳನ್ನು ಸುದ್ದಿಗಾರರೆದುರು ವಿವರಿಸಿದರು.

10 ರಿಂದ 20 ಜನರಿದ್ದ ಈ ದರೋಡೆಕೋರರ ತಂಡ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ ರಾಜ್ಯಗಳಿಗೆ ಬೇಕಾದ ನಟೋರಿಯಸ್ ತಂಡವಾಗಿದೆಯೆನ್ನಲಾಗಿದ್ದು, ದೆಹಲಿ, ಉತ್ತರ



ಪ್ರದೇಶಗಳಲ್ಲೂ ಸಕ್ರಿಯವಾಗಿತ್ತು.

ಇದೇ ತಿಂಗಳು ಮಹಾನಗರದ ಅಪಾರ್ಟ್‌ಮೆಂಟ್ ಒಂದರಲ್ಲಿ ಸುಮಾರು 20 ಲಕ್ಷರೂ. ಮೌಲ್ಯದ ವಸ್ತುಗಳ ಕಳ್ಳತನವಾಗಿದ್ದು, ಹಿಂದೆ ವಿದ್ಯಾಗಿರಿ, ಧಾರವಾಡ ಶಹರ, ಕೇಶ್ವಾಪುರ ಠಾಣಾ ವ್ಯಾಪ್ತಿಯಲ್ಲಿಯೂ ಇದೇ ಮಾದರಿ ಪ್ರಕರಣಗಳು ನಡೆದಿದ್ದವು.

ಈ ತಂಡದ ದರೋಡೆಕೋರರನ್ನು ಟ್ರ್ಯಾಕ್ ಮಾಡಿದಾಗ ಹುಬ್ಬಳ್ಳಿಯತ್ತ ಬರುತ್ತಿರುವ ಮಾಹಿತಿ ಲಭ್ಯವಾಗಿದೆ.

ರಾಯನಾಳದ ಸಮೀಪದಲ್ಲಿ ದರೋಡೆಗಾಗಿ ಹೊಂಚು ಹಾಕಿ ಪುಟ 2

## ನಮಗೆ ಯಾವುದೇ ಮಾಹಿತಿ ಇಲ್ಲ: ಪರಂ

**ಬೆಂಗಳೂರು:** ನಟಿ ರನ್ಯಾರಾವ್ ಗೋಲ್ಡ್ ಸ್ಮಗ್ಲಿಂಗ್ ಪ್ರಕರಣದ ತನಿಖೆ ನಡೆಯುತ್ತಿದೆ. ತನಿಖೆಯ ಬಗ್ಗೆ ನಮಗೇನು ಮಾಹಿತಿ ಕೊಟ್ಟಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.ಮಾಧ್ಯಮಗಳ ಜೊತೆ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಪ್ರಕರಣ ಸಂಬಂಧ ಡಿಆರ್ಐ ಅಧಿಕಾರಿಗಳು, ಸಿಬಿಐ ಮತ್ತು ಇಡಿ ಮೂರು ಸಂಸ್ಥೆಗಳು ವಿಚಾರಣೆ ನಡೆಸುತ್ತಿದ್ದು, ಅದರ ಬಗೆಗಿನ ಮಾಹಿತಿಗಳನ್ನು ನಮಗೆ ನೀಡಿಲ್ಲ. ಸಮಗ್ರ ತನಿಖೆಯ ನಂತರವಷ್ಟೇ ಸತ್ಯಾಸತ್ಯತೆ ಹೊರಬೀಳಲಿದೆ ಎಂದರು. ಪ್ರೋಟೋಕಾಲ್ ಸಂಬಂಧ ಸರ್ಕಾರ ಪ್ರಕರಣದ ತನಿಖೆಗೆ ಸಮಿತಿ ರಚಿಸಿದ್ದು, ಗೌರವ್ ಗುಪ್ತಾ ನೇತೃತ್ವದಲ್ಲಿ ಪ್ರಕರಣದ ತನಿಖೆ ನಡೆಯುತ್ತಿದೆ ಅವರು ಪ್ರಕರಣ ಸಂಬಂಧ ಕೆಲ ಅಧಿಕಾರಿಗಳ ವಿಚಾರಣೆ ನಡೆಸಿದ್ದಾರೆ, ಪುಟ 2



# ಗ್ರೇಟರ್ ಬೆಂಗಳೂರು ವಿಭಜನೆ ವಿರೋಧಿಸಿ ಬೃಹತ್ ಪ್ರತಿಭಟನೆ.




**ಬೆಂಗಳೂರು:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಗ್ರೇಟರ್ ಬೆಂಗಳೂರು ಹೆಸರಿನಲ್ಲಿ ಭಾಗಗಳನ್ನಾಗಿ ಮಾಡಲು ಹಾಗೂ ಹಾಲಿನ ದರ ಏರಿಕೆಯನ್ನು ಖಂಡಿಸಿ ಜೆಡಿಎಸ್ ಪಕ್ಷದ ವತಿಯಿಂದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ್ ಗೌಡ,ವಿಧಾನ ಪರಿಷತ್ ಸದಸ್ಯರಾದ ಜವರಾಯಿ ಗೌಡ,ಮಾಜಿ ವಿಧಾನ ಪರಿಷತ್ ಸದಸ್ಯ ತಿಪ್ಪೇ ಸ್ವಾಮಿ ಸೇರಿದಂತೆ ವಿವಿಧ ಮುಖಂಡರು ಹಾಜರಿದ್ದರು.

# ವಿದ್ಯಾರಣ್ಯಪುರದ ಅಲಸೂರಮ್ಮ ರಾಯರ ಮಠದಲ್ಲಿ ಟಿ ಟಿ ಡಿ ಕಾರ್ಯಕ್ರಮ






**ಬೆಂಗಳೂರು** : ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ವಿದ್ಯಾರಣ್ಯಪುರದ ಅಲಸೂರಮ್ಮ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಾರ್ಚ್ 18 ರಿಂದ 21ರ ವರೆಗೆ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಅವುಗಳ ವಿವರಗಳು ಈ ರೀತಿ ಇವೆ :

ಭಜನಾ ಕಾರ್ಯಕ್ರಮ : (ಪ್ರತಿದಿನ ಸಂಜೆ 6 ರಿಂದ 7) ಮಾರ್ಚ್ 18–ವಿದ್ಯಾರಣ್ಯಪುರದ ಶ್ರೀ ವಿಜಯ ವಿಠ್ಠಲ ಭಜನಾ ಮಂಡಳಿ, ಮಾರ್ಚ್ 19–ಜಕ್ಕೂರಿನ ಶ್ರೀ ವಿಜಯ ವಿಠ್ಠಲ ಭಜನಾ ಮಂಡಳಿ, ಮಾರ್ಚ್ 20–ವಿದ್ಯಾರಣ್ಯಪುರದ ಶ್ರೀ ಸುಶಮೀಂದ್ರ ಭಜನಾ ಮಂಡಳಿ.

ಪ್ರವಚನ ಕಾರ್ಯಕ್ರಮ : ಮಾರ್ಚ್ 18 ರಿಂದ 20 (ಪ್ರತಿದಿನ ಸಂಜೆ 7 ರಿಂದ 8). ಪ್ರವಚನಕಾರರು :ಶ್ರೀ ಚಂದ್ರಶೇಖರಾಚಾರ್ಯ, ವಿಷಯ : "ಮಹಾಭಾರತದ ಮಹಾನ್ ಸ್ತ್ರೀಯರು"

ಹರಿನಾಮ ಸಂಕೀರ್ತನೆ : ಮಾರ್ಚ್ 21, ಶುಕ್ರವಾರ ಸಂಜೆ 6–30ಕ್ಕೆ. ಕು॥ ಪ್ರಣೀತಾ ಮಣ್ಣೂರ್ ಮತ್ತು ಸಂಗಡಿಗರಿಂದ "ಹರಿನಾಮ ಸಂಕೀರ್ತನೆ". ಕಾರ್ಯಕ್ರಮ ನಡೆಯುವ ಸ್ಥಳ : ಅಲಸೂರಮ್ಮ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಮುಖ್ಯರಸ್ತೆ, ಬಿಇಎಲ್ ಲೇಔಟ್, 3ನೇ ಬ್ಲಾಕ್, ವಿದ್ಯಾರಣ್ಯಪುರ, ಬೆಂಗಳೂರು–560097 ಈ ಮೇಲಿನ ಎಲ್ಲಾ ಕಾರ್ಯಕ್ರಮಗಳಲ್ಲೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ॥ ಪಿ. ಭುಜಂಗರಾವ್ ವಿನಂತಿಸಿದ್ದಾರೆ.

# 16 ರಂದು ಯುವ ಕಲಾವಿದೆ ಧೃತಿ ಸಿಂಹ ರಂಗಪ್ರವೇಶ



**ಬೆಂಗಳೂರು:** ನಗರದ ಅಂಜಲಿ ಸ್ಕೂಲ್ ಆಫ್ ಮ್ಯೂಸಿಕ್ ಅಂಡ್ ಡಾನ್ಸ್ ನ ವಿದುಷಿ ಅಂಜಲಿ ಕೆ ಆರ್ ಅವರ ಶಿಷ್ಯ ಧೃತಿ ಸಿಂಹ ಅವರು ಭರತನಾಟ್ಯ ರಂಗ ಪ್ರವೇಶಕ್ಕೆ ಅಣಿಯಾಗಿದ್ದಾರೆ.

ನಾಳೆ ಜೆಸಿ ರಸ್ತೆಯ ಎಡಿಎ ರಂಗಮಂದಿರದಲ್ಲಿ ನಾಟ್ಯ ನಿವೇದನಂ ಶೀರ್ಷಿಕೆ ಅಡಿಯಲ್ಲಿ ಇವರು ರಂಗ ಪ್ರವೇಶಮಾಡುತ್ತಿರುವುದು ಬಹು ವಿಶೇಷವಾಗಿದೆ.ಸುಕೃತ ರಾವ್ ಮತ್ತು ಸಮೀರ ಸಿಂಹ ಅವರ ಪುತ್ರಿ ಧೃತಿ ಅವರ ರಂಗಪ್ರವೇಶಕ್ಕೆ ಹಿರಿಯ ಭರತನಾಟ್ಯ ಕಲಾವಿದೆ ಮಾಲಿನಿ ರವಿಶಂಕರ್ , ಕಲಾಪೋಷಕ ಅನನ್ಯ ಡಾ. ರಾಘವೇಂದ್ರ ರಾವ್ ಮತ್ತು ಬೆಂಗಳೂರು ನಗರ ವಿವಿ ಕುಲಪತಿ ಲಿಂಗರಾಜ ಗಾಂಧಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ತಮ್ಮ ಆರನೇ ವಯಸ್ಸಿನಿಂದಲೇ ನೃತ್ಯ ಕಲಿಕೆಗೆ ಮುಂದಾದ ಧೃತಿ ಅವರು ಈಗಾಗಲೇ ಗಂಧರ್ವ ಮಹಾವಿದ್ಯಾಲಯದ ವಿವಿಧ ಪರೀಕ್ಷೆಗಳಲ್ಲಿ ಅತ್ಯುನ್ನತ ಶ್ರೇಣಿ ಪಡೆದು ಉತ್ತೀರ್ಣ ರಾಗಿರುವುದು ಬಹು ವಿಶೇಷ.

# ಭೂ ವಿವಾದ: ಗುಂಡಿನ ದಾಳಿಗೆ ಬಲಿಯಾದ ಬಿಜೆಪಿ ನಾಯಕ

**ಹರಿಯಾಣ:** ಭೂ ವಿವಾದದ ಹಿನ್ನೆಲೆಯಲ್ಲಿ ಹರಿಯಾಣದ ಸೋನಿಪತ್ ಜಿಲ್ಲೆಯ ಬಿಜೆಪಿ ನಾಯಕ ಗುಂಡಿನ ದಾಳಿಗೆ ಬಲಿಯಾಗಿರುವ ಘಟನೆ ವರದಿಯಾಗಿದೆ.

ಸೋನಿಪತ್‌ನ ಮುಂಡ್ಲಾನಾ ಮಂಡಲ್‌ನ ಬಿಜೆಪಿ ಅಧ್ಯಕ್ಷ ಸುರೇಂದ್ರ ಜವಾಹರ್ ಸಾವನ್ನಪ್ಪಿದ ನಾಯಕರಾಗಿದ್ದಾರೆ.

ಶುಕ್ರವಾರ ತಡರಾತ್ರಿ ಜವಾಹರ್ ಮೇಲೆ ಅಪರಿಚಿತ ವ್ಯಕ್ತಿ ಗುಂಡಿನ ದಾಳಿ ನಡೆಸಿದ್ದಾರೆ. ಈ ದಾಳಿಯ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಗುಂಡಿನ ದಾಳಿಯಾಗುತ್ತಿದ್ದಂತೆ ಜವಾಹರ್ ತಮ್ಮ ಜೀವ ಉಳಿಸಿಕೊಳ್ಳಲು ಅಂಗಡಿ ಒಳಗೆ ಪ್ರವೇಶಿಸುತ್ತಿದ್ದು, ಆತನನ್ನು ದಾಳಿಕೋರ ಬೆನ್ನಟ್ಟಿ ದಾಳಿ ಮಾಡುತ್ತಿರುವುದನ್ನು ಸಿಸಿಟಿವಿಯಲ್ಲಿ ಕಾಣಬಹುದಾಗಿದೆ.

ದಾಳಿ ನಡೆಸಿರುವ ವ್ಯಕ್ತಿ ಕುರಿತು ಯಾವುದೇ ಮಾಹಿತಿ ಹೊರ ಬಂದಿಲ್ಲ. ಸುರೇಂದ್ರ ಖರೀದಿಸಿದ್ದ ಭೂಮಿ ವಿಚಾರದಲ್ಲಿ ಉಂಟಾದ ಜಗಳವೇ ಈ ದಾಳಿಗೆ ಕಾರಣ ಎನ್ನಲಾಗಿದೆ.

ಈ ಸಂಬಂಧ ಸದರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆಗೆ ಮುಂದಾಗಿದ್ದಾರೆ.

# ಪಂಚಾಯತ್ ರಾಜ್ ಇಲಾಖೆ ಅಧಿಕಾರಿ ಲತಕುಮಾರಿ ವಿರುದ್ಧ ಪ್ರತಿಭಟನೆ



**ಬೆಂಗಳೂರು;** ಅಖಿಲ ಭಾರತ ದಲಿತ ಕ್ರಿಯಾ ಸಮಿತಿ,ಮಾದಿಗರ ಬೌದಿಕ ವೇದಿಕೆ,ಜೈ ಬೀಮ್ ದಲಿತ ಭೂ ರಕ್ಷಣಾ ವೇದಿಕೆ ವತಿಯಿಂದ ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿ ಲತಕುಮಾರಿ ಅವರು ಹಣ ದುರುಪಯೋಗವಾಗಿರುವ ಕುರಿತು ದೂರು ನೀಡಿದರೂ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ ನಡೆಸಲಾಯಿತು. ವೇದಿಕೆ ಅಧ್ಯಕ್ಷ ಬಿ.ಆರ್. ಮುನಿರಾಜು ಮಾತನಾಡಿ,ಬಂಡಿಕೊಡಿಗೇ ಹಳ್ಳಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದ ಹಣ ದುರುಪಯೋಗವಾಗುತ್ತಿದೆ,ಗ್ರಾಮ ಪಂಚಾಯತ್ ಗಳ ಅಭಿವೃದ್ಧಿಗೆ ಬಿಡುಗಡೆಯಾದ ಹಣವನ್ನು ವೈಯಕ್ತಿಕ ಕೆಲಸಗಳಿಗೆ ಬಳಸಲಾಗುತ್ತದೆ.ಈ ಕುರಿತು ಅನೇಕ ಬಾರೀ ಪಂಚಾಯತ್ ರಾಜ್ ಇಲಾಖೆಯ ಆಯುಕ್ತೆ ಲತ ಕುಮಾರಿ ಅವರಿಗೆ ದೂರು ನೀಡಿದರೂ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ ಈ ಹಿನ್ನಲೆಯಲ್ಲಿ ಲತಕುಮಾರಿ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ತಿಳಿಸಿದರು. ಅದೇ ರೀತಿ ಬ್ಯಾಟರಾಯನಪುರ ಪೊಲೀಸ್ ಠಾಣೆಯ ಅಧಿಕಾರಿಗಳು ಪಕ್ಷಪಾತವಾಗಿ ನಡೆದುಕೊಳ್ಳುತ್ತಿರುವ ಕುರಿತು ಪ್ರತಿಭಟನೆ ನಡೆಸುವುದಾಗಿ ಹೇಳಿದರು. ಪ್ರತಿಭಟನೆಯಲ್ಲಿ ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.



ಡಿಸಿಎಂ ಡಿ ಕೆ ಶಿವಕುಮಾರ್ ಅವರು ಶುಕ್ರವಾರ ಬೆಂಗಳೂರಿನ ಬೆಳ್ಳಂದೂರು ಕೋಡಿ–ಸಕ್ರಾ ಆಸ್ಪತ್ರೆ ರಸ್ತೆ ಕಾಮಗಾರಿ ಪರಿಶೀಲನೆ ನಡೆಸಿದರು.

ಮೊದಲ ಪುಟದಿಂದ

## ನಿರ್ಲಕ್ಷಿಸುವುದೇ ಸೂಕ್ತ

ಪ್ರಯತ್ನ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಪ್ರಾಣಿ ಕಚ್ಚುತ್ತದೆ ಎಂದು ನಾವು ತಿರುಗಿಸಿ ಕಚ್ಚುವುದು ಸೂಕ್ತ ಅಲ್ಲ. ಅದನ್ನು ಅದರ ಪಾಡಿಗೆ ಬಿಟ್ಟರೆ ಯಾರಿಗೂ ಏನೂ ತೊಂದರೆಯಾಗುವುದಿಲ್ಲ, ನಿರ್ಲಕ್ಷ್ಯಕ್ಕಿಂತ ಇದಕ್ಕೆ ಒಳ್ಳೆಯ ಮದ್ದಿಲ್ಲ. ಪದೇಪದೇ ಪ್ರಚೋದನೆ ಮಾಡುವವರನ್ನು ಅವರ ಜೊತೆಯಲ್ಲಿದ್ದವರೇ ಖಂಡಿಸಿ ಬುದ್ದಿ ಹೇಳುತ್ತಿದ್ದಾರೆ ಎಂದು ಹೇಳಿದರು. ಪ್ರಚೋದನಾಕಾರಿ ಭಾಷಣ ಮಾಡಿದವರಿಗೆ ಪ್ರತಿ ಟೀಕೆ ಮಾಡುವುದು ಜಾತ್ಯತೀತತೆಯಲ್ಲ, ಅದರ ಬದಲಿಗೆ ಜನರಲ್ಲಿ ಶಾಂತಿ ಭಂಗವಾಗದಂತೆ ಎಚ್ಚರಿಕೆ ವಹಿಸುವುದು ಬಹಳ ಮುಖ್ಯ. ತೀರಾ ವಿಪರೀತವಾದರೆ ಪೊಲೀಸರು ಅಗತ್ಯ ಕ್ರಮ ಕೈಗೊಳ್ಳುತ್ತಾರೆ ಎಂದರು.

ವಿಧಾನಸಭೆ ಚುನಾವಣೆಯಲ್ಲಿ ಅಪಾಯಕಾರಿಯಾದ ಪ್ರಚೋದನಾಕಾರಿ ಭಾಷಣ ಮಾಡಲಾಗಿತ್ತು. ಇತ್ತೀಚೆಗೆ ವಿದ್ಯಾರ್ಥಿ ದಿಗಂತ್ ನಾಪತ್ತೆ ಪ್ರಕರಣಕ್ಕೆ ಬೇರೆಬೇರೆ ರೀತಿಯ ಬಣ್ಣ ಕಟ್ಟುವ ಹುನ್ನಾರ ನಡೆದಿತ್ತು. ಆದರೆ ಜನ ಅದಕ್ಕೆ ಕಿವಿಗೊಟ್ಟಿಲ್ಲ ಎಂದರು. ತಮ್ಮ ವಿರುದ್ಧ ದುಬೈನಲ್ಲಿ ಬ್ಯಾಂಕ್ ಇದೆ ಎಂಬೆಲ್ಲಾ ವದಂತಿಗಳನ್ನು ಹರಡಲಾಯಿತು. ಆದರೆ ಇದ್ಯಾವುದಕ್ಕೂ ಜನ ಕಿವಿಗೊಡಲಿಲ್ಲ. ಸತ್ಯ ಮನವರಿಕೆಯಾದ ಮೇಲೆ ತಮ್ಮ ತೀರ್ಪನ್ನು ನೀಡಿದ್ದಾರೆ ಎಂದು ಹೇಳಿದರು.

ಕ್ಷೇತ್ರದಲ್ಲಿ ಟೀಕೆ ಮಾಡಿದವರನ್ನು ತಾವು ಗೌರವದಿಂದ ಕಾಣುತ್ತಿದ್ದು, ಯಾವುದೇ ಬೇಧಭಾವ ಮಾಡುತ್ತಿಲ್ಲ. ಇತ್ತೀಚೆಗೆ ವ್ಯಕ್ತಿಯೊಬ್ಬರು ತಮ್ಮ ಬಳಿ ಸಹಾಯ ಪಡೆದುಕೊಂಡರು. ಕೊನೆಗೆ ಅವರಿಗೆ ಪಶ್ಚತ್ತಾಪವಾಗಿ ಸಾಮಾಜಿಕ ಜಾಲತಾಣದಲ್ಲಿ ನಾವು ನಿಮ್ಮನ್ನು ವ್ಯಾಪಕವಾಗಿ ಟೀಕೆ ಮಾಡಿದ್ದೆ. ಆದರೂ ನೀವು ಸಹಾಯ ಮಾಡಿದ್ದೀರ ಎಂದು ಭಾವೋದ್ವೇಗಕ್ಕೆ ಒಳಗಾದರು. ನನಗೆ ನೀನು ಟೀಕಿಸಿರುವುದು ಗೊತ್ತಿಲ್ಲ, ಅಂತಹ ವಿಚಾರಗಳು ಗೊತ್ತಿರುವ ಅನಿವಾರ್ಯವೂ ಇಲ್ಲ ಎಂದು ಹೇಳಿ ಕಳುಹಿಸಿದ್ದಾಗಿ ಖಾದರ್ ವಿವರಿಸಿದರು.

ಅತೀ ಚಿಕ್ಕ ವಯಸ್ಸಿನಲ್ಲಿಯೇ ನನಗೆ ವಿಧಾನಸಭೆಯ ಸ್ಪೀಕರ್ ಸ್ಥಾನ ದೊರೆತಿದೆ. ಈ ರಾಜಕೀಯದಲ್ಲಿ ಎಂದಿಗೂ ನಾನು ಅಧಿಕಾರದ ಹಿಂದೆ ಹೋದವನಲ್ಲ. ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಜನರ ಸೇವೆ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಜನರ ಆಶೀರ್ವಾದ ಹಾಗೂ ದೇವರ ಕೃಪೆ ಇದ್ದರೆ ದೊಡ್ಡ ಸ್ಥಾನಮಾನ ಸಿಗಬಹುದು. ಒಂದು ವೇಳೆ ಜನರಿಗೆ ಬೇಡ ಎನಿಸಿ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದರೆ ಇಷ್ಟೇ ಸಂತೋಷದಿಂದ ರಾಜಕೀಯ ನಿವೃತ್ತಿ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು.

## ಆಂತರಿಕ ಬೇಗುದಿ ಇಲ್ಲ

ತಿಳಿಸಿದರು. ಪರಮೇಶ್ವರ ಅವರ ಕ್ಷೇತ್ರದಲ್ಲಿ ಯಾರೋ ಮರಣ. ಹೊಂದಿದ್ದರಂತೆ. ಅವರು ಅಲ್ಲಿಗೆ ಹೋಗಿದ್ದರು. ಸುಮ್ಮ ಸುಮ್ಮನೆ ಸೃಷ್ಟಿ ಮಾಡುತ್ತಿದ್ದೀರಿ ಎಂದರು. ಸತೀಶ ಜಾರಕಿಹೊಳಿ, ರಾಜಣ್ಣ ಡಿನ್ನರ್ ಪಾರ್ಟಿಗೆ ಬಂದಿದ್ದರೂ ಇಲ್ಲ ಅಂತ ಸೃಷ್ಟಿ ಮಾಡುತ್ತೀರಿ ಎಂದು ಹೇಳಿದರು.

ಪರಮೇಶ್ವರ ಅವರಿಗೆ ತುಂಬಾ ಹತ್ತಿರ ಇದ್ದವರು ತೀರಿಕೊಂಡಿದ್ದರು. ತೀರಿಕೊಂಡಾಗ ಇದು ಇಂಪಾರ್ಟೆಂಟ್ ಆಗುತ್ತಾ ಎಂದು ಕೇಳಿದರು. ಡಿನ್ನರ್ ಪಾರ್ಟಿಗೆ ಸಿದ್ದರಾಮಯ್ಯ ಅವರು ಬಂದಿದ್ದರು. ಇನ್ನೇನು ಬೇಕು ನಿಮಗೆ ಎಂದು ಮರು ಪ್ರಶ್ನಿಸಿದರು.ಪರಮೇಶ್ವರ ಬಿಟ್ಟು ಎಲ್ಲರೂ ಬಂದಿದ್ದರು ಎಂದು ಪುನರುಚ್ಚರಿಸಿದರು.

ಕಾಂಗ್ರೆಸ್ಸಿನಲ್ಲಿ ಯಾವುದೇ ಆಂತರಿಕ ಬೇಗುದಿ ಇಲ್ಲ ಎಂದ ಸಚಿವ ಎಂ ಬಿ ಪಾಟೀಲ, ಇದರ ಮೇಲೆ ತಿಳಿದುಕೊಂಡು ಬಿಡಿ. ಸಿದ್ದರಾಮಯ್ಯ, ಎಂ.ಬಿ. ಪಾಟೀಲ, ಸತೀಶ ಜಾರಕಿಹೊಳಿ, ರಾಜಣ್ಣ ಅಟೆಂಡ್ ಆಗಿದ್ದರು ಎಂಬುದು ಸ್ಪಷ್ಟವಾಗುತ್ತದೆ ಎಂದರು. ನನಗೂ ಯಾರಾದರೂ ಹತ್ತಿರದವರಿದ್ದವರು ತೀರಿಕೊಂಡಿದ್ದರೆ ನಾನು ಹೋಗುತ್ತಿರಲಿಲ್ಲ ಎಂದು ಹೇಳಿದರು. ಎಲ್ಲರೂ ಆರಾಮ ಇದ್ದಾರೆ. ಮಾಧ್ಯಮವರಿಗೆ ಬೇಗುದಿ ಇದೆ ಎಂದು ಸಚಿವರು ತಿಳಿಸಿದರು.

ಡಿಕೆಶಿ ಕೆಪಿಸಿಸಿ ಅಧ್ಯಕ್ಷ ಹುದ್ದೆ ಐದು ವರ್ಷ ಪೂರೈಸಿದ ಹಿನ್ನಲೆ ಅಧಿವೇಶನ ನಡೆದಾಗ ಸಿಎಂ ಡಿಸಿಎಂ ಸಹಜವಾಗಿ ಊಟ ಕೊಡುತ್ತಾರೆ. ಇದರಲ್ಲಿ ತಪ್ಪೇನಿದೆ ಎಂದು ಕೇಳಿದರು.ನಾನು ಕೂಡಾ ಅಧಿವೇಶನ ನಡೆದಾಗ ಊಟ ಕೊಟ್ಟಿದ್ದೇನೆ. ಮಾಧ್ಯಮದವರಿಗೂ ಊಟ ಕೊಟ್ಟಿದ್ದಾರೆ ಎಂದು ತಿಳಿಸಿದರು.

## ದರೋಡೆಕೋರರ ಸೆರೆ

ಕುಳಿತಿದ್ದುದು ತಿಳಿದು ಬಂದಿದೆ. ತಂಡದ ಮೇಲೆ ದಾಳಿ ನಡೆಸಿ ಹಿಡಿಯಲೆತ್ನಿಸಿದ ಪೊಲೀಸ್ ಸಿಬ್ಬಂದಿ ಮೇಲೆ ದರೋಡೆಕೋರರು ಹಲ್ಲೆ ನಡೆಸಿ ಕಣ್ಣಿಗೆ ಕಾರದ ಪುಡಿ ಎರಚಿ ಪರಾರಿಯಾಗಲು ಯತ್ನಿಸಿದಾಗ ಮೊದಲು ರಕ್ಷಣೆಗಾಗಿ ಗಾಳಿಯಲ್ಲಿ ಗುಂಡು ಹಾರಿಸಿ ನಂತರ ದರೋಡೆಕೋರರ ಕಾಲಿಗೆ ಗುಂಡು ಹಾರಿಸಿ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ ಎಂದು ಆಯುಕ್ತರು ತಿಳಿಸಿದರು.

ಸದ್ಯ ಬಂಧಿತ ದರೋಡೆಕೋರರು ಹಾಗೂ ಅವರ ತಂಡದ ವಿವರಗಳನ್ನು ಪೊಲೀಸರು ಸಂಗ್ರಹಿಸುತ್ತಿದ್ದು, ಘಟನೆಯಲ್ಲಿ ಗಾಯಗೊಂಡ ಪಿಎಸ್‌ಐ ದೇವೇಂದ್ರ ಮಾವಿನದಂಡಿ, ಸಿಬ್ಬಂದಿ ದ್ಯಾನೇಶ್, ಆನಂದ ಜಾವೂರ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

## ತನಿಖೆಗೆ ಆಗ್ರಹ

ವಿರುದ್ಧ ದಿವ್ಯಾ ಕುಮಾರ್ ಸಿಕ್ಸ್ ಹೊಡೆದು ಗೆಲ್ಲಿಸಿದ್ದನು. ಮ್ಯಾಚ್ ಗೆದ್ದ ಬಳಿಕ ದಿವ್ಯಾ ಕುಮಾರ್ ಟೀಂ ಪಾರ್ಟಿ ಮಾಡಿತ್ತು. ನಂತರ ಪಾರ್ಟಿ ಮುಗಿಸಿ ಹೊರಟಿದ್ದ ದಿವ್ಯಾಕುಮಾರ್ ಅಂದು ನಡುರಸ್ತೆಯಲ್ಲಿ ಬಿದ್ದಿದ್ದನು. ತಕ್ಷಣವೇ ಆತನನ್ನು ಕುಟುಂಬಸ್ಥರು ಆಸ್ಪತ್ರೆಗೆ ಸೇರಿಸಿದ್ದರು.

ಮೊದ ಮೊದಲು ಕುಟುಂಬಸ್ಥರು ಬೈಕ್ ಅಪಘಾತದಿಂದ ಹೀಗಾಗಿದೆ ಎಂದುಕೊಂಡಿದ್ದರು. ನಂತರ ಬೈಕ್ ಗೆ ಏನೂ ಆಗದಿರುವ ಕಾರಣ ಕೊಲೆ ಮಾಡಿರುವ ಶಂಕೆ ವ್ಯಕ್ತಪಡಿಸಿದ್ದಾರೆ. ಇನ್ನು ಜಿಲ್ಲಾಸ್ಪತ್ರೆಯಲ್ಲಿ 9 ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ದಿವ್ಯಾ ಕುಮಾರ್ ನಿನ್ನೆ ಸಾವನ್ನಪ್ಪಿದ್ದು ಇದೀಗ ಸಾವಿನ ಸುತ್ತ ಅನುಮಾನಗಳ ಹುತ್ತ ಹುಟ್ಟಿಕೊಂಡಿದೆ. ಈ ಮಧ್ಯೆ ಕ್ರಿಕೆಟ್ ಆಯೋಜಕರು ನಮ್ಮ ಕೈಗೆ ಸಿಕ್ಕಿಲ್ಲ ಸಿಗುತ್ತಿಲ್ಲ ಎಂದು ಕುಟುಂಬಸ್ಥರು ಆರೋಪ ಮಾಡಿದ್ದಾರೆ. ಕ್ರಿಕೆಟ್ ವಿಚಾರಕ್ಕೆ ಕೊಲೆ ಮಾಡಿರಬಹುದು ಎಂದು ಸಂಬಂಧಿಕರು ಅನುಮಾನ ಪಟ್ಟಿದ್ದು, ಪೊಲೀಸರು ಸರಿಯಾಗಿ ತನಿಖೆ ಮಾಡಬೇಕು. ದಿವ್ಯಾ ಕುಮಾರ್ ಸಾವಿಗೆ ನ್ಯಾಯ ಕೊಡಿಸಬೇಕು ಎಂದು ಆಗ್ರಹಿಸಿದ್ದಾರೆ.

## ಕಾಂಕ್ರೀಟ್ ಮಿಕ್ಸರ್ ಲಾರಿ

ಕಾಂಕ್ರಿಟ್ ಲಾರಿ ಕಾರಿನ ಮೇಲೆ ಬಿದ್ದ ಪರಿಣಾಮ ಕಾರಿನೊಳಗೆ ಇಬ್ಬರು ಸಿಲುಕಿಕೊಂಡು ನರಳಾಡಿದ್ದರು. ತಮ್ಮನು ರಕ್ಷಿಸುವಂತೆ ಕೈ ಬೀಸಿ ಕೂಗಿಕೊಂಡರು. ಕೂಡಲೇ ಸಾರ್ವಜನಿಕರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಕಾರಿನಲ್ಲಿದ್ದ ಇಬ್ಬರನ್ನು ಹೊರತೆಗೆದು ರಕ್ಷಿಸಿದ್ದಾರೆ. ಬೆಳಗಾವಿ ನಗರ ಹೊರವಲಯದ ಕೆಎಲ್‌ಇ ಆಸ್ಪತ್ರೆ ಬಳಿ ಈ ಭೀಕರ ಅಪಘಾತ ಸಂಭವಿಸಿದ್ದು, ಕಾರು ಸಂಪೂರ್ಣ ಅಪ್ಪಚ್ಚಿಯಾಗಿದೆ. ಕೆಎ –25 ಎಂಡಿ 6506 ನಂಬರಿನ ವೆಗನರ್ ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ.

## ಡಾ.ಪಂಚಾಕ್ಷರಿ ನಿಧನ

ದೇಶಭಕ್ತ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಅವರು ಕವಿ, ಬಹುಭಾಷಾ ವಾಗ್ಮಿ, ಕಥೆಗಾರ, ಪ್ರಬಂಧಕಾರ, ವಿಮರ್ಶಕ, ಅನುವಾದಕ ಎಂದು ಹೆಸರುವಾಸಿಯಾಗಿದ್ದಾರೆ.

ಹಿರೇಮಠ ಅವರ ಅಂತಿಮ ಸಂಸ್ಕಾರವನ್ನು ಇಂದು (ಮಾರ್ಚ್ 15) ಸಂಜೆ 4 ಗಂಟೆಗೆ ಕೊಪ್ಪಳ ಜಿಲ್ಲೆಯ ಬಿಸರಳ್ಳಿ ಗ್ರಾಮದ ತೋಟದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ವಿದ್ಯಾವಾಚಸ್ಪತಿ ಬಿರುದಾಂಕಿತರಾದ ಡಾ. ಪಂಚಾಕ್ಷರಿ ಹಿರೇಮಠ ಅವರು 19 ಕಾವ್ಯ ಸಂಕಲನಗಳು, 11 ಕಥಾ ಸಂಕಲನಗಳು, ಉರ್ದು ಮತ್ತು ಹಿಂದಿಯಿಂದ ಕನ್ನಡಕ್ಕೆ ತಂದ 8 ಅನುವಾದಿತ ಕಾದಂಬರಿಗಳು, 13 ಪ್ರಬಂಧ ಮತ್ತು ವಿಮರ್ಶೆಯ ಕೃತಿಗಳು, 7 ಚಿಂತನ ಸಾಹಿತ್ಯ ಕೃತಿಗಳು, 6 ಜೀವನ ಚರಿತ್ರೆಗಳು, 3 ಪತ್ರ ಸಾಹಿತ್ಯ ಕೃತಿಗಳು, 2 ಚರಿತ್ರೆಗಳು, 7 ಮಕ್ಕಳ ಸಾಹಿತ್ಯ ಕೃತಿಗಳು, 5 ಅನುವಾದಿತ ನಾಟಕಗಳು, ಸಂಪಾದನೆಯ 8 ಕೃತಿಗಳು, ಹಿಂದಿ, ತೆಲುಗು ಹಾಗೂ ಆಂಗ್ಲ ಭಾಷೆಗೆ ಭಾಷಾಂತರಗೊಂಡ 8 ಕೃತಿಗಳು ಸೇರಿ 100ಕ್ಕೂ ಹೆಚ್ಚು ಉಪಯುಕ್ತ ಕೃತಿಗಳನ್ನು ಸಾರಸ್ವಲೋಕಕ್ಕೆ ಕೊಡುಗೆ ನೀಡಿದ್ದಾರೆ. ಅವರ ಹಲವಾರು ಕೃತಿಗಳು ವಿದೇಶಿ ಭಾಷೆಗಳಲ್ಲಿ ಅನುವಾದಗೊಂಡಿರುವುದು ವಿಶೇಷ ಎನ್ನಬಹುದು.ಸಿಎಂ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು ಹಿರಿಯ ಸಾಹಿತಿ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

## ಸ್ಥಾಪಿಸಲು ಮನವಿ

ದೇಶಿ – ವಿದೇಶಿ ಪ್ರವಾಸಿಗರು ಬರುತ್ತಾರೆ. ಈ ಪೈಕಿ ವರ್ಷಕ್ಕೆ ಮೂರು ಲಕ್ಷ ವಿದೇಶಿ ಪ್ರವಾಸಿಗರು ಬರುತ್ತಾರೆ. ಈ ಪ್ರವಾಸಿಗರ ರಕ್ಷಣೆ, ಭದ್ರತೆ ದೃಷ್ಟಿಯಿಂದ ಪ್ರತ್ಯೇಕ ಪೊಲೀಸ್ ಠಾಣೆ ಅಗತ್ಯವಾಗಿದೆ. ಈ ಹಿಂದೆ ನಾನು ರಾಜ್ಯದ ಪ್ರವಾಸೋದ್ಯಮ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ಸಂದರ್ಭದಲ್ಲಿ ಪ್ರವಾಸಿಗರ ರಕ್ಷಣೆ ದೃಷ್ಟಿಯಿಂದ ಹಂಪಿಯಲ್ಲಿ ಪ್ರತ್ಯೇಕ ಪೊಲೀಸ್ ಉಪ ವಿಭಾಗ ಕಚೇರಿ ಸ್ಥಾಪಿಸಲಾಗಿತ್ತು. ವ್ಯಾಪ್ತಿಯಲ್ಲಿನ ಪ್ರವಾಸಿ ಸ್ಥಳಕ್ಕೆ ನಿತ್ಯ ಗಸ್ತು ತಿರುಗಲು ಪೊಲೀಸ್ ಸಿಬ್ಬಂದಿಗೆ ದ್ವಿಚಕ್ರವಾಹನಗಳ ವ್ಯವಸ್ಥೆಯೂ ಮಾಡಲಾಗಿತ್ತು. ಆದರೆ, ನಮ್ಮ ಸರ್ಕಾರದ ಬಳಿಕ ಅಧಿಕಾರಕ್ಕೆ ಬಂದ ಸರ್ಕಾರ ಈ ಪೊಲೀಸ್ ವಿಭಾಗ ಕಚೇರಿಯನ್ನು ಬೇರೆಡೆಗೆ ಸ್ಥಳಾಂತರಿಸಿತು. ಇದರಿಂದ ಹಂಪಿ – ಆನೆಗೊಂದಿ ಭಾಗದಲ್ಲಿ ಪ್ರವಾಸಿಗರ ಸುರಕ್ಷತೆಗೆ ಆತಂಕ ಎದುರಾಗಿದೆ ಎಂದು ರೆಡ್ಡಿ ವಿವರಿಸಿದರು.

ದೇಶದ ಮಾನ ಹರಾಜು: ಇತ್ತೀಚೆಗೆ ಆನೆಗೊಂದಿ ಸಮೀಪದ ಸಣಾಪುರದಲ್ಲಿ ನಡೆದ ಇಸ್ರೇಲಿ ಮಹಿಳೆಯ ಮೇಲೆ ನಡೆದ ಅತ್ಯಾಚಾರ ಮತ್ತು ಒಡಿಶಾ ವ್ಯಕ್ತಿಯ ಕೊಲೆಯ ಹೀನ ಕೃತ್ಯದಿಂದಾಗಿ ಕೇವಲ ಕರ್ನಾಟಕ ಮಾತ್ರವಲ್ಲ, ಇಡೀ ದೇಶ ಅಂತಾರಾಷ್ಟ್ರೀಯ ಮಟ್ಟದ ಸಮುದಾಯದ ಮುಂದೆ ತಲೆತಗ್ಗಿಸುವಂತಾಗಿದೆ. ಈ ಪ್ರಕರಣ, ಪ್ರಸ್ತುತ ಪರಿಸ್ಥಿತಿಯ ಗಂಭೀರತೆ ಪ್ರತಿಬಿಂಬಿಸುತ್ತದೆ. ಇಂತಹ ಘಟನೆ ಮರುಕಳಿಸದಂತೆ ಜಾಗೃತಿ ವಹಿಸಲು ತಕ್ಷಣಕ್ಕೆ ಹಂಪಿಯಲ್ಲಿ ಪೊಲೀಸ್ ಉಪ ವಿಭಾಗ ಕಚೇರಿ, ಆನೆಗೊಂದಿಯಲ್ಲಿ ಪ್ರತ್ಯೇಕ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವಂತೆ ರೆಡ್ಡಿ ಅವರು ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದರು.

ಸಿಎಂ ಅಭಯ: ಇದಕ್ಕೆ ಸ್ಪಂದಿಸಿದ ಸಿಎಂ ಸಿದ್ದರಾಮಯ್ಯ, ರಾಜ್ಯದ ಯಾವುದೇ ಪ್ರವಾಸಿ ತಾಣಕ್ಕೆ ಬರುವ ಪ್ರವಾಸಿಗರ ಭದ್ರತೆ, ಸುರಕ್ಷತೆಯು ನಮ್ಮ ಸರ್ಕಾರದ ಮೊದಲ ಆದ್ಯತೆ. ಹೀಗಾಗಿ ಹಂಪಿಯಲ್ಲಿ ಉಪ ವಿಭಾಗ, ಆನೆಗೊಂದಿಯಲ್ಲಿ ಪ್ರತ್ಯೇಕ ಠಾಣೆ ಸ್ಥಾಪನೆಯ ವಿಚಾರದ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು. ಗೃಹಸಚಿವ ಜಿ. ಪರಮೇಶ್ವರ್ ಹಾಗೂ ಕಾನೂನು ಸಚಿವ ಹೆಚ್ ಕೆ ಪಾಟೀಲ್ ಅವರೊಂದಿಗೆ ಚರ್ಚಿಸಿ ಆದಷ್ಟು ತ್ವರಿತವಾಗಿ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಸಿಎಂ ಭರವಸೆ ನೀಡಿರುವುದಾಗಿ ಜನಾರ್ದನ ರೆಡ್ಡಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಶಾಸಕರಾದ ಹೆಚ್ ಆರ್ ಗವಿಯಪ್ಪ ವಿಜಯನಗರ, ಎನ್ ಟಿ ಶ್ರೀನಿವಾಸ್ ಕೂಡ್ಲಿಗಿ ಸೇರಿದಂತೆ ಇತರರು ಇದ್ದರು.

## ಕಂಗ್ರಾಜುಲೇಷನ್' ಎಂದಿದ್ದ ಮೋದಿ

ಎಂದ ಅವರು 2–3 ನಿಮಿಷ ನನ್ನ ಬಿಡಲಿಲ್ಲ. ಅದಾದ ಮೇಲೆ ಸಂತೋಷ್ ಅವರು ಹೇಳಿದರು 'ನಿಮಗೆ ಲಾಟ್ರಿ ಹೊಡಿತು ಹೋಗ್ರೀ' ಅಂತ. ನನಗೆ ಗೊತ್ತಾಗಲಿಲ್ಲ ಏನು ಲಾಟರಿ ಅಂತ". "ಅಲ್ಲಿ ಜೆಡಿಎಸ್‌ನಿಂದ ಮಂತ್ರಿ ಮಾಡುವುದು ಅಂತ ಗೊತ್ತಿತ್ತು. ಅವರಿಬ್ಬರನ್ನೂ ಹೊರತುಪಡಿಸಿ ನನ್ನನ್ನು ಭಾರತ ಸರ್ಕಾರದಲ್ಲಿ ಮಂತ್ರಿ ಮಾಡಿ ಜಲಶಕ್ತಿ ಮತ್ತು ರೈಲ್ವೆ ಇಲಾಖೆಯಂತ ಉತ್ತಮವಾದ ಇಲಾಖೆಯನ್ನು ಕೊಡಿಸುವುದಕ್ಕೆ ಕಾರಣಕರ್ತರು ಈ ತುರುವೇಕೆರೆ ಮಹಾಜನತೆ. 8 ಕ್ಷೇತ್ರದಲ್ಲಿ 50 ಸಾವಿರ ಲೀಡ್ ಕೊಟ್ಟಿದ್ದೀರಿ. ನನ್ನ ಜೀವಮಾನ ಇರುವ ತನಕ, ನನ್ನ ಕೊನೆಯ ಉಸಿರು ಇರುವ ತನಕ ಈ ತಾಲೂಕಿಗೆ ನನ್ನಿಂದ ಆಗುವುದಿದ್ದರೆ ಒಳ್ಳೆಯದು ಮಾಡುತ್ತೇನೆ. ಎಂದೂ ಕೂಡ ರಾಜಕಾರಣ ಮಾಡವುದಿಲ್ಲ. ನಿಮಗೆ ನಾನು ಕೋಟಿ ಕೋಟಿ ನಮನ ಸಲ್ಲಿಸುತ್ತೇನೆ" ಎಂದು ಧನ್ಯತಾ ಭಾವದಿಂದ ನಮಸ್ಕರಿಸಿದರು.

ಮಹಾಲಕ್ಷ್ಮೀ ಲೇಔಟ್ ವಿಧಾನಸಭಾ ಕ್ಷೇತ್ರವ್ಯಾಪ್ತಿಯಲ್ಲಿನ ನ್ಯಾಯಬೆಲೆ ಅಂಗಡಿಗಳಲ್ಲಿ ಸರ್ವರ್ ಸಮಸ್ಯೆ ಕಾಣಿಸಿಕೊಂಡಿದ್ದು, ಬಿಪಿಎಲ್ ಕಾರ್ಡುದಾರರು ರೇಶನ್ ಪಡೆಯಲು ಪರದಾಡುವಂತಾಗಿದೆ. ಈ ಸಂದರ್ಭದಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ ದಿಢೀರ್ ಭೇಟಿ ನೀಡಿದ ಸ್ಥಳೀಯ ಶಾಸಕರಾದ ಕೆ. ಗೋಪಾಲಯ್ಯರವರು ಈಗಾಗಲೇ 3 – 4 ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿದ್ದು, ಎಲ್ಲ ಅಂಗಡಿಗಳಲ್ಲಿಯೂ ಸರ್ವರ್ ಸಮಸ್ಯೆಯಿಂದಾಗಿ ಪ್ರತಿ ನ್ಯಾಯಬೆಲೆ ಅಂಗಡಿಗಳಲ್ಲಿ ಸುಮಾರು 200 ಕ್ಕೂ ಹೆಚ್ಚು ಜನ ಸರತಿಯಲ್ಲಿ ಬೆಳಿಗ್ಗೆಯಿಂದ ಕಾಯುತ್ತಿದ್ದಾರೆ. ಇವರಲ್ಲಿ ಬಹುಪಾಲು ದಿನಗೂಲಿ ನೌಕರರು, ಗಾರ್ಮೆಂಟ್ಸ್ ನೌಕರರು, ಆಟೋ ಚಾಲಕರುಗಳಿದ್ದು ಕೆಲಸಕ್ಕೂ ಹೋಗಲು ಆಗುತ್ತಿಲ್ಲ ರೇಶನ್ ಕೂಡ ಸಿಗುತ್ತಿಲ್ಲದೆ ಪರದಾಡುವಂತಾಗಿದೆ. ತಕ್ಷಣವೇ ಈ ಸಮಸ್ಯೆಯನ್ನು ಸರಿಪಡಿಸಬೇಕೆಂದು ಇಲಾಖೆಯ ಅಧಿಕಾರಿಗಳಿಗೆ ಆಗ್ರಹಿಸಿದರು.

## ಮಾಹಿತಿ ಇಲ್ಲ: ಪರಂ

ಸಿಸಿಟಿವಿ ಫೂಟೇಜ್ ಸೇರಿದಂತೆ ಕೆಲ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ ಎಂದು ಹೇಳಿದರು.

ಈ ಮೊದಲು ಪ್ರಕರಣವನ್ನು ಸಿಐಡಿ ತನಿಖೆಗೆ ಸೂಚಿಸಲಾಗಿತ್ತು. ತನಿಖೆ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ. ತನಿಖೆ ನಂತರ ನಮಗೆ ಮಾಹಿತಿ ನೀಡುತ್ತಾರೆ ಎಂದರು.

## 3 ಆನೆ ಸೆರೆ ಕಾರ್ಯಾಚರಣೆ

ಮತ್ತು ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿ, ಆನೆಗಳ ಸಂಚಾರದ ಮಾಹಿತಿ ಬಂದ ಕೂಡಲೇ ಸ್ಪಂದಿಸುವಂತೆ ಈಶ್ವರ ಖಂಡ್ರೆ ಸೂಚಿಸಿದರು.

**ತೋಟದ ಸಿಬ್ಬಂದಿಗೆ ತರಬೇತಿ:** ಬೇಲೂರು ಭಾಗದ ಜನರಿಗೆ, ತೋಟದ ಕಾರ್ಮಿಕರಿಗೆ ಆನೆಗಳ ಸ್ವಭಾವ, ಆನೆ ಬಂದಾಗ ಏನೆಲ್ಲಾ ಮುಂಜಾಗರೂಕತಾ ಕ್ರಮ ವಹಿಸಬೇಕು, ಹೇಗೆ ನಡೆದುಕೊಳ್ಳಬೇಕು, ಸಂಜೆ ಮತ್ತು ಬೆಳಗಿನ ವೇಳೆ ಓಡಾಡುವಾಗ ಕೈಗೊಳ್ಳಬೇಕಾದ ಎಚ್ಚರಿಕೆ ಇತ್ಯಾದಿಗಳ ಬಗ್ಗೆ ಜಾಗೃತಿ ಮೂಡಿಸಲು ತೋಟದ ಮಾಲೀಕರ ಸಹಕಾರ ಪಡೆದು ಜಾಗೃತಿ ಮೂಡಿಸಲು ಮತ್ತು ಗ್ರಾಮಮಟ್ಟದಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಲೂ ಆದೇಶ ನೀಡಿದರು.

ಇಟಿಎಫ್ ಸಿಬ್ಬಂದಿಗೆ ಅಗತ್ಯ ಸೌಲಭ್ಯ:

ಆನೆ ಕಾರ್ಯಪಡೆ ಮತ್ತು ಎಡಿಸಿ ಹೊರಗುತ್ತಿಗೆ ಸಿಬ್ಬಂದಿಗೆ ತಿಂಗಳು ತಿಂಗಳು ವೇತನ, ಆನೆ ಕಾರ್ಯಪಡೆಯ ಸಿಬ್ಬಂದಿಗೆ ಆಹಾರಭತ್ಯೆ, ಸಮವಸ್ತ್ರ, ಶೂ, ಜಾಕೆಟ್ ಹಾಗೂ ವಿಮಾ ಸೌಲಭ್ಯ ನೀಡುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳುವಂತೆ ಮತ್ತು ಮೊಬೈಲ್ ಸಿಗ್ನಲ್ ದೊರಕದ ಕಡೆಗಳಲ್ಲಿ ಆನೆ ಕಾರ್ಯಪಡೆ ಸಿಬ್ಬಂದಿಗೆ ವಾಕಿ ಟಾಕಿ ನೀಡುವಂತೆಯೂ ಈಶ್ವರ ಖಂಡ್ರೆ ಸೂಚಿಸಿದರು. ಸಭೆಯಲ್ಲಿ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕರಾದ ಸುಭಾಷ್ ಮಾಲ್ಕಡೆ ಮತ್ತು ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

# ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಸುಗಮವಾಗಿ ನಡೆಸಲು ಸಿದ್ಧತೆ

**ಮಾಲೂರು:** ಮಾರ್ಚ್21 ರಿಂದ ನಡೆಯಲಿರುವ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಉತ್ತಮ ಫಲಿತಾಂಶಕ್ಕಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ಇಲಾಖೆಯ ಸುತ್ತೋಲೆ ಅನ್ವಯ ಶಾಲೆಗಳಲ್ಲಿ ಬೋಧನೆ ಹಾಗೂ ವಿಶೇಷ ತರಗತಿಗಳು ರಾತ್ರಿ ಶಾಲೆ ನಡೆಸುವುದರ ಮೂಲಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜು ಗೊಳಿಸಲಾಗುತ್ತಿದೆ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಯು ಸುಗಮವಾಗಿ ನಡೆಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಬಿಇಓ ಎಚ್. ಎಸ್ ಚಂದ್ರಕಲಾ ತಿಳಿಸಿದ್ದಾರೆ.



ರಾಜ್ಯಾದ್ಯಂತ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯು ಮಾರ್ಚ್ 21 ರಿಂದ ಏಪ್ರೀಲ್ 4ರವರೆಗೆ ತಾಲ್ಲೂಕಿನಲ್ಲಿ 20ಸರ್ಕಾರಿ ಪ್ರೌಢ ಶಾಲೆಗಳು, 6 ಅನುದಾನಿತ ಶಾಲೆಗಳು, 6 ವಸತಿ ಶಾಲೆಗಳು, 27 ಅನುದಾನ ರಹಿತ ಪ್ರೌಢ ಶಾಲೆಗಳಿಂದ 1,596 ಬಾಲಕರು, 1553 ಬಾಲಕಿಯರು, ಸೇರಿದಂತೆ ಒಟ್ಟು 3149 ವಿದ್ಯಾರ್ಥಿಗಳು ಪಟ್ಟಣದಲ್ಲಿ 5 ಪರೀಕ್ಷಾ ಕೇಂದ್ರಗಳು, ಮಾಸ್ತಿ, ಟೇಕಲ್, ಲಕ್ಕೂರು, ತಲಾ ಒಂದೊಂದು ಪರೀಕ್ಷಾ ಕೇಂದ್ರಗಳು ಸೇರಿದಂತೆ ಒಟ್ಟು 8 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲಿದ್ದಾರೆ, ಉತ್ತಮ ಫಲಿತಾಂಶಕ್ಕಾಗಿ ಶಿಕ್ಷಣ ಇಲಾಖೆಯ ಸರ್ಕಾರದ ಸುತ್ತೋಲೆ ಅನ್ವಯ ಈಗಾಗಲೇ ಪರೀಕ್ಷೆಯ ಒತ್ತಡ ಮತ್ತು ಭಯ ನಿವಾರಣೆಗಾಗಿ ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ವಿದ್ಯಾರ್ಥಿಗಳ ಆಪ್ತ ಸಮಾಲೋಚನೆ ಸಭೆಗಳು ನಡೆಸಲಾಗಿದೆ, ತಿಂಗಳಿಗೆರಡು ಬಾರಿ ಪೋಷಕರ ಮತ್ತು ತಾಯಂದಿರ ಸಭೆಗಳನ್ನು ಏರ್ಪಡಿಸಿ ಮಕ್ಕಳ ಶೈಕ್ಷಣ ಕ ಪ್ರಗತಿಯನ್ನು ಮನವರಿಕೆ ಮಾಡಿಕೊಡಲಾಗಿದೆ. ಪೋಷಕರ ಜವಾಬ್ದಾರಿಯ ಬಗ್ಗೆ ತಿಳಿಸಲಾಗಿದೆ.

ವಿದ್ಯಾರ್ಥಿಗಳನ್ನು ವಿಷಯವಾರು ಶಿಕ್ಷಕರು ದತ್ತು ಪಡೆದು ಓದಿಸುವುದು ವಿದ್ಯಾರ್ಥಿಗಳ ಹಾಗೂ ಶಿಕ್ಷಕರಿಗೆ ಶೈಕ್ಷಣ ಕ ಕಾರ್ಯಗಾರ ಶಾಲಾ ಹಂತದಲ್ಲಿ ಪೂರ್ವಸಿದ್ಧತಾ ಪರೀಕ್ಷೆಗಳನ್ನು ಸಹ ನಡೆಸಲಾಗಿದೆ ಆಯಾ ಶಾಲೆಗಳಲ್ಲಿ ಸಂಜೆ ಬೆಳಿಗ್ಗೆ ವಿಶೇಷ ತರಗತಿಗಳು, ರಾತ್ರಿ ವೇಳೆ ಓದಿಸಲು ರಾತ್ರಿ ತರಗತಿಗಳು ಮಾಡಲಾಗುತ್ತಿದೆ, ವಿದ್ಯಾರ್ಥಿಗಳಿಗೆ ಪರೀಕ್ಷಾ ಮಂಡಳಿಯ ಪ್ರಕಟಿಸಿರುವ 4 ಸೆಟ್ ಮಾದರಿ ಪ್ರಶ್ನೆ ಪತ್ರಿಕೆ ನೀಡಿ ಪುನರಾವರ್ತನೆ ಮಾಡಲಾಗಿದೆ, ರಾಜ್ಯಮಟ್ಟದ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಿ ವಿಶೇಷ ರೀತಿಯಲ್ಲಿ ಪರೀಕ್ಷೆಗೆ ತಯಾರು ಮಾಡಲಾಗಿದೆ. ವಿದ್ಯಾರ್ಥಿಗಳ ವಿಷಯಾಧಾರಿತ ಬಗ್ಗೆ ಸಂಶಯಗಳನ್ನು ಪರಿಹರಿಸಿಕೊಳ್ಳಲು ವಿಷಯ ತಜ್ಞರಿಂದ ಡೌಟ್ ಆನ್ ಲೈನ್ ಕಾಲ್ ಎಂಬ ಕಾರ್ಯಕ್ರಮವನ್ನು ಸಹ ಏರ್ಪಡಿಸಲಾಗಿತ್ತು, ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಕಲಿಕೆಯಲ್ಲಿ ಮುಂದುವರೆದ ಮಕ್ಕಳ ಜೊತೆಗೆ ಹೊಂದಿಸಿ ಬಡ್ಡಿಪೇರಿಂಗ್ ವ್ಯವಸ್ಥೆಯ ಮೂಲಕ ವಿಷಯವಾರು ಅಭ್ಯಾಸ ಮಾಡಿಸಲಾಗುತ್ತಿದೆ.

ಕಳೆದ ಬಾರಿ 77 ಫಲಿತಾಂಶ ಬಂದಿತು, ಪ್ರಸಕ್ತ ವರ್ಷ 100 ರಷ್ಟು ಫಲಿತಾಂಶಕ್ಕಾಗಿ ಶಿಕ್ಷಕರು ಆಯಾ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ರೀತಿಯಲ್ಲಿ ವಿಷಯವಾರು ತರಬೇತಿ ನೀಡಿ ಸಜ್ಜುಗೊಳಿಸುತ್ತಿದ್ದಾರೆ.

ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ರೀತಿಯ ನಕಲು ಆಗದಂತೆ ತಡೆಗಟ್ಟುವ ಸಲುವಾಗಿ ಸಿಸಿ ಕ್ಯಾಮೆರಾ ಅಳವಡಿಕೆ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಪಾವಿತ್ರತೆ ಕಾಪಾಡಲು ಹಾಗೂ ಶಿಸ್ತಿನಿಂದ ಪರೀಕ್ಷೆ ನಡೆಸಲು ಶಿಕ್ಷಣ ಇಲಾಖೆಯು ಅನ್ಯ ಇಲಾಖೆ ಅಧಿಕಾರಿಗಳು ಪರೀಕ್ಷಾ ಕೇಂದ್ರಗಳಲ್ಲಿ ನಿಯೋಜಿಸಿದ್ದಾರೆ ಪರೀಕ್ಷಾ ಮಂಡಳಿ ಪ್ರಶ್ನೆ ಪತ್ರಿಕೆಯು ಸಹ ಶ್ರೇಣ ಆಧಾರದಲ್ಲಿ ವಿಭಿನ್ನ ರೀತಿಯಲ್ಲಿ ಪ್ರಶ್ನೆ ಪತ್ರಿಕೆ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರಗಳಲ್ಲಿ ನೀಡಲಾಗುವುದು, ಈಗಾಗಲೇ ಶಾಲೆಗಳಿಗೆ ಭೇಟಿ ನೀಡಿ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಪರೀಕ್ಷೆ ಎದುರಿಸುವ ಬಗ್ಗೆ ಆತ್ಮವಿಶ್ವಾಸ ತುಂಬುವ ಮೂಲಕ ಅವರ ಸಮಸ್ಯೆಗಳನ್ನು ಆಲಿಸಿ, ವಿಷಯಾಧಾರಿತ ಶಿಕ್ಷಕರು ವಿದ್ಯಾರ್ಥಿಗಳ ಸಂಶಯಗಳನ್ನು ಬಗೆಹರಿಸಲು ಸೂಚಿಸಲಾಗಿದೆ. ಪ್ರತಿನಿತ್ಯ ಬೆಳಗ್ಗೆ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತರಗತಿ ಶಿಕ್ಷಕರು ಫೋನ್ ಮೂಲಕ ಕರೆ ಮಾಡಿ ಅಭ್ಯಾಸ ಮಾಡಲು ತಿಳಿಸಲಾಗುತ್ತಿದೆ. ಒಟ್ಟಾರೆ ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳ ಮಾಡಲು ಎಲ್ಲಾ ಕ್ರಮಗಳನ್ನು ಕೈಗೊಂಡು ವಿದ್ಯಾರ್ಥಿಗಳನ್ನು ಪರೀಕ್ಷೆಗಾಗಿ ಸಜ್ಜುಗೊಳಿಸಲಾಗುತ್ತಿದೆ ಎಂದರು.

# ಶ್ರೀಮತ್ಕಲ್ಯಾಣ ಬ್ರಹ್ಮರಥೋತ್ಸವ



**ಶಿಡ್ಲಘಟ್ಟ:** ತಾಲ್ಲೂಕಿನ ಚಿಕ್ಕದಾಸರಹಳ್ಳಿಯ ಗುಟ್ಟದ ಮೇಲೆ ನೆಲೆಸಿರುವ ಪುರಾಣ ಐತಿಹಾಸಿಕವಾಗಿ ಪ್ರಸಿದ್ದಿಯಾದ ಶ್ರೀದೇವಿ ಭೂದೇವಿ ಸಮೇತ ಶ್ರೀಬ್ಯಾಟರಾಯಸ್ವಾಮಿಯ 93ನೇ ವರ್ಷದ ಶ್ರೀಮತ್ಕಲ್ಯಾಣ ಬ್ರಹ್ಮರಥೋತ್ಸವ ಸಡಗರ ಸಂಭ್ರಮ ಭಕ್ತಿಭಾವದಿಂದ ನೆರವೇರಿತು.

ಗುಟ್ಟದ ಮೇಲೆ ನೆಲೆಸಿರುವ ಶ್ರೀದೇವಿ ಭೂದೇವಿ ಸಮೇತ ಶ್ರೀಬ್ಯಾಟರಾಯಸ್ವಾಮಿ ದೇವಾಲಯಕ್ಕೆ ಬರೋ ಬರಿ ಒಂದು ಸಾವಿರ ವರ್ಷಗಳಷ್ಟು ಇತಿಹಾಸವಿದೆ, ವಿಜಯನಗರ ಅರಸರ ಕಾಲದಲ್ಲಿ ನಿರ್ಮಾಣವಾದ ದೇವಾಲಯ ಎಂಬ ಇತಿಹಾಸವಿರುವ ಪುರಾತನವಾದ ದೇವಾಲಯ ಗಳಲ್ಲಿ ಇದೊಂದು ದೇವಾಲಯ. ಶ್ರೀದೇವಿ ಭೂದೇವಿ ಸಮೇತ ಶ್ರೀಬ್ಯಾಟರಾಯ ಸ್ವಾಮಿಯ 93ನೇ ವರ್ಷದ ಶ್ರೀಮತ್ಕಲ್ಯಾಣ ಬ್ರಹ್ಮರಥೋತ್ಸವ ಹೋಳಿ ಹುಣ್ಣಿಮೆ ದಿನದಂದು ನಡೆಯಿತು.

ಶಾಸಕರಾದ ಬಿ.ಎನ್.ರವಿಕುಮಾರ್, ತಹಸಿಲ್ದಾರ್ ಬಿನ್. ಸ್ವಾಮಿ ರವರು ರಥೋತ್ಸವಕ್ಕೆ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ರಾಜೀವ್ ಗೌಡ, ಆಂಜನಪ್ಪ(ಪುಟ್ಟು), ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಸಹನಾ ರಾಜೀವ್ ಗೌಡ, ಸಮಾಜಸೇವಕ ವರ್ತೂರುಮಂಜುನಾಥ್ ರವರು ರಥೋತ್ಸವದಲ್ಲಿ ಪಾಲ್ಗೊಂಡು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಇದೇ ವೇಳೆ ಕಾಂಗ್ರೇಸ್ ಮುಖಂಡ ರಾಜೀವ್ ಗೌಡ ಅವರು ಬ್ಯಾಟರಾಯಸ್ವಾಮಿ ದೇವಾಲಯ ಅಭಿವೃದ್ಧಿಗೆ 50 ಸಾವಿರ ರೂ.ಗಳ ಚೆಕ್ ವಿತರಣೆ ಮಾಡಿದರು.

ವರ್ತೂರು ಮಂಜುನಾಥ್ ಅವರು ರಥಕ್ಕೆ ಹೂವಿನ ಅಲಂಕಾರ ಸೇವೆಯನ್ನು ಏರ್ಪಡಿಸಿದ್ದರು. ತಮಟೆ, ಮಂಗಳವಾದ್ಯ ಹಾಗೂ ವೀರಗಾಸೆ ಜಾತ್ರೆಯಲ್ಲಿ ಭಕ್ತಾದಿಗಳ ಗಮನ ಸೆಳೆಯಿತು.

ರಾಜ್ಯದ ನಾನಾ ಕಡೆಯಿಂದ ಆಗಮಿಸಿದ್ದ ಸಹಸ್ರಾರು ಭಕ್ತರು ಬ್ರಹ್ಮರಥೋತ್ಸವಕ್ಕೆ ಸಾಕ್ಷಿಯಾಗಿ ಭಗವಂತನ ಕೃಪೆಗೆ ಪಾತ್ರರಾದರು. ವಿಶೇಷ ಹೂಗಳಿಂದ ಅಲಂಕರಿಸಿ ಪೂಜೆ , ಮಹಾಮಂಗಳಾರತಿ ಮಾಡಿ ತೀರ್ಥ ಪ್ರಸಾದವನ್ನು ವಿನಿಯೋಗಿಸಿದ ನಂತರ ಉತ್ಸವ ಮೂರ್ತಿಯನ್ನು ಅಲಂಕೃತ ರಥದ ತೇರಿನಲ್ಲಿ ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ನೆರೆದಿದ್ದ ಭಕ್ತರು ರಥದ ಚೈನನ್ನು ಹಿಡಿದೆಳೆದು ಭಗವಂತನಿಗೆ ಜೈಕಾರ ಹಾಕುವ ಮೂಲಕ ಭಕ್ತಿಭಾವದಲ್ಲಿ ಮಿಂದೆದ್ದರು. ದವಣ, ಬಾಳೆ ಹಣ್ಣನ್ನು ತೇರಿನ ತುತ್ತ ತುದಿಯಲ್ಲಿನ ಕಳಶಕ್ಕೆ ಎಸೆದು ತಮ್ಮ ಇಷ್ಟಾರ್ಥಗಳು ಈಡೇರಲೆಂದು ಭಗವಂತನಲ್ಲಿ ಕೈ ಮುಗಿದು ಪ್ರಾರ್ಥಿಸಿದರು. ದೇವಾಲಯದ ಸುತ್ತಲೂ ರಥದ ತೇರಿನ ಪ್ರದಕ್ಷಿಣೆ ನಡೆಸಲಾಯಿತು.

ಅನಾದಿಕಾಲದಿಂದಲೂ ಬ್ರಹ್ಮರಥೋತ್ಸವದಂದು ಸ್ವಾಮಿಯ ದರ್ಶನಕ್ಕೆ ಆಗಮಿಸಿದ ಭಕ್ತರಿಗೆ ಮಳಮಾಚನಹಳ್ಳಿ, ಚಿಕ್ಕದಾಸರಹಳ್ಳಿ, ಮುಗಲಡಪಿ, ದೊಡ್ಡದಾಸರಹಳ್ಳಿ, ಬೋದಗೂರು, ಕೊತ್ತನೂರು ಸುತ್ತ ಮುತ್ತಲಿನ ಗ್ರಾಮಸ್ಥರು ಮಜ್ಜಿಗೆ ಪಾನಕ ಹೆಸರು ಬೇಳೆಯನ್ನು ವಿತರಿಸಿದರು. ಸಾಮೂಹಿಕ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು.

ಜಾತ್ರೆ ಅಂಗವಾಗಿ ಬರಗು ಬತಾಸು ಜಿಲೇಬಿ ಮೈಸೂರು ಪಾಕು, ಕಬ್ಬಿನ ಹಾಲು, ಮಕ್ಕಳ ಆಟಿಕೆ ಹೆಣ್ಣು ಮಕ್ಕಳ ಶೃಂಗಾರದ ವಸ್ತುಗಳ ಅಂಗಡಿಗಳು ತಲೆ ಎತ್ತಿದ್ದವು. ಬಿಸಿಲ ಬೇಗೆಯನ್ನು ತಣಿಸುವ ಐಸ್ ಕ್ರೀಂ, ಕಲ್ಲಂಗಡಿ ಹಣ್ಣಿನ ಅಂಗಡಿ ಸೇರಿ ಹಣ್ಣಿನ ಜ್ಯೂಸ್ ಅಂಗಡಿಗಳು ಸಾಕಷ್ಟಿದ್ದವು.

ಈ ಸಂದರ್ಭದಲ್ಲಿ ಶಾಸಕರಾದ ಬಿ.ಎನ್. ರವಿಕುಮಾರ್, ಕಾಂಗ್ರೆಸ್ ಮುಖಂಡ ಪುಟ್ಟು ಆಂಜಿನಪ್ಪ, ರಾಜೀವ್‌ಗೌಡ, ತಹಸೀಲ್ದಾರ್ ಬಿ.ಎನ್.ಸ್ವಾಮಿ,ಪಿ.ಎಲ್.ಡಿ.ಬ್ಯಾಂಕ್ ಅಧ್ಯಕ್ಷ ಬಂಕ್ ಮುನಿಯಪ್ಪ, ನಗರಸಭೆ ಸದಸ್ಯರಾದ ಅನಿಲ್ ಕುಮಾರ್,,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಸಹನಾ ರಾಜೀವ್ ಗೌಡ, ಮುಖಂಡ ತಾದೂರು ರಘು,ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ರಾಜಶೇಖರ್, ದೇವಾಲಯದ ಅಭಿವೃದ್ಧಿ ಸಮಿತಿ ಅಧ್ಯಕ್ಷ ಬ್ಯಾಟರಾಯಶೆಟ್ಟಿ, ಸೇರಿದಂತೆ ಸಾವಿರಾರು ಭಕ್ತಾದಿಗಳು ಪಾಲ್ಗೊಂಡಿದ್ದರು.

# ಗ್ರಾಪಂ.ಅಧ್ಯಕ್ಷ ಸ್ಥಾನಕ್ಕೆ ನಾಗಮ್ಮ ಆಯ್ಕೆ

**ರಾಮನಗರ:** ತಾಲೂಕಿನ ದೊಡ್ಡಗಂಗವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕಾಗಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ನಾಗಮ್ಮ ದಾಸಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ಒಟ್ಟು 9 ಸದಸ್ಯರನ್ನು ಹೊಂದಿರುವ ಗ್ರಾಮ ಪಂಚಾಯಿತಿಯಲ್ಲಿ 9 ಸ್ಥಾನಗಳನ್ನೂ ಕಾಂಗ್ರೆಸ್ ಬೆಂಬಲಿತರೇ ಗೆದ್ದುಕೊಂಡಿದ್ದು, ಹಿಂದಿನ ಅಧ್ಯಕ್ಷ ಕೆಂಪಯ್ಯ ರಾಜೀನಾಮೆಯಿಂದ ಅಧ್ಯಕ್ಷ ಸ್ಥಾನ ತೆರವಾಗಿತ್ತು. ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಾಗಮ್ಮ ದಾಸಯ್ಯ ಒಬ್ಬರೇ ಉಮೇದುವಾರಿಕೆ ಸಲ್ಲಿಸಿದ್ದರು. ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಮಧುಮಾಲಾ ಅವರು ನಾಗಮ್ಮ ದಾಸಯ್ಯ ಅವರ ಅವಿರೋಧ ಆಯ್ಕೆಯನ್ನು ಖಚಿತಪಡಿಸಿದರು.

ಈ ಹಿಂದೆ ಕೊರಂ ಕೊರತೆ ಕಾರಣ ಅಧ್ಯಕ್ಷ ಸ್ಥಾನದ ಚುನಾವಣೆ ಮುಂದೂಡಲಾಗಿತ್ತು. ನಾಗಮ್ಮ ಅವರ ಅವಿರೋಧ ಆಯ್ಕೆಯನ್ನು ಕಾಂಗ್ರೆಸ್ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಬಳಿಕ ಮಾತನಾಡಿದ ನೂತನ ಅಧ್ಯಕ್ಷೆ ನಾಗಮ್ಮ ದಾಸಯ್ಯ ಅವರು, ಆಯ್ಕೆಗೆ ಸಹಕರಿಸಿದ ಶಾಸಕ ಎಚ್.ಸಿ.ಬಾಲಕೃಷ್ಣ, ಮಾಜಿ ಸಂಸದ ಡಿ.ಕೆ.ಸುರೇಶ್, ಮಾಜಿ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ಮಹದೇವಯ್ಯ, ಸೇರಿದಂತೆ ಜಿಲ್ಲೆಯ ಹಿರಿಯ ಮುಖಂಡರಿಗೆ ಕೃತಜ್ಞತೆ ಸಲ್ಲಿಸಿದರು. ಎಲ್ಲಾ ಸದಸ್ಯರನ್ನು ಒಗ್ಗೂಡಿಸಿಕೊಂಡು ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳನ್ನ ಒದಗಿಸಲು ಶ್ರಮಿಸುತ್ತೇನೆ. ಆದ್ಯತೆ ಮೇರೆಗೆ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವುದಾಗಿ ತಿಳಿಸಿದರು.

ಅವಿರೋಧವಾಗಿ ಆಯ್ಕೆಯಾದ ನಾಗಮ್ಮ ದಾಸಯ್ಯ ಅವರನ್ನು ಅಭಿನಂದಿಸಿ ಮಾತನಾಡಿದ ತಾಪಂ ಮಾಜಿ ಅಧ್ಯಕ್ಷ ಮಹದೇವಯ್ಯ, ಅಧಿಕಾರ ಶಾಶ್ವತವಲ್ಲ, ನಾವು ಮಾಡುವ ಕೆಲಸಗಳು ಶಾಶ್ವತವಾಗಿರುತ್ತವೆ. ಗ್ರಾಮ ಪಂಚಾಯತಿಗೆ ಇಂದು ನೇರವಾಗಿ ಉದ್ಯೋಗ ಖಾತ್ರಿ ಯೋಜನೆಯಡಿ ಸಾಕಷ್ಟು ಅನುದಾನ ಬರುತ್ತಿದೆ. ಗ್ರಾಮಗಳ ಸಮಗ್ರ ಅಭಿವದ್ಧಿಯ ಜತೆಗೆ ಜನರ ಸಮಸ್ಯೆಗಳನ್ನು ಬಗೆಹರಿಸಬೇಕು. ಮಾದರಿ ಗ್ರಾಮ ಪಂಚಾಯಿತಿ ನಿರ್ಮಿಸುವಲ್ಲಿ ಅಧ್ಯಕ್ಷರ ಜತೆ ಪ್ರತಿಯೊಬ್ಬ ಸದಸ್ಯರು ಕೈಜೋಡಿಸಬೇಕು ಎಂದರು.

ಈ ವೇಳೆ ಪಿಡಿಒ ನಾಗರಾಜ್, ಗ್ರಾಪಂ ಸದಸ್ಯರಾದ ಕೆ.ರಾಜ್ ಕುಮಾರ್, ನಂದೀಶ್, ಕೆಂಪಯ್ಯ, ಹನುಮಂತಯ್ಯ, ಲಕ್ಷ್ಮೀದೇವಮ್ಮ ಮಹದೇವಯ್ಯ, ಬಾಗ್ಯಮ್ಮ, ಶಶಿಕಲಾ ವೀರಭದ್ರಸ್ವಾಮಿ ಮುಖಂಡರಾದ ಮರಿಚನ್ನಯ್ಯ, ಬಸವಣ್ಣ, ಸೋಮಣ್ಣ, ಚನ್ನವೀರಯ್ಯ, ಡಿ.ಸಿ.ಹುಚ್ಚಪ್ಪ ಮತ್ತಿತರರು ಇದ್ದರು.



# ಶ್ರೀಲಕ್ಷ್ಮೀ ನರಸಿಂಹ ಸ್ವಾಮಿ ಬ್ರಹ್ಮರಥೋತ್ಸವ



ಮುಳಬಾಗಿಲು: ತಾಲ್ಲೂಕಿನ ಕದ್ರಿಪುರ ಗ್ರಾಮದಲ್ಲಿರುವ ಸುಪ್ರಸಿದ್ಧ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ಬ್ರಹ್ಮರಥೋತ್ಸವ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಸಾಂಪ್ರದಾಯದಂತೆ ನೆರವೇರಿತು.

ಮೂಲದೇವರಿಗೆ ಅಭಿಷೇಕ . ಹೋಮ ಹವನ. ವಿಶೇಷ ಪೂಜೆ.ಹೂವಿನ ಅಲಂಕಾರ ಮಾಡಲಾಗಿತ್ತು

ಉತ್ಸವ ದೇವರನ್ನು ರಥದಲ್ಲಿ ಕುಲ್ಲರಿಸಿ ಮಹಾಮಂಗಳಾರತಿ ಮಾಡಿದ ನಂತರ ಅಧಿಕೃತವಾಗಿ ರಥೋತ್ಸವಕ್ಕೆ ಬಿಂದು ಮಾಧವ ರಾವ್ ಚಾಲನೆ ನೀಡಿದರು

ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತಾದಿಗಳು ರಥಕ್ಕೆ ಹೂ ದವನ ಉಪ್ಪು ಮೆಣಸು ಬಾಳೆಹಣ್ಣು . ಚಲಿಸುವ ರಥಕ್ಕೆ ಅರ್ಪಿಸಿ ಹರಿಕೆ ತೀರಿಸಿಕೊಡರು. ಭಕ್ತಾದಿಗಳಿಗೆ . ಶ್ರೀನಂದಗೋಕುಲ ಸೇವಾ ಟ್ರಸ್ಟ್ . ಮತ್ತು ಯಾದವ ಸಂಘದವರಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು ಜಾತ್ರೆಯ ಪ್ರಯುಕ್ತ ಶಾಶ್ವತ ಅನ್ನದಾನ ಸೇವೆಯನ್ನು ಶೀಲಂಗಿಲರಿ ಸರಸಮ್ಮ ಶ್ರೀರಾಮಪ್ಪ ಕುಟುಂಬದವರಿಂದ ನಡೆಯಿತು ದೇವಾಲಯ ಮುಂಭಾಗದಲ್ಲಿ ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು.

ಕದ್ರಿಪುರ ಗ್ರಾಮದ ಮುಖಂಡ ಮಣಿ, ತಾ ಪಂ ಮಾಜಿ ಉಪಾಧ್ಯಕ್ಷ ರಾಜಪ್ಪ, ಜೆಡಿಎಸ್ ಮುಖಂಡ ರಘುಪತಿ ರೆಡ್ಡಿ, ಗ್ರಾಪಂ ಸದಸ್ಯರಾದ ಸೋಮಶೇಖರ್, ಮಂಜುನಾಥ್, ಪಿಎಲ್‌ಡಿ ಬ್ಯಾಂಕ್, ಸೀನಪ್ಪ. ಮುಖಂಡರಾದ ಬಾಲಕೃಷ್ಣ, ಕೃಷ್ಣಾರೆಡ್ಡಿ ಮತ್ತಿತರರು ಹಾಜರಿದ್ದರು

# ಕೈವಾರ ತಾತಯ್ಯನವರ 299ನೇ ಜಯಂತಿ



ಚೇಳೂರು: ದೇಶ ಹಾಗೂ ಪ್ರಪಂಚದಲ್ಲಿ ಮುಂದೆ ಏನೆಲ್ಲ ಆಗುತ್ತದೆ ಎಂಬ ಕಾಲಜ್ಞಾನವನ್ನು ಹೇಳುವ ಮೂಲಕ ಎಲ್ಲರನ್ನು ಅಚ್ಚರಿಪಡಿಸಿದ್ದವರು ಕೈವಾರ ತಾತಯ್ಯನವರು ಎಂದು ತಹಶಿಲ್ದಾರ್ ಶ್ರೀನಿವಾಸಲು ನಾಯುಡು ತಿಳಿಸಿದರು.

ಶುಕ್ರವಾರ ಚೇಳೂರು ಪಟ್ಟಣದ ಮಹಾತ್ಮ ಗಾಂಧಿ ವೃತ್ತದ ಬಳಿ ಹಮ್ಮಿಕೊಂಡಿದ್ದ ಕೈವಾರ ತಾತಯ್ಯ ನವರ 299 ನೇ ಜಯಂತಿಯಲ್ಲಿ ಕೈವಾರ ತಾತಯ್ಯ ಬಲಿಜ ಸಮುದಾಯದ ಮುಖಂಡರು ಸೇರಿದಂತೆ ನಾಗರೀಕರಿಂದ ಪುಷ್ಪ ನಮನ ಮತ್ತು ಪೂಜೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ತಹಶಿಲ್ದಾರ್ ಮಾತನಾಡಿ ಶ್ರೀನಿವಾಸಲು,ನಾಯ್ದು ಇವತ್ತು ಕೈವಾರ ತಾತಯ್ಯ ನಮ್ಮ ಮಧ್ಯೆ ನಮ್ಮ ನಡುವೆ ಇಲ್ಲ. ಆದರೆ, ಅವರ ತತ್ವಗಳು, ಕೀರ್ತನೆಗಳು, ವಿಚಾರಧಾರೆಗಳು ಇಂದಿಗೂ ಇವೆ. ಇದೇ ಅವರ ಜೀವಂತಿಕೆಗೆ ಸಾಕ್ಷಿ. ಕಾಲವನ್ನ ಮೀರಿ ಚಿಂತನೆ ಮಾಡುವವರಿಗೆ ಆತ ಅಮರ. ಸೂರ್ಯ– ಚಂದ್ರ ಇರುವವರಿಗೂ ಕೈವಾರ ತಾತಯ್ಯ ಇರ್ತಾರೆ ಎಂದು ಹೇಳಿದರು. ಬಳಿಕ ಕುರ್ಲಪಲ್ಲಿ ಗ್ರಾಮದ ಬಯಪ್ಪ ಸ್ವಾಮಿ,ಹಾಗೂ ಷೇರ್ ಖಾನ್ ಕೋಟೆ ಗ್ರಾಮದ ಚೌಡರೆಡ್ಡಿ ಸ್ವಾಮಿ ಸೇರಿದಂತೆ ಹಲವರು ಕೈವಾರ ತಾತಯ್ಯ ಕೀರ್ತನೆಗಳನ್ನು ಬಗ್ಗೆ ಮಾತನಾಡಿದರು. ಹಲವು ಭಜನಾ ಮಂಡಳಿಗಳಿಂದ ಕೈವಾರ ತಾತಯ್ಯ ನವರ ಸಂಕೀರ್ತನೆಗಳನ್ನು ಹಾಡಿದರು. ನೆರೆದಿದ್ದ ಭಕ್ತರಿಗೆ ಪ್ರಸಾದ ಮತ್ತು ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶಿರಸ್ತೇದಾರ್ ಸತೀಶ್,ಉಪ ತಹಶಿಲ್ದಾರ್ ಈಶ್ವರ್ ಗ್ರಾಮ ಲೆಕ್ಕಾಧಿಕಾರಿ ವೆಂಕಟೇಶ ಪಿಎಸ್ಐ ಹರೀಶ್,ಹಾಗೂ ಚೇಳೂರಿನ ಬಲಿಜ ಮುಖಂಡರು ಹಾಜರಿದ್ದರು.

# ಕುರಿಗಾಹಿ ಹತ್ಯೆ: ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಒತ್ತಾಯ

ಬಳ್ಳಾರಿ: ರಾಜ್ಯದ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಉಗಲವಾಟ ಗ್ರಾಮದ ಕುರಿಗಾಹಿ ಶರಣಪ್ಪ ಬಸಪ್ಪ ಜುಮ್ಮನಕಟ್ಟಿರವರನ್ನು ಕೊಲೆ ಮಾಡಿರುವ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಕನ್ನಡ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ಹಿತರಕ್ಷಣಾ ವೇದಿಕೆ (ರಿ) ಒತ್ತಾಯಿಸಿದೆ.

ಜಿಲ್ಲಾಧಿಕಾರಿಗಳಿಗೆ ಬರೆದ ಮನವಿ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ ಕನ್ನಡ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣಹಿತರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಭಟ್ಟಿ ಎರಿಸ್ವಾಮಿ ಮಾಧ್ಯಮದ ಜೊತೆ ಮಾತನಾಡಿ, ಕುರಿ ಕಳ್ಳತನ ಮಾಡುವ ಸಂದರ್ಭದಲ್ಲಿ ಮೂರು ಜನ ಆರೋಪಿಗಳು ಕುರಿಗಾಹಿ ಶರಣಪ್ಪ ಬಸಪ್ಪ ಜುಮ್ಮನಕಟ್ಟಿರವರನ್ನು ಕೊಲೆ ಮಾಡಿದ್ದು. ಈ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಮತ್ತು ಕುರಿಗಾರರ ಹಿತರಕ್ಷಣಾ ಕಾಯಿದೆಯನ್ನು ಜಾರಿಗೊಳಿಸಬೇಕೆಂದು ಹಾಗೂ ಹತ್ಯೆಗೀಡಾದ ಕುರಿಗಾಹಿ ಶರಣಪ್ಪ ಬಸಪ್ಪ ಜುಮ್ಮನಕಟ್ಟಿರವರ ಕುಟುಂಬಕ್ಕೆ 50 ಲಕ್ಷ ರೂ.ಗಳ ಪರಿಹಾರವನ್ನು ನೀಡಬೇಕೆಂದು ಅವರು. ಒತ್ತಾಯಿಸಿದರು ಅರಣ್ಯ ಪ್ರದೇಶದಲ್ಲಿ ಕುರಿಗಳನ್ನು ಮೇಯಿಸಲು ಸ್ಥಳವನ್ನು ಮೀಸಲಿಡಬೇಕು ಹಾಗೂ ಕುರಿಗಾಹಿಗಳಿಗೆ ಬಂದೂಕು ಲೈಸೆನ್ಸ್‌ನ್ನು ನೀಡಬೇಕೆಂದು ಒತ್ತಾಯಿಸಿದರು.

ತಮ್ಮ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾದಲ್ಲಿ ನಮ್ಮ ಸಂಘಟನೆಯ ವತಿಯಿಂದ ಉಗ್ರಹೋರಾಟಗಳನ್ನು ರೂಪಿಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ, ಸಂಘಟನೆಯ ರವಿ ಕಾರಮಂಚಿ. ವಿರುಪಾಕ್ಷಪ್ಪ, ಪಿ ಶೇಖರ್, ಅಸುಂಡಿ ಪರಮೇಶ, ಸೂರ್ಯದೇವ, ಬೆಳ್ಳಿ ಕಟ್ಟಪ್ಪ,ನಾಗರಾಜ, ಜೋಗಿಣ ಚಂದ್ರಪ್ಪ ಶಾಂತಿನಗರ ಮಲ್ಲಿ ಕೃಷ್ಣಪ್ಪ, ಆನಂದ,ದುರ್ಗೇಶ ಸೆರಿದಂತೆ ಹಲವಾರು ಜನ ಉಪಸ್ಥಿತರಿದ್ದರು



# ಸಂಪನ್ನಗೊಂಡ ಕರಗಮಹೋತ್ಸವ

ಶಿಡ್ಲಘಟ್ಟ: ನಗರದ ಬೈಪಾಸ್ ರಸ್ತೆಯ ಸಿದ್ದಾರ್ಥ ನಗರದಲ್ಲಿ ಅನಾದಿಕಾಲದಿಂದ'ಲೂ ನೆಲೆಸಿರುವ ಶ್ರೀ ಪೂಜಮ್ಮದೇವಿಯ ಹೂವಿನ ಕರಗ ಮಹೋತ್ಸವವನ್ನು ರಾತ್ರಿ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಶ್ರೀಪೂಜಮ್ಮ ದೇವಾಲಯದಲ್ಲಿ ದೇವಿಗೆ ಶಾಸಕರಾದ ಬಿ.ಎನ್. ರವಿಕುಮಾರ್ ವಿಶೇಷ ಪೂಜೆ ಸಲ್ಲಿಸಿದರು.



ಪೂಜಮ್ಮ ದೇವಿಯ ಕರಗವನ್ನು ಕೋಲಾರ ತಾಲ್ಲೂಕಿನ ಎಸ್. ಅಗ್ರಹಾರ ಗ್ರಾಮದ ಪಿ.ಶಿವರಾಜ್ ಹೊತ್ತಿದ್ದರು,ತಲೆಯ ಮೇಲೆ ಕಳಶ ಹೊತ್ತು ಕುಣಿಯುವ ಕಲೆಯಾಗಿದ ಕರಗದ ಆಚರಣೆ ಎಂದರೆ ಆದಿಶಕ್ತಿಯ ಆಚರಣೆ ಎಂದು ನಂಬಲಾಗಿದೆ. ಕರಗವು ದೇವಸ್ಥಾನವನ್ನು ಮೂರು ಸುತ್ತು ಪ್ರದರ್ಶನ ಮಾಡಿದ ನಂತರ ಕರಗವನ್ನು ಹೊರಲಾಯಿತು.

ಕರಗದ ಪ್ರಯುಕ್ತ ಬೈಪಾಸ್ ರಸ್ತೆಯ ಪೂಜಮ್ಮ ದೇವಾಲಯ ಮುಂಭಾಗ, ಮಾರಮ್ಮ ವೃತ್ತದಲ್ಲಿ ಮತ್ತು ಕೋಟೆ ವೃತ್ತದಲ್ಲಿ ಆಯೋಜನೆ ಮಾಡಲಾಗಿದ್ದ ವಾದ್ಯಗೋಷ್ಠಿಯ ವೇದಿಕೆಯಲ್ಲಿ ಕರಗ ಹೊತ್ತ ಪಿ.ಶಿವರಾಜ್ ತಮಟೆ ಶಬ್ದದ ತಾಳಕ್ಕೆ ಹೆಜ್ಜೆ ಹಾಕಿ ಕುಣಿದರು, ಹಾಗೆಯೇ ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾದ ಕರ್ನಾಟಕ ಡ್ಯಾನ್ಸ್ ಕರ್ನಾಟಕದ ವಿನ್ನರ್ ಶಶಾಂಕ್ ವೇದಿಕೆಯ ಮೇಲೆ ನೃತ್ಯ ಪ್ರದರ್ಶನವನ್ನು ನೀಡಿದರು.

ಕರಗ ಮಹೋತ್ಸವದಲ್ಲಿ ಕಾಂಗ್ರೆಸ್ ಮುಖಂಡರಾದ ರಾಜೀವ್ ಗೌಡ ,ಸಹನಾ ರಾಜೀವ್ ಗೌಡ , ಆಂಜಿನಪ್ಪ (ಪುಟ್ಟು),ಬಿಜೆಪಿ ಮುಖಂಡರಾದ ರಾಮಚಂದ್ರಗೌಡ, ಆನಂದಗೌಡ, ನಾರಾಯಣಸ್ವಾಮಿ ಮುಂತಾದವರು ಪಾಲ್ಗೊಂಡು ವಿಶೇಷ ಪೂಜೆ ನೆರವೇರಿಸಿದರು,ಪೂಜಮ್ಮ ದೇವಿ ಕರಗದ ಸಮಿತಿಯ ಪದಾಧಿಕಾರಿಗಳು ಜತೆಗೂಡಿದ್ದರು. ನಗರದಲ್ಲಿ ವಿದ್ಯುತ್ ದೀಪಾಲಂಕಾರ ಕಂಗೊಳಿಸುತಿತ್ತು. ಭಕ್ತಾದಿಗಳು ದೇವರ ದರ್ಶನ ಪಡೆದು ಅಮ್ಮನವರ ಕೃಪೆಗೆ ಪಾತ್ರರಾದರು.

ಕರಗದ ದರ್ಶನಕ್ಕಾಗಿ ನಗರವಾಸಿಗಳ ಜೊತೆಗೆ ತಾಲ್ಲೂಕಿನ ವಿವಿಧ ಗ್ರಾಮಗಳಿಂದಲೂ ಭಕ್ತರು ಆಗಮಿಸಿ, ಪವಿತ್ರ ಕ್ಷಣಕ್ಕೆ ಸಾಕ್ಷಿಯಾದರು.

ವಾದ್ಯಗೋಷ್ಠಿ ತಂಡವು ಕನ್ನಡ ಹಿಂದಿ, ತೆಲುಗು, ಸೇರಿದಂತೆ ವಿವಿಧ ಭಾಷೆಗಳ ಹಾಡುಗಳನ್ನು ವಾದ್ಯಯಂತ್ರಗಳ ಸೊಬಗಿನಲ್ಲಿ ನೃತ್ಯಗಳೊಂದಿಗೆ ಪ್ರದರ್ಶಿಸಿದುದು ಭಕ್ತರಲ್ಲಿ ಭಕ್ತಿ ಮತ್ತು ಉತ್ಸಾಹವನ್ನು ಹೆಚ್ಚಿಸಿದುದರೊಂದಿಗೆ ಉತ್ಸವದ ಮೆರಗು ಹೆಚ್ಚಿಸಿತು. ಕರಗವು ರಾತ್ರಿ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು ನಂತರ ಶ್ರೀ ಪೂಜಮ್ಮ ದೇವಾಲಯದಲ್ಲಿ ಅಗ್ನಿಕುಂಡ ಪ್ರವೇಶಿಸಿ ಕರಗವನ್ನು ಇಳಿಸಿದರು ನಂತರ ಭಕ್ತಾದಿಗಳಿಗೆ ಮಂಗಳಾರತಿ ನೀಡಿ ಒನಕೆ ಕರಗವನ್ನು ಏರ್ಪಡಿಸಿ ಮುಕ್ತಾಯಗೊಳಿಸಿದರು.

# ಚಿದಾನಂದ್‌ಗೆ ಅತ್ಯುತ್ತಮ ಲೀಜನ್ ಅಧಿಕಾರಿ ಪ್ರಶಸ್ತಿ




**ಶಿಡ್ಲಘಟ್ಟ:** ಉಡುಪಿಯ ಬ್ರಹ್ಮಾವರದಲ್ಲಿ ನಡೆದ ಸೀನಿಯರ್ ಛೇಂಬರ್ ಇಂಟರ್ ನ್ಯಾಶನಲ್ (ಎಐಖ) ರಾಷ್ಟ್ರೀಯ ಸಮ್ಮೇಳನದಲ್ಲಿ ತಾಲ್ಲೂಕಿನ ಭಕ್ತರಹಳ್ಳಿಯ ಬಿ. ಚಿದಾನಂದಮೂರ್ತಿ ಅವರಿಗೆ ರಾಷ್ಟ್ರಮಟ್ಟದ ಅತ್ಯುತ್ತಮ "ಲೀಜನ್ ಅಧಿಕಾರಿ" ಪ್ರಶಸ್ತಿಯನ್ನು ರಾಷ್ಟ್ರೀಯ ಅಧ್ಯಕ್ಷರಾದ ಚಿತ್ರಕುಮಾರ್ ಪ್ರಧಾನ ಮಾಡಿದರು.

ಚಿದಾನಂದಮೂರ್ತಿಯವರು ವಿಜಯಪುರದ ಸೀನಿಯರ್ ಛೇಂಬರ್ ಇಂಟರ್ ನ್ಯಾಷನಲ್ ಕಾರ್ಯದರ್ಶಿಯಾಗಿ ಅತ್ಯುತ್ತಮ ಸೇವೆ ಸಲ್ಲಿಸಿರುವುದರಿಂದ ಈ ಗೌರವಕ್ಕೆ ಪಾತ್ರರಾಗಿದ್ದಾರೆ,ಸಂಘಟನೆಯ ಮಾರ್ಗದರ್ಶನ ಮತ್ತು ಕ್ರಿಯಾತ್ಮಕ ಕಾರ್ಯಗಳ ಮೂಲಕ ಅವರು ಗುರುತಿಸಿಕೊಂಡಿದ್ದು, ಇವರ ಸೇವೆಯನ್ನು ಶ್ಲಾಘಿಸಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಈ ಸಂದರ್ಭದಲ್ಲಿ ವಿಜಯಪುರ ಸೀನಿಯರ್ ಛೇಂಬರ್ ಅಧ್ಯಕ್ಷ ಕೆ.ವೆಂಕಟೇಶ್, ರಾಷ್ಟ್ರೀಯ ಉಪಾಧ್ಯಕ್ಷ ಡಾ.ಎಂ. ಶಿವಕುಮಾರ್, ಸಂಸ್ಥಾಪಕ ಅಧ್ಯಕ್ಷ ಕೆ.ವಿ.ಬೈರೇಗೌಡ, ರಾಷ್ಟ್ರೀಯ ಅಧಿಕಾರಿಗಳಾದ ಎನ್.ಜಯರಾಮ್, ವಿ. ವೆಂಕಟೇಶ್,ನಿಯೋಜಿತ ಅಧ್ಯಕ್ಷ ಅನೀಸ್ ಉರ್ ರೆಹಮಾನ್ ಹಾಜರಿದ್ದರು.

# ತಾತಯ್ಯನವರು ರಚಿಸಿರುವ ಕಾಲಜ್ಞಾನ ತತ್ವಪದಗಳು ಸರ್ವಕಾಲಿಕವಾದುದು

**ಮಾಲೂರು:** ಕೈವಾರ ಶ್ರೀಯೋಗಿ ನಾರಾಯಣ ತಾತಯ್ಯನವರು ರಚಿಸಿರುವ ಕಾಲಜ್ಞಾನ ತತ್ವಪದಗಳು ಸಮಾಜದಲ್ಲಿ ಸರ್ವಕಾಲಿಕವಾದುದು ಸರ್ಕಾರದಿಂದ ಆಚರಣೆ ಮಾಡುವ ಜಯಂತಿ ಕಾರ್ಯಕ್ರಮಗಳನ್ನು ಎಲ್ಲಾ ಜಾತಿ ಧರ್ಮದವರು ಒಗೂಡಿ ಆಚರಣೆ ಮಾಡುವಂತಾಗಬೇಕು ಎಂದು ಶಾಸಕ ಕೆ.ವೈ.ನಂಜೇಗೌಡ ಹೇಳಿದರು.

ತಾಲ್ಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಪಟ್ಟಣದ ತಾಲೂಕು ಕಚೇರಿ ತಹಶೀಲ್ದಾರ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಯೋಗಿ ನಾರಾಯಣ ಕೈವಾರ ತಾತಯ್ಯನವರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ತಾತಯ್ಯ ನವರ ಭಾವಚಿತ್ರಕ್ಕೆ ಶಾಸಕ ಕೆ.ವೈ.ನಂಜೇಗೌಡ ಪುಷ್ಪ ನಮನ ಅರ್ಪಿಸಿ ಪಲ್ಲಕಿ ಉತ್ಸವ ಮೆರವಣ ಗೆಗೆ ಚಾಲನೆ ನೀಡಿ ಮಾತನಾಡಿದರು.

ಯೋಗಿ ನಾರಾಯಣ ತಾತಯ್ಯ ನವರು ಕೋಲಾರ ಚಿಕ್ಕಬಳ್ಳಾಪುರ ಅವಿಭಜಿತ ಜಿಲ್ಲೆಗಳ ಸುಪ್ರಸಿದ್ಧ ಐತಿಹಾಸಿಕ ಸ್ಥಳ ಕೈವಾರ ತಾತಯ್ಯ ನವರಿಂದ ಪ್ರಸಿದ್ಧಿ ಪಡೆದಿದೆ, ದ್ವಾಪರದಲ್ಲಿ ಒಂದು ಪುಣ್ಯ ಕ್ಷೇತ್ರವಾಗಿದೆ ಆದ್ಯಾತ್ಮಿಕ ಚಿಂತಕರು ಕವಿಗಳು ಆಗಿದ್ದರು, ಮಹಾನ್ ಸಂತರಾಗಿದ್ದ ನಾರಾಯಣ ತಾತಯ್ಯ ನವರು ಕಾಲ ಜ್ಞಾನ ಭವಿಷ್ಯ ವಾಣ ನುಡಿದಿದ್ದಾರೆ, ಭಕ್ತಿ ಬಾವದ ಮೂಲಕ ಜ್ಞಾನ ಮಾರ್ಗ ಎಂಬಂತೆ ಜನ ಮಾನಸದಲ್ಲಿ ಭಕ್ತಿ ಭಾವ ಬಿತ್ತು ವಂತ ಭಕ್ತಿ ಗೀತೆಗಳು, ತತ್ವಪದಗಳು ರಚಿಸಿದರು. ಸನ್ಮಾರ್ಗ ತೋರುತ್ತಾ ತಾತಯ್ಯ ನವರು 100 ವರ್ಷಗಳು ಸುದೀರ್ಘ ಕಾಲ ಕೈವಾರದಲ್ಲಿ ನೆಲಸಿದ್ದರು.

ತಾತಯ್ಯ ನವರ ತತ್ವಪದಗಳು ಕಾಲಜ್ಞಾನ ಪ್ರಸ್ತುತ ಸಮಾಜಕ್ಕೆ ದಾರಿ ದೀಪವಾಗಿದೆ. ಸರ್ಕಾರ ತಾತಯ್ಯನವರ ಜನ್ಮದಿನವನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ಆಚರಣೆ ಮಾಡುತ್ತಿರುವುದು ಶ್ಲಾಘನೀಯವಾದುದು, ಇಂತಹ ಕಾರ್ಯಕ್ರಮಗಳನ್ನು ಎಲ್ಲಾ ಜಾತಿ ಧರ್ಮದವರು ಒಗ್ಗೂಡಿ ಒಗ್ಗಟ್ಟಿನಿಂದ ಆಚರಿಸಬೇಕು ತಾಲ್ಲೂಕು ಆಡಳಿತ ಹಾಗೂ ಬಲಜಿಗ ಸಂಘದ ಸಹಕಾರದಿಂದ ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ಆಚರಣೆ ಮಾಡಲಾಗುತ್ತಿದೆ. ಇಲ್ಲಿನ ಬಲಜ ಸಮುದಾಯದವರು ಮುಖ್ಯರಸ್ತೆಯ ಒಂದು ವೃತ್ತದಲ್ಲಿ ಕೈವಾರ ನಾರಾಯಣ ತಾತಯ್ಯನವರ ಪ್ರತಿಮೆ ಅನಾವರಣ ಮಾಡುವುದು ಹಾಗೂ ಸಮುದಾಯದ ಕಲ್ಯಾಣ ಕಾರ್ಯಕ್ರಮಗಳಿಗೆ ಅವಶ್ಯಕತೆ ಇರುವ ಸಮುದಾಯ ಭವನ ನಿರ್ಮಾಣಕ್ಕೆ ಜಮೀನು ಮಂಜೂರು ಮಾಡುವಂತೆ ಮನವಿ ಮಾಡಿದ್ದು, ಬಲಿಜ ಸಮುದಾಯದವರ ಮನವಿ ಮೇರೆಗೆ ಸಮುದಾಯ ಭವನ ನಿರ್ಮಾಣಕ್ಕೆ ಜಮೀನು ಮಂಜೂರು ಮಾಡುವುದು ಹಾಗೂ ಮುಖ್ಯ ಒಂದು ವೃತ್ತದಲ್ಲಿ ಪ್ರತಿಮೆ ಅನಾವರಣ ಮಾಡಲು ತಾಲೂಕು ಆಡಳಿತದಿಂದ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.



ಮಾಜಿ ಶಾಸಕ ಎ ನಾಗರಾಜು ಮಾತನಾಡಿ ಕೈವಾರ ನಾರಾಯಣ ತಾತಯ್ಯ ತ್ರೆತ ಯುಗದಲ್ಲಿ ಶ್ರೇಷ್ಠ ದಾರ್ಶನಿಕರು ಸಂತರು ಆದ್ಯಾತ್ಮಿಕವುಳ್ಳವರಾಗಿದ್ದರು ಸಮಾಜದಲ್ಲಿ ಮುಂದೆ ನಡೆಯ ಬಹುದಾದ ಭವಿಷ್ಯವನ್ನು ತಮ್ಮ ಕಾಲಜ್ಞಾನದಲ್ಲಿ ರಚಿಸಿದಂತೆ ಪ್ರಸ್ತುತ ನಡೆಯುತ್ತಿದೆ, ಅಲ್ಲದೆ ಅವರು ರಚಿಸಿರುವ ತತ್ವಪದಗಳು ಸಮಾಜಕ್ಕೆ ಮಾರ್ಗ ದರ್ಶಕವಾಗಿದೆ, ಗೌತಮ ಬಸವೇಶ್ವರ, ಕನಕದಾಸರ, ಆದರ್ಶಗಳನನ್ನು ಅಳವಡಿಸಿಕೊಂಡು ಅವರನ್ನು ಪ್ರೇರಣೆಯಾಗಿಟ್ಟುಕೊಂಡು ಸಮಾಜಕ್ಕೆ ತಮ್ಮದೆ ಆದ ಕೊಡುಗೆಯನ್ನು ನೀಡಿದ್ದಾರೆ.

ತಾತಯ್ಯನವರ ರಚಿತ ತತ್ವ ಸಿದ್ಧಾಂತಗಳು ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗುವಂತೆ ಹೇಳಿದರು. ತಾಲ್ಲೂಕು ಆಡಳಿತ ಆಚರಣೆ ಮಾಡುವ ತಾತಯ್ಯ ನವರ ಜಯಂತಿ ಸೇರಿದಂತೆ ಹಲವು ಮಹನೀಯರ ಜಯಂತಿ ಒಂದು ವರ್ಗದ ಜಯಂತಿಗಳಾಗಬಾರದು ಸಮಾಜದ ಎಲ್ಲಾ ವರ್ಗದವರು ಒಗ್ಗೂಡಿ ಜಯಂತಿಗಳನ್ನು ಆಚರಣೆ ಮಾಡಿದರೆ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡಬಹುದಾಗಿದೆ ಎಂದರು.

ಇದೇ ಸಂದರ್ಭದಲ್ಲಿ ತಾಲೂಕು ಕಚೇರಿಯ ಮುಖ್ಯ ರಸ್ತೆಯಲ್ಲಿ ಕೈವಾರ ನಾರಾಯಣ ತಾತಯ್ಯನವರ ಪಲ್ಲಕ್ಕಿ ಮೆರವಣ ಗೆಗೆ ಶಾಸಕ ಕೆ ವೈ ನಂಜೇಗೌಡ ಚಾಲನೆ ನೀಡಿದರು.

ತಹಶೀಲ್ದಾರ್ ಎಂ.ವಿ.ರೂಪ, ಪುರಸಭಾಧ್ಯಕ್ಷ ಕೋಮಲ ನಾರಾಯಣ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ ಲಕ್ಷ್ಮೀನಾರಾಯಣ್, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಎ.ರಾಜಪ್ಪ, ಬಲಜಿಗರ ಸಂಘದ ಅಧ್ಯಕ್ಷ ಡಿ ನಾರಾಯಣಸ್ವಾಮಿ, ಮಾಜಿ ಅಧ್ಯಕ್ಷ ಎಂ.ಆರ್.ರಂಗಪ್ಪ, ಪೊಲೀಸ್ ಇನ್ಸೆಕ್ಟರ್ ವಸಂತ್, ಪುರಸಭಾ ಮುಖ್ಯಾಧಿಕಾರಿ ಎ.ಬಿ ಪ್ರದೀಪ್, ವಕೀಲ ಆನಂದ್ ಕುಮಾರ್, ದರಕಾಸ್ತು ಸಮಿತಿ ಸದಸ್ಯರಾದ ಸತೀಶ್, ನವೀನ್, ಪುರಸಭಾ ಸದಸ್ಯರಾದ ಎಂ.ವಿ.ವೇಮನ, ಮುರುಳಿಧರ್, ಭಾನುತೇಜ, ಮಾಜಿ ಸದಸ್ಯ ಆಲೂ ಮಂಜು, ಸರ್ಕಾರಿ ನೌಕರರ ಸಂಘದ ಖಜಾಂಚಿ ಆರ್.ನರಸಿಂಹ, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಪದ್ಮಾವತಿ, ಮುಖಂಡರಾದ ರತ್ನಪ್ಪ, ನಾಗಪ್ಪ, ಸೀನಪ್ಪ, , ರಘು, ರವಿಕುಮಾರ್, ಇನ್ನಿತರರು ಹಾಜರಿದ್ದರು.

# ಅಧ್ಯಕ್ಷೆಯಾಗಿ ಸರಸ್ವತಮ್ಮ ಆಯ್ಕೆ



ಶಿಡ್ಲಘಟ್ಟ: ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷೆಯಾಗಿ ಸರಸ್ವತಮ್ಮ ಆಯ್ಕೆ ಆಗಿದ್ದಾರೆ ಜಿಲ್ಲೆಯಲ್ಲೇ ಮೊದಲ ಬಾರಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧಿಕಾರ ಚುಕ್ಕಾಣಿಯನ್ನು ಮಹಿಳಾ ಅಭ್ಯರ್ಥಿಯೊಬ್ಬರು ಹಿಡಿದ ಹೆಗ್ಗಳಿಕೆಗೆ ಸರಸ್ವತಮ್ಮ ಅವರು ಕಾರಣೀಭೂತರಾಗಿದ್ದಾರೆ.

ನಗರದ ಕಂದಾಯ ಭವನದ ಸರ್ಕಾರಿ ನೌಕರರ ಸಂಘದ ಕಚೇರಿ ಸಭಾಂಗಣದಲ್ಲಿ ನಡೆದ ಪದಗ್ರಹಣ ಕಾರ್ಯಕ್ರಮದಲ್ಲಿ ಸಂಘದ ಇತರೆ ಪದಾಧಿಕಾರಿಗಳೊಂದಿಗೆ ಅಧಿಕಾರ ಸ್ವೀಕರಿಸಿ ಅವರು ಮಾತನಾಡಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಮಹಿಳೆಗೆ ಪ್ರಾತಿನಿಧ್ಯ ಕೊಟ್ಟು ನನ್ನನ್ನು ಆಯ್ಕೆ ಮಾಡಿದ್ದಕ್ಕೆ ಸಂಘದ ಎಲ್ಲಾ ಪದಾಧಿಕಾರಿಗಳು, ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಸರ್ಕಾರಿ ನೌಕರರ ಸಂಘದ ಎಲ್ಲರಿಗೂ ಅಭಿನಂ ದನೆಗಳನ್ನು ತಿಳಿಸಿ, ಇದು ಜಿಲ್ಲೆಯಲ್ಲಿ ಇತರೆ ತಾಲೂಕು ಸಂಘಗಳಿಗೆ ಮಾದರಿ ಆಗಲಿ ಎಂದು ಆಶಿಸಿದರು.

ತಾಲ್ಲೂಕಿನಲ್ಲಿ ನಿಮ್ಮೆಲ್ಲರ ಸಹಕಾರದಿಂದ ಸುಸಜ್ಜಿತ ಗುರುಭವನ ನಿರ್ಮಾಣ ಮಾಡಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ, ಸಂಘದ ಅಭಿವೃದ್ಧಿಗೆ ಹಾಗೂ ಸದಸ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ಹೇಳಿದರು.

ಈ ಹಿಂದಿನ ಅಧ್ಯಕ್ಷ ಬಿ.ಆರ್.ನಾರಾಯಣ ಸ್ವಾಮಿ ಅವರು ವಯೋನಿವೃತ್ತರಾದ ಕಾರಣ ಅವರ ಸ್ಥಾನಕ್ಕೆ ಸರಸ್ವತಮ್ಮ ಅವರನ್ನು ಅವಿರೋಧ ಆಯ್ಕೆ ಮಾಡಲಾಯಿತು.

ಪ್ರಧಾನ ಕಾರ್ಯದರ್ಶಿಯಾಗಿ ಆರ್.ಸುಂದರಾಚಾರಿ, ಉಪಾಧ್ಯಕ್ಷರಾಗಿ ಎಂ.ಸೀನಪ್ಪ, ಖಜಾಂಚಿಯಾಗಿ ಎಂ.ವಿ. ಮಂಜುನಾಥ್ ಅವಿರೋಧ ಆಯ್ಕೆಯಾಗಿದ್ದು, ಅಧಿಕಾರ ಸ್ವೀಕರಿಸಿದರು.

ಇದೇ ವೇಳೆ ನೂತನ ಅಧ್ಯಕ್ಷರು ಹಾಗೂ ಇತರೆ ಪದಾಧಿ ಕಾರಿಗಳಿಗೆ ಬೃಹತ್ ಹೂವಿನ ಹಾರ ಹಾಕಿ ಸನ್ಮಾನಿಸಲಾಯಿತು. ವಯೋನಿವೃತ್ತರಾದ ಸಂಘದ ನಿಕಟಪೂರ್ವ ಅಧ್ಯಕ್ಷ ಬಿ.ಆರ್. ನಾರಾಯಣಸ್ವಾಮಿ ದಂಪತಿ ಸನ್ಮಾನಿಸಿ, ಬೀಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಸರಕಾರಿ ನೌಕರ ಸಂಘದ ಅಧ್ಯಕ್ಷ ನಾರಾಯಣಸ್ವಾಮಿ, ಪ್ರಧಾನ ಕಾರ್ಯದರ್ಶಿ ಅಶೋಕ್, ತಾಲ್ಲೂಕು ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಕೆ.ಎನ್. ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಎ.ಎಂ.ಕೆಂಪೇಗೌಡ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸಂಘಟನಾ ಕಾರ್ಯ ದರ್ಶಿ ಮೇಲೂರು ಮಂಜುನಾಥ್,ಆಂಜನೇಯುಲು, ಸಿ.ಎಂ. ಮುನಿರಾಜು,ಬಿ.ಆರ್.ಪಿ.ಪ್ರಸನ್ನಕುಮಾರ್, ಅಕ್ಕಲರೆಡ್ಡಿ, ಕುಂದಲಗುರ್ಕಿ ಮಂಜುನಾಥ್, ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷ ಗಜೇಂದ್ರ, ಕಾರ್ಯದರ್ಶಿ ನರಸಿಂಹರಾಜು ಮತ್ತಿತರರು ಹಾಜರಿದ್ದರು.

# 4 ತಿಂಗಳೊಳಗೆ ರಸ್ತೆ ಕಾಮಗಾರಿ ಪೂರ್ಣ

ಮುಳಬಾಗಿಲು: ಪುಂಗನೂರು ಮುಖ್ಯ ರಸ್ತೆಯನ್ನು ನಾಲ್ಕು ತಿಂಗಳ ಒಳಗಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಶಾಸಕರಾದ ಸಮೃದ್ಧಿ ವಿ ಮಂಜುನಾಥ್ ತಿಳಿಸಿದರು.

ಅವರು ತಾಲ್ಲೂಕಿನ ಕಿರುಮಣಿ ಕ್ರಾಸ್‌ನಲ್ಲಿ ಪುಂಗನೂರು ಮುಖ್ಯ ರಸ್ತೆಯ ಮಾರ್ಗದ 3 ಕಿ.ಮೀ ರಸ್ತೆಗೆ ಗುದ್ದಲಿ ಪೂಜೆ ಮಾಡಿ 9 ಕಿ.ಮೀ ರಸ್ತೆಗೆ ಆರು ಕೋಟಿ ಹಣ ಬಿಡುಗಡೆಯಾಗಿದ್ದು ಎನ್.ವಡ್ಡಹಳ್ಳಿ ಬಳಿ 3 ಮತ್ತು ಚೆನ್ನಾಪುರ ಹತ್ತಿರ 3ಕಿ.ಮೀ. ರಸ್ತೆಯನ್ನು ನಿರ್ಮಿಸಲಾಗುತ್ತಿದೆ. ಮುಳಬಾಗಿಲು ತಾಲ್ಲೂಕಿನಲ್ಲಿ 120 ಕಿಲೋಮೀಟರ್ ರಸ್ತೆಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಒಟ್ಟು ಎಂಟು ಸಾವಿರ ಕೋಟಿಯಲ್ಲಿ 55 ಕೋಟಿ ರಸ್ತೆಗಳ ನಿರ್ಮಾಣಕ್ಕೆ ಬಿಡುಗಡೆ ಮಾಡುವುದಾಗಿ ಹೇಳಿದ್ದಾರೆ ಮುಂದಿನ ಎರಡು ಮೂರು ವರ್ಷಗಳಲ್ಲಿ ಕ್ಷೇತ್ರದಲ್ಲಿ ಹಳ್ಳಿ ರಸ್ತೆ, ಹೋಬಳಿ ಮತ್ತು ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳನ್ನು ಪೂರ್ಣಗೊಳಿಸಲಾಗುವುದು ಎಂದರು. 70 ಶಾಸಕರು ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದು ಎಲ್ಲಾ ಕ್ಷೇತ್ರಗಳಿಗೂ ಅನುದಾನ ನೀಡಬೇಕು ಎಂದು ಹೇಳಿದ್ದೇವೆ, ಈಗಾಗಲೇ ಬೇಸಿಗೆ ಕಾಲ ಪ್ರಾರಂಭವಾಗಿದ್ದು 24 ಕೊಳವೆ ಬಾವಿಗಳು ಕೊರೆದಿದ್ದು 18ರಲ್ಲಿ ನೀರು ಬಂದಿದೆ ಹಾಗೆಯೇ ಟಾಸ್ಕ್ ಫೋರ್ಸ್ ರಚನೆ ಮಾಡಿ ಪ್ರತಿ ಪಂಚಾಯಿತಿಯಲ್ಲೂ ಪಿಡಿಒ ಗಳು ಅಗತ್ಯವಿದ್ದ ಕಡೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಸೂಚಿಸಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಕೆ ಎನ್ ನಾಗರಾಜ್, ಗ್ರಾಮ ಪಂಚಾಯತ್ ಅಧ್ಯಕ್ಷ ಅಶೋಕ್, ತಮ್ಮರೆಡ್ಡಿಹಳ್ಳಿ ಭಾಸ್ಕರ್, ಗ್ರಾಪಂ ಒಕ್ಕೂಟದ ಅಧ್ಯಕ್ಷ ಪಿ ವಿ ಶಂಕರ್, ಜಿಪಂ ಮಾಜಿ ಸದಸ್ಯ ಸಾಮೇಗೌಡ, ತಾ ಪಂ ಮಾಜಿ ಸದಸ್ಯ ಸುಬ್ಬಾರೆಡ್ಡಿ, ಗೊಲ್ಲಹಳ್ಳಿ ಪ್ರಭಾಕರ್, ಬಿ ಎಂ ಸಿ ವೆಂಕಟರಾಮೇಗೌಡ, ರೋಟರಿ ಕ್ಲಬ್ ಅಧ್ಯಕ್ಷ ಎನ್ ಆರ್ ಸತ್ಯಣ್ಣ, ಕೇಶವ್, ತಿಮ್ಮಾರೆಡ್ಡಿ, ವಿವಿಧ ಗ್ರಾಮಪಂಚಾಯಿತಿಗಳ ಸದಸ್ಯರು, ಅಧ್ಯಕ್ಷರು ಮತ್ತು ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು..



# ಸಭೆಗೆದಾಖಲಾತಿ ತನ್ನಿ:ಮಂಜುನಾಥ್



ಮುಳಬಾಗಿಲು: ತಾಲ್ಲೂಕಿನಲ್ಲಿ ಬಡವರಿಗೆ ಭೂ ಹಂಚಿಕೆಯ ದರಖಾಸ್ತು ಸಭೆ ಶಾಸಕ ಸಂವೃದ್ಧಿ ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಕಛೇರಿ ಸಭಾಂಗಣದಲ್ಲಿ ನಡೆಯಿತು..

2018 ರಿಂದ 2023ವರೆಗೂ ಬಗರ್ ಹುಕ್ಕಂ ಸಭೆಯಲ್ಲಿ ಆಕ್ರಮ ಭೂ ಮಂಜೂರಾತಿ ಮಾಡಲಾಗಿದೆ ಎಂಬ ಅರೋಪ ಸಭೆಯಲ್ಲಿ ಚರ್ಚೆಗೆ ಗ್ರಾಸವಾಯಿತು.

ಕೆಲಕಾಲ ಸಭೆಯಲ್ಲಿ ಈ ಹಿಂದೆ ಭೂಗಳ್ಳರಿಗೆ ಬೆಂಗಳೂರು, ಹೊಸಕೋಟೆ, ಮಾಲೂರು ತಾಲ್ಲೂಕು ನಿಂದ ಬಂದವರಿಗೆ ಭೂಮಿ ಮಂಜೂರು ಮಾಡಿದ್ದಾರೆ. ಅಲ್ಲದೆ ಒಂದೇ ಕುಟುಂಬದ ವರಿಗೆ ಹತ್ತು ಎಕರೆ ಹಾಗೆ ಮಂಜೂರು ಮಾಡಲಾಗಿ ಆಕ್ರಮ ವೆಸಗಿದ್ದಾರೆ ಎಂದು ಸಭೆಯಲ್ಲಿ ಸದಸ್ಯರು ಅರೋಪಿಸಿದರು.

ಇದೇ ವೇಳೆ ಶಾಸಕ ಸಂವೃದ್ಧಿ ಮಂಜುನಾಥ್ ಮಾತನಾಡಿ, ಈ ಹಿಂದೆ ಹಲವು ಸಭೆಯಲ್ಲಿ ಭೂ ಮಂಜೂರು ಆಗಿರುವ ಕಡತಗಳನ್ನು ಕೇಳಿದ್ರೆ ಅಧಿಕಾರಿಗಳು ನಾಪತ್ತೆ ಎಂದು ಸಬೂಬು ಹೇಳುತ್ತಾರೆ...ಹಾಗೇ ಮಂಜೂರು ದಾಖಲೆ ಎಲ್ಲಿ... ಭೂಮಿಯನ್ನು ಮಾಯವಾಗುತ್ತದೆ. ಇಲ್ಲಿ ಮಂಜೂರು ಆದ ಭೂಮಿಯ ದಾಖಲೆಗಳೆ ನಾಪತ್ತೆಯಾಗುತ್ತದೆ ಎಂದರೆ ಇನ್ನೂ ಬಗರ್ ಹುಕ್ಕಂ ಸಮಿತಿ ಎಷ್ಟು ವೀಕ್ ಅಗಿದೆ .ಈ ಕೂಡಲೇ ಹಿಂದೆ ಮಂಜೂರಾತಿ ಮಾಡಿದ ದಾಖಲೆಯನ್ನು ಮುಂದಿನ ಸಭೆಯಲ್ಲಿ ಹಾಜರು ಪಡಿಸುವ ಜವಾಬ್ದಾರಿ ತಹಸೀಲ್ದಾರ್ ಅವರದಾಗಿದೆ.

ದಾಖಲೆ ಪಡೆದ ಬಳಿಕ ಆಕ್ರಮ ಭೂ ಮಂಜುರಾಗಿತಿ ಬಗ್ಗೆ ತನಿಖೆ ಮಾಡಿಸುವೇ...ನಾನು ರಾಜಕೀಯಕ್ಕಾಗಿ ಬಂದವನಲ್ಲ, ಸೇವಕನಾಗಿ ಬಂದಿದ್ದೇನೆ...ಶಾಸಕ ಸ್ಥಾನಕ್ಕೆ ನಾನು ಅಂಟಿ ಕೊಂಡಿಲ್ಲ...ನನ್ನ ಕ್ಷೇತ್ರದಲ್ಲಿ ಅಕ್ರಮಗಳು ನಡೆಯಲು ಬಿಡುವುದಿಲ್ಲ ಎಂದು ಆಢಳಿತ ವರ್ಗಕ್ಕೆ ಶಾಸಕರು ಖಡಕ್ ಎಚ್ಚರಿಕೆ ನೀಡಿದ್ದಾರೆ... ಈ ಸಂಧರ್ಭದಲ್ಲಿ ತಹಸೀಲ್ದಾರ್ ವಿ.ಗೀತಾ,, ಬಗರ್ ಹುಕ್ಕಂ ಸದಸ್ಯರುಗಳಾದ ಲೀಲಾವತಿ . ಜಮ್ಮನಹಳ್ಳಿ ಕೃಷ್ಣಪ್ಪ. ಗುಜ್ಜನಹಳ್ಳಿ ಮಂಜುನಾಥ್ ಹಾಜರಿದ್ದರು.

# ಗಂಗಾಧರೇಶ್ವರಸ್ವಾಮಿ ವೈಭವದ ಮಹಾರಥೋತ್ಸವ

**ನಾಗಮಂಗಲ:** ಇತಿಹಾಸ ಪ್ರಸಿದ್ಧ, ಪುಣ್ಯಕ್ಷೇತ್ರ ತಾಲೂಕಿನ ಆದಿಚುಂಚನಗಿರಿಯಲ್ಲಿ ಗುರುವಾರ ಮುಂಜಾನೆ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಗಂಗಾಧರೇಶ್ವರ ಸ್ವಾಮಿ ಮಹಾ ರಥೋತ್ಸವ ಹಾಗೂ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಡ್ಡಪಲ್ಲಕ್ಕಿ ಉತ್ಸವ ಲಕ್ಷಾಂತರ ಭಕ್ತರ ನಡುವೆ ಬಹಳ ವಿಜೃಂಭಣೆಯಿಂದ ನೆರವೇರಿತು.

ಬ್ರಾಹ್ಮೀ ಮುಹೂರ್ತ 4ಗಂಟೆಗೆ ಸರಿಯಾಗಿ ಶ್ರೀಮಠದ ಪೀಠಾಧ್ಯಕ್ಷ ಶ್ರೀ ಡಾ.ನಿರ್ಮಲಾನಂನಾಥ ಸ್ವಾಮೀಜಿ ಅವರು ಆದಿಚುಂಚನಗಿರಿಯ ರಥ ಬೀದಿಯಲ್ಲಿ ಸರ್ವಾಲಂಕಾರಗೊಂಡಿದ್ದ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ಲಕ್ಷಾಂತರ ಭಕ್ತರ ಹರ್ಷೋದ್ಗಾರದ ನಡುವೆ ಮಹಾ ರಥೋತ್ಸವಕ್ಕೆ ಚಾಲನೆ ನೀಡಿದರು.


ರಥೋತ್ಸವದ ಅಂಗವಾಗಿ ಶ್ರೀ ಕ್ಷೇತ್ರದಲ್ಲಿ ತಿರುಗಣಿ ಉತ್ಸವ ಸೇರಿದಂತೆ ನಾನಾ ಪೂಜಾ ಕೈಂಕರ್ಯಗಳು ನಡೆದವು. ಶ್ರೀ ಕ್ಷೇತ್ರದ ಶ್ರೀ ಗಂಗಾಧರೇಶ್ವರ ಸ್ವಾಮಿಯನ್ನು ಅಲಂಕೃತಗೊಂಡಿದ್ದ ರಥದಲ್ಲಿ ಕೂರಿಸಲಾಗಿತ್ತು. ರಥೋತ್ಸವಕ್ಕೆ ಚಾಲನೆ ನೀಡುತ್ತಿದ್ದಂತೆ ನೆರೆದಿದ್ದ ಲಕ್ಷಾಂತರ ಭಕ್ತರು ರಥವನ್ನು ಎಳೆದರು. ಮಂಗಳ ವಾದ್ಯಗಳ ವಾದ್ಯದೊಂದಿಗೆ ರಥೋತ್ಸವ ಆರಂಭವಾಗುತ್ತಿದ್ದಂತೆ ಭಕ್ತರು ಹಣ್ಣು, ಜವನಗಳನನ್ನು ಅರ್ಪಿಸಿ ಭಕ್ತಿ ಭಾವವನ್ನು ಮೆರೆದರು.

ರಥೋತ್ಸವಕ್ಕೆ ಚಾಲನೆ ಸಿಗುತ್ತಿದ್ದಂತೆ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅವರ ಅಡ್ಡ ಪಲ್ಲಕ್ಕಿ ಉತ್ಸವವೂ ಕೂಡ ಪ್ರಾರಂಭವಾಯಿತು. ಒಂದೆಡೆ ಭಕ್ತರು ರಥವನ್ನು ಎಳೆದು ಧನ್ಯರಾಗುತ್ತಿದ್ದರೆ ಇನ್ನೊಂದೆಡೆ ಸರ್ವಾಲಂಕಾರ ಭೂಷಿತರಾಗಿ ಚಿನ್ನದ ಕಿರೀಟವನ್ನು ಧರಿಸಿ ಪಲ್ಲಕ್ಕಿಯಲ್ಲಿ ಕುಳಿತು ಭಕ್ತಾದಿಗಳಿಗೆ ದರ್ಶನ ನೀಡುತ್ತಿದ್ದ ಶ್ರೀಗಳನ್ನು ನೋಡಿ ಕಣ್ತುಂಬಿಕೊಂಡರು. ಶ್ರೀಗಳು ಹಸನ್ಮುಖಿಯಾಗಿ ಎಲ್ಲರಿಗೂ ದರ್ಶನ ನೀಡಿದರು.

ರಥೋತ್ಸವ ಮತ್ತು ಅಡ್ಡ ಪಲ್ಲಕಿ ಉತ್ಸವ ರಥಬೀದಿಯಲ್ಲಿ ಸಂಚರಿಸಿ ರಥಬೀದಿ ದಕ್ಷಿಣ ದಿಕ್ಕಿನಲ್ಲಿರುವ ಗಣಪತಿ ದೇವಸ್ಥಾನದವರೆಗೆ ಚಲಿಸಿತು. ಶ್ರೀಗಣಪತಿಗೆ ಪೂಜೆ ಸಲ್ಲಿಸಿದ ನಂತರ ವಾಪಸ್ ರಥಬೀದಿಯಲ್ಲೇ ಬಂದ ರಥೋತ್ಸವ ಮೂಲ ಸ್ಥಾನದಲ್ಲಿ ನಿಂತಿತು. ಅಷ್ಟರಲ್ಲಾಗಲೇ ಬೆಳಕು ಮೂಡಿತ್ತು. ನೆರಿದ್ದಿದ್ದ ಲಕ್ಷಾಂತರ ಮಂದಿ ಭಕ್ತರ ನಡುವೆ ರಥೋತ್ಸವ ಬಹಳ ವಿಜೃಂಭಣೆಯಿಂದ ನೆರವೇರಿತು,

ರಥೋತ್ಸವದ ಹಿನ್ನೆಲೆಯಲ್ಲಿ ಪೊಲೀಸ್ ಬಂದೂಬಸ್ತ್ ಅನ್ನು ಜಿಲ್ಲಾಡಳಿತ ಆಯೋಜಿಸಿತು.

**ರಥೋತ್ಸವಕ್ಕೆ ಜನಸಾಗರ:** ಆದಿಚುಂಚನಗಿರಿ



ಜಾತ್ರಾ ಮಹೋತ್ಸವಕ್ಕೆ ನಾಡಿನ ವಿವಿಧೆಡೆಗಳಿಂದ ಲಕ್ಷಾಂತರ ಮಂದಿ ಭಕ್ತರು ಶ್ರೀಕ್ಷೇತ್ರಕ್ಕೆ ಆಗಮಿಸಿದ್ದರು. ರಾತ್ರಿಯಿಡೀ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಆಗಮಿಸಿದ ಭಕ್ತರು ರಥದ ಬೀದಿ, ಕಲ್ಯಾಣಿ ಬೀದಿ ಸೇರಿದಂತೆ ಮಠದ ಬೆಟ್ಟದ ತಪ್ಪಲಿನ ಇಕ್ಕೆಲಗಳಲ್ಲಿ ಭಕ್ತರು ತುಂಬಿ ತುಳುಕಿತ್ತಿದ್ದರು. ಶ್ರೀರಂಗಪಟ್ಟಣ–ಬೀದರ್ ಹೆದ್ದಾರಿಯಲ್ಲಿರುವ ಕ್ಷೇತ್ರದ ಮುಖ್ಯದ್ವಾರದಿಂದ ತುಮಕೂರು ಹಾಗೂ ಮೈಸೂರು ಮಾರ್ಗಗಳ ಎರಡೂ ಬದಿಯಲ್ಲಿ ಕಿಲೋಮೀಟವರೆಗೆ ವಾಹನಗಳು ನಿಂತಿದ್ದವು.

ಬೆಟ್ಟದ ಬಂಡೆಯ ಮೇಲೆ ಪ್ರದರ್ಶನಗೊಂಡ ವಿದ್ಯುತ್ ದೀಪಗಳ ಅಲಂಕೃತ ನೋಡುಗರನ್ನು ಆಕರ್ಷಿಸಲು ಕಾಣುತ್ತಿತ್ತು.

**ಅನ್ನಪ್ರಸಾದ ಕೇಂದ್ರಗಳಿಗೂ ಚಾಲನೆ**

ರಥೋತ್ಸವಕ್ಕೆ ಆಗಮಿಸಿದ ಲಕ್ಷಾಂತರ ಭಕ್ತರಿಗೆ ಊಟಕ್ಕೆ ಯಾವುದೇ ತೊಂದರೆ ಆಗದಂತೆ ಗಿರಿಯ ಐದಾರು ಕಡೆ ಊಟದ ವ್ಯವಸ್ಥೆಯನ್ನು ಮಾಡಲಾಗಿದ್ದು ಈ ಕೇಂದ್ರಗಳಿಗೆ ಶ್ರೀಗಳು ಅನ್ನಪ್ರಸಾದ ಕೇಂದ್ರಗಳಿಗೆ ಭೇಟಿ ನೀಡಿ ಚಾಲನೆ ನೀಡಿದರು.

**ಪುಷ್ಕರಣಿಯಲ್ಲಿ ತೆಪ್ಪೋತ್ಸವ:** ಆದಿಚುಂಚನಗಿರಿ ರಥೋತ್ಸವ ಮುನ್ನ ಗುರುವಾರ ರಾತ್ರಿ ಆದಿಚುಂಚನಗಿರಿಯ ಪುಷ್ಕರಣಿಯಲ್ಲಿ ತೆಪ್ಪೋತ್ಸವ ನಡೆಯಿತು. ಇದೇ ಸಂದರ್ಭದಲ್ಲಿ ಬೈರವೇಶ್ವರ ಸ್ವಾಮಿ ದ ದಸರಿಘಟ್ಟದ ಶ್ರೀ ಚೌಡೇಶ್ವರಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದ್ದು ಭೈರವಾಕ್ಯ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಪುತ್ಥಳಿಯನ್ನುಇಟ್ಟು ಶ್ರೀ ನಿರ್ಮಾಲಾನಂದ ನಾಥ ಮಹಾಸ್ವಾಮಿಜಿ ಸೇರಿದಂತೆ ತೆಪ್ಪೋತ್ಸವದಲ್ಲಿ ಭಾಗಿಯಾದರು.

## ಸರ್ವಧರ್ಮದ ಸಮನ್ವತೆಯ ಶಾಂತಿ ಸಂದೇಶ ಮೂಲ ಮಂತ್ರ




ಧರ್ಮಗಳ ಸೌಮ್ಯತೆ ಸಾಮರಸ್ಯ ನಮ್ಮ ಧರ್ಮ ಬಗ್ಗೆ ಸ್ವಾಭಿಮಾನವಿದ್ದು ಬೇರೆ ಧರ್ಮಗಳ ಬಗ್ಗೆ ಅಸಮಾನತೆ ಬೇಡವೆಂದು ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಸನ್ನಾಥ ಸ್ವಾಮೀಜಿ ಮಾತನಾಡಿದರು

ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಜಾತ್ರಾ ಮಹೋತ್ಸವದ ಪ್ರಯುಕ್ತ ಬಿಜಿಎಸ್ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ ಸರ್ವಧರ್ಮ ಸಮ್ಮೇಳನದಲ್ಲಿ ಹಿಂದೂ ಧರ್ಮ ಕುರಿತು ಮಾತನಾಡಿದರು.

ಹಿಂದೂ ಧರ್ಮಗಳ ಸಮನ್ವಯದಿಂದ ಎಲ್ಲರೂ ಶಾಂತಿಯುತ ಬದುಕು ನಡೆಸಬೇಕು ಎಂಬ ಆಶಯ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಸರ್ವಧರ್ಮ ಸಮ್ಮೇಳನ ಆರಂಭಿಸಿದ್ದರು. ಆ ಹಾದಿಯಲ್ಲಿ ಇಂದು ಧರ್ಮ ಸಮ್ಮೇಳನ ವಿವಿಧ ಧರ್ಮ ಗುರುಗಳು ಭಾಗಿಯಾಗಿ ಧರ್ಮ ಶ್ರೇಷ್ಠ ದ ಮೂಲ ಮಂತ್ರ ಶಾಂತಿ ಸಂದೇಶ ಎಂಬ ಘೋಷಣೆ ನಿತ್ಯ ನಿರಂತರವಾಗಿದೆ ಎಂದು ಮಾತನಾಡಿದರು.

ಧರ್ಮಗಳ ಸಮನ್ವಯದಿಂದ ಬದುಕಬೇಕೆಂಬ ಗುರಿ ಹಾಗೂ ಉದ್ದೇಶದಿಂದ ಸರ್ವಧರ್ಮ ಸಮ್ಮೇಳನ ನಡೆಯುತ್ತದೆ ಹಿಂದೂ ಧರ್ಮದ ಸಾಮರಸ್ಯವು ಬೃಹತ್ ಗ್ರಂಥಗಳಲ್ಲಿಯೂ ಉಲ್ಲೇಖನ ದಲ್ಲಿ ತಿಳಿಸಿದೆ.

ನಮ್ಮ ಚಿಂತನೆಗಳು ಸರ್ವಕಾಲಿಕ ಸರ್ವ ದೃಷ್ಟಿಯಿಂದ ಯೋಚನೆ ಮಾಡಿದಾಗ ಆತ್ಮ ಚಿಂತನೆಯಿಂದ ಮಾಡುವ ಕೆಲಸ ಹಿಂದೂ ಧರ್ಮದಲ್ಲಿಯೂ ಶ್ರೇಷ್ಠ ಸ್ಥಾನವಿದ್ದು ಇಂತಹ ಹಿಂದೂ ಧರ್ಮದಕ್ಕೆ ಶ್ರೇಷ್ಠತೆ ಇದೆ.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಮಹಾಭೂತಿ ಸಂಶೋಧನಾ ಕೇಂದ್ರದ ಮಾರ್ಗದರ್ಶಕರಾದ ರಾಜೇಂದ್ರಸಪನೋ ಮಾತನಾಡಿ ಅಜ್ಞಾನಿಗಳನ್ನು ಜ್ಞಾನಿಗಳನ್ನಾಗಿಸುವುದು ಎಲ್ಲಾ ಧರ್ಮ ಗುರುಗಳ ಕಾಯಕ ವಾಗಿದ್ದು ಆಗಾಗಿ ಎಲ್ಲರನ್ನು ಒಟ್ಟಿಗೆ ಕರೆದುಯುವ ಪ್ರಯತ್ನ ಪಾಲ್ಗೊಳ್ಳುವಿಕೆ ಶಾಂತಿ ಧರ್ಮ ನೆಲೆಸುವ ಪ್ರಯತ್ನ ವಾಗಲಿದೆ ಎಂದರು.

ಜೈನ ಧರ್ಮ ಬಗ್ಗೆ ಶ್ರವಣಬೆಳಗೊಳದ ದಿಗಂಬರ ಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಕ್ರೈಸ್ತ ಧರ್ಮದ ಕುರಿತು ರೆವೆನ್ಡ್ ಫಾದರ್ ಸ್ಟಾನಿ ಡಿಸೋಜ ಮತ್ತು ಇಸ್ಲಾಂ ಧರ್ಮದ ಬಗ್ಗೆ ಉಡುಪಿಯ ಉಪನ್ಯಾಸಕ ಮಹಮ್ಮದ್ ಸಾಧಿಕ್ ಧರ್ಮಗಳ ಬಗ್ಗೆ ತಿಳಿಸಿದರು.

ಆದಿಚುಂಚನಗಿರಿ ಮೈಸೂರು ಶಾಖ ಮಠದ ಸೋಮನಾಥ ಸ್ವಾಮೀಜಿ ಪ್ರಾಥಮಿಕ ಭಾಷಣ ಮಾಡಿದರು.ಶ್ರೀ ನಿರ್ಮಾಲಾ ನಂದನಾಥ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪುರುಷೋತ್ತಮಾನಂದ ಸ್ವಾಮೀಜಿ. ಸೋಮೇಶ್ವರನಾಥ ಸ್ವಾಮೀಜಿ. ಶೇಖರ್ ನಾಥ ಸ್ವಾಮೀಜಿ. ಧರ್ಮಪಾಲನಾಥ ಸ್ವಾಮೀಜಿ.ಹಾಗೂ ಶಾಖ ಮಠಗಳ ಸ್ವಾಮೀಜಿಗಳು ಈ ಸಂದರ್ಭದಲ್ಲಿ ಹಾಜರಿದ್ದರು

## ಸೌಮ್ಯ ಕೇಶವ ಸ್ವಾಮಿ ವೈಭವದ ಬ್ರಹ್ಮ ರಥೋತ್ಸವ



ಪಟ್ಟಣದ ಅನಂತ ಕ್ಷೇತ್ರವೆಂದು ಪ್ರಸಿದ್ಧ ವಾಗಿರುವ ಶ್ರೀ ಸೌಮ್ಯ ನಾಯಕಿ ಸಮೇತ ಶ್ರೀ ಸೌಮ್ಯಕೇಶವ ಸ್ವಾಮಿ ರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಶುಕ್ರವಾರ ಪೂರ್ಣಿಮಾ ಫುಬ್ಬಾ ನಕ್ಷತ್ರದಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು.

ಬ್ರಹ್ಮ ರಥೋತ್ಸವದ ಅಂಗವಾಗಿ ಶುಕ್ರವಾರ ಬೆಳಿಗ್ಗೆಯಿಂದಲೇ ದೇವರಿಗೆ ಹೂವಿನ ಅಲಂಕಾರ, ಪಂಚಾಮೃತ ಕ್ಷೀರ, ಅಭಿಷೇಕ, ಮಹಾಮಗಳಾರತಿ ಸೇರಿದಂತೆ ಅನೇಕ ಪೂಜಾ ಕೈಂಕರ್ಯಗಳು ಪ್ರಧಾನ ಅರ್ಚಕರಾದ ಶ್ರೀ ತಿರುನಾರಾಯಣ್ ಹಾಗೂ ಕೇಶವ ರವರ ತಂಡದಿಂದ ನೆರವೇರಿದವು.

ನಾಗಮಂಗಲ ಶಿರಸ್ದಾರ್ ಮಲ್ಲಿಕಾರ್ಜುನ್ ಹಾಗೂ ಚಂದ್ರಶೇಖರ್ ರಥೋತ್ಸವಕ್ಕೆ ಚಾಲನೆ ನೀಡಿದರು.

ಈ ವೇಳೆ ಗೋವಿಂದ ನಾಮಸ್ಮರಣೆ, ಜೈ ಘೋಷ ಕೂಗುತ್ತಾ ಬಿಸಿಲಿನ ತಾಪವನ್ನು ಲೆಕ್ಕಿಸದೆ ಭಕ್ತಾದಿಗಳು ರಥೋತ್ಸವವನ್ನು ಬಹಳ ಉತ್ಸಾಹದಿಂದ ಎಳೆದರು. ಶ್ರೀ ಸೌಮ್ಯ ಕೇಶವ ಸ್ವಾಮಿ ಬ್ರಹ್ಮ ರಥೋತ್ಸವ ಮಹಾನ್ ನಿವೇದನ ಸೇವಾ ಸಮಿತಿ ವತಿಯಿಂದ ಸಾವಿರಾರು ಭಕ್ತರಿಗೆ ಅನ್ನದಾನವನ್ನು ಏರ್ಪಡಿಸಿದ್ದರು.

ಬ್ರಹ್ಮ ರಥೋತ್ಸವ ಕಾರ್ಯಕ್ರಮದಲ್ಲಿ ಅಧ್ಯಕ್ಷ ಸಿ ಕುಮಾರ್, ಶಿವೇಗೌಡ್ರು ಖಜಾಂಚಿ ರುದ್ರೇಶ್, ಲಕ್ಷ್ಮಿ ರಂಗಪ್ಪ ಹಾಗೂ ಸಾವಿರಾರು ಭಕ್ತಾದಿಗಳು ಉಪಸ್ಥಿತರಿದ್ದರು.

# ಗುಡಿಹಟ್ಟಿ ಶ್ರೀವೆಂಕಟರಮಣಸ್ವಾಮಿ ರಥೋತ್ಸವ

**ಹನೂರು:** ತಾಲೂಕಿನ ಬೂದುಬಾಳು ಶ್ರೀಕ್ಷೇತ್ರ ಗುಡಿಹಟ್ಟಿ ಶ್ರೀ ವೆಂಕಟರಮಣಸ್ವಾಮಿ ಬ್ರಹ್ಮ ರಥೋತ್ಸವವು ಅಪರಾಹ್ನ 12 ರ ಸಮಯದಲ್ಲಿ ಧಾರ್ಮಿಕ ವಿಧಿ ವಿಧಾನಗಳಂತೆ ಸಹಸ್ರಾರು ಭಕ್ತಾದಿಗಳ ಸಮ್ಮುಖದಲ್ಲಿ ಗೋವಿಂದ..... ಗೋವಿಂದ ..... ಘೋಷಣೆಯೊಂದಿಗೆ ವಿಜೃಂಭಣೆಯಿಂದ ಜರುಗಿತು.

ಬೂದುಬಾಳು ಶ್ರೀಕ್ಷೇತ್ರ ಗುಡಿಹಟ್ಟಿ ಶ್ರೀ ವೆಂಕಟರಮಣಸ್ವಾಮಿ ಜಾತ್ರೆ ಮಹೋತ್ಸವ ಪ್ರಯುಕ್ತ ಇಂದು ಶುಕ್ರವಾರ ಬ್ರಹ್ಮ ರಥೋತ್ಸವವು ಜರುಗಿತು. ಶ್ರೀ ವೆಂಕಟರಮಣಸ್ವಾಮಿ ಸ್ವಾಮಿಗೆ ವಿಶೇಷ ಪೂಜೆ ಪುನಸ್ಕಾರಗಳನ್ನು ನೇರವೇರಿಸಿದರು.

ನಂತರ ಸ್ವಾಮಿಯ ಉತ್ಸವ ಮೂರ್ತಿಯನ್ನು ಸತ್ತಿಗೆ, ಸೂರಿಪಾನಿ ಹಾಗೂ ಮಂಗಳ ವಾದ್ಯ ತಮಟದೊಂದಿಗೆ ದೇಗುಲದ ಸುತ್ತ ಪ್ರದಕ್ಷಿಣೆ ಹಾಕಿ ನಂತರ ಶ್ರೀ ವೆಂಕಟರಮಣಸ್ವಾಮಿ ಸ್ವಾಮಿಯ ಉತ್ಸವ ಮೂರ್ತಿಯನ್ನು ರಥದ ಮೇಲೆ ಪ್ರತಿಷ್ಠಾಪಿಸಿ ಪೂಜಾ ಪುನಸ್ಕಾರಗಳನ್ನು ನೇರವೇರಿಸಿದರು.

ಬಾನಂಗಳದಲ್ಲಿ ಗರುಡ ಪಕ್ಷಿ ಮೂರು ಸುತ್ತು ಪ್ರದಕ್ಷಿಣೆ ಹಾಕಿದ ನಂತರ12: ಗಂಟೆ ಗೆ ರಥೋತ್ಸವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಜರುಗಿತು. ನಂತರ ಮಹಾ ರಥೋತ್ಸವವನ್ನು ಎಳೆಯಲು ಚಾಲನೆ ನೀಡಲಾಯಿತು. ಜಾತ್ರೆಗೆ ಆಗಮಿಸಿದ್ದ ಸಾವಿರಾರು ಭಕ್ತಾದಿಗಳು ಗೋವಿಂದ..... ಗೋವಿಂದ...... ಎಂದು ಘೋಷಣೆಯೊಂದಿಗೆ ರಥೋತ್ಸವವನ್ನು ಎಳೆದು ಭಕ್ತಿ ಪರಾಕಾಷ್ಠೆ ಮೆರೆದರು.



ರಥೋತ್ಸವಕ್ಕೆ ಹಣ್ಣು ಜವನ ಹೂ ಎಸೆದು ಹರಕೆ ಪೂಜೆ ಸಲ್ಲಿಸಿ. ಧೂಪ ಕರ್ಪೂರ ಹಚ್ಚಿ ಪೂಜೆ ಸಲ್ಲಿಸಿ ಕೈಮುಗಿದು ಪ್ರಾರ್ಥನೆ ಸಲ್ಲಿಸಿದರು. ಮಾಜಿ ಶಾಸಕರಾದ ಪರಿಮಳ ನಾಗಪ್ಪ, ಆರ್.ನರೇಂದ್ರ ಅವರು ರಥೋತ್ಸವದಲ್ಲಿ ಭಾಗಿಯಾಗಿದ್ದರು. ಕಾಮಗೆರೆ, ಬಿ.ಗುಂಡಾಪುರ, ಮಂಗಲ, ಸಿಂಗಾನಲ್ಲೂರು, ದೊಡ್ಡಿಂದುವಾಡಿ ಸೇರಿದಂತೆ ತಾಲೂಕಿನಾದ್ಯಂತ ಸಹಸ್ರಾರು ಭಕ್ತಾದಿಗಳು ಆಗಮಿಸಿದ್ದರು. ಮುಂಜಾಗ್ರತೆಗಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಬೂದುಬಾಳು ಶ್ರೀಕ್ಷೇತ್ರ ಗುಡಿಹಟ್ಟಿ ಶ್ರೀ ವೆಂಕಟರಮಣಸ್ವಾಮಿ ಜಾತ್ರೆ. 13-3-2025 ರಿಂದ 17-3-2025 ವರೆಗಿನ ನಾಲ್ಕು ದಿನಗಳು ಜಾತ್ರೆ ವಿಶೇಷವಾಗಿ ಇಂದು ಶುಕ್ರವಾರ ಬ್ರಹ್ಮ ರಥೋತ್ಸವ ಜರುಗಿತು. ಶನಿವಾರದಂದು ಪ್ರಹ್ಲಾದೋತ್ಸವ ರಾತ್ರಿ ಮಂಡ್ಯದ ಕಾಸರವಾಡಿ ಅವರಿಂದ ಹರಿಕಥೆ ಇರುತ್ತದೆ, ಭಾನುವಾರ ವಸಂತೋತ್ಸವ, ಸೋಮವಾರ ಗರುಡೋತ್ಸವ ನಡೆಯಲಿದೆ.

# ಹೋಳಿ ಹುಣ್ಣಿಮೆ ಅಂಗವಾಗಿ ವಿಶೇಷ ಪೂಜೆ

ಮಾಲೂರು: ಹೋಳಿ ಹುಣ್ಣಿಮೆ ಹಬ್ಬದ ಅಂಗವಾಗಿ ಪಟ್ಟಣದ ಶ್ರೀ ಶಂಕರ ನಾರಾಯಣಸ್ವಾಮಿ ದೇವಾಲಯದ ಬ್ರಹ್ಮರಥೋತ್ಸವಕ್ಕೆ ತಹಸೀಲ್ದಾರ್ ಎಂ.ವಿ.ರೂಪ ಅವರು ವಿಶೇಷ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ಪಟ್ಟಣದ ದೊಡ್ಡಪೇಟೆ ಮುಖ್ಯ ರಸ್ತೆಯಲ್ಲಿರುವ ಮುಜರಾಯಿ ಇಲಾಖೆಗೆ ಸೇರಿದ ಪುರಾತನ ಶ್ರೀ ಶಂಕರ ನಾರಾಯಣಸ್ವಾಮಿ ದೇಗುಲದಲ್ಲಿ ಬ್ರಹ್ಮರಥೋತ್ಸವದ ಅಂಗವಾಗಿ ದೇವಾಲಯದ ಅರ್ಚಕ ಶ್ರೀನಾಥ್ ದೀಕ್ಷಿತ್ ಅವರ ನೇತೃತ್ವದಲ್ಲಿ ಕಳೆದ 9 ದಿನಗಳಿಂದ ವಿವಿಧ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು.

ಶ್ರೀ ಶಂಕರ ನಾರಾಯಣಸ್ವಾಮಿ ದೇಗುಲದಲ್ಲಿ ಹೋಳಿ ಹುಣ ಹುಣ್ಣಿಮೆ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಬ್ರಹ್ಮರಥೋತ್ಸವ ಅಂಗವಾಗಿ ಶಂಕರನಾರಾಯಣಸ್ವಾಮಿ ಮೂಲ ವಿಗ್ರಹಕ್ಕೆ ವಿಶೇಷ ಹೂವಿನ ಅಲಂಕಾರ ಮಾಡಿದ ನಂತರ ಸಂಪ್ರದಾಯಬದ್ದವಾಗಿ ಮಂಗಳ ವಾದ್ಯ ಗಳೊಂದಿಗೆ ಪಾರ್ವತಿ ಸಮೇತ ಶಂಕರನಾರಾಯಣಸ್ವಾಮಿ ಉತ್ಸವ ಮೂರ್ತಿಗಳನ್ನು ದೇಗುಲವನ್ನು ಪ್ರದಕ್ಷಿಣೆ ಹಾಕಿದ ನಂತರ ಅಲಂಕೃತ ಉತ್ಸವ ಮೂರ್ತಿಗಳನ್ನು ರಥದಲ್ಲಿ ಕುಳ್ಳರಿಸಿ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದ ನಂತರ ರಥೋತ್ಸವಕ್ಕೆ ತಹಸಿಲ್ದಾರ್ ಎಂ.ವಿ.ರೂಪ ವಿಶೇಷ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.



ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ಭಕ್ತಾಧಿಗಳು ಬ್ರಹ್ಮರಥೋತ್ಸವವನ್ನು ಗೋವಿಂದ ನಾಮಸ್ಮರಣೆ ಮಾಡುತ್ತಾ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಎಳೆದು ತಮ್ಮ ಹರಿಕೆಯನ್ನು ಸಲ್ಲಿಸಿದರು. ಮಹಿಳೆಯರು ಶಂಕರನಾರಾಯಣಸ್ವಾಮಿಗೆ ಹೂವು ಹಣ್ಣು ಅರ್ಪಿಸಿ ಪೂಜೆ ಸಲ್ಲಿಸಿದರು. ಬ್ರಹ್ಮ ರಥೋತ್ಸವದ ಪ್ರಯುಕ್ತ ಪಟ್ಟಣದ ಶಂಕರನಾರಾಯಣಸ್ವಾಮಿ ದೇವಾಲಯ ಆವರಣ ಸೇರಿದಂತೆ ರಥೋತ್ಸವ ತೆರಳುವ ರಸ್ತೆ ಬದಿಗಳಲ್ಲಿ ಪಾನಕ, ನೀರುಮಜ್ಜಿಗೆ ಮತ್ತು ಕೋಸಂಬರಿಯನ್ನು ವಿತರಿಸಲಾಯಿತು.

ಪುರಸಭಾ ಅಧ್ಯಕ್ಷೆ ಕೋಮಲನಾರಾಯಣ್, ಸ್ಥಾಯಿ ಸಮಿತಿ ಅಧ್ಯಕ್ಷ ಎ.ರಾಜಪ್ಪ, ಮುಖ್ಯಾಧಿಕಾರಿ ಪ್ರದೀಪ್, ದೇವಾಲಯ ಪ್ರಧಾನ ಅರ್ಚಕ ಶ್ರೀನಾಥ್ ಧೀಕ್ಷಿತ್, ಕೋಟಾ ಲಕ್ಷ್ಮಣ್, ಕೋಟಾ ಹರೀಶ್, ಕೆಂಪಣ್ಣ, ಇನ್ನಿತರರು ಹಾಜರಿದ್ದರು.

# ತಾತಯ್ಯ ಅವರ ಭವಿಷ್ಯವಾಣಿಗಳು ನಿಜವಾಗುತ್ತಿವೆ

ಶಿಡ್ಲಘಟ್ಟ: ಕೈವಾರ ತಾತಯ್ಯ ಅವರ ಬದುಕು, ಅವರ ಭವಿಷ್ಯವಾಣಿಗಳು, ಆಧ್ಯಾತ್ಮಿಕ ಜೀವನ ಎಲ್ಲರಿಗೂ ಸ್ಫೂರ್ತಿ, ಪ್ರೇರಣೆ, ನಮ್ಮ ನೆಲದಲ್ಲಿ ಹುಟ್ಟಿ ಬೆಳೆದಿರುವುದು ನಮ್ಮೆಲ್ಲರ ಪುಣ್ಯ ಎಂದು ಶಾಸಕರಾದ ಬಿ.ಎನ್. ರವಿಕುಮಾರ್ ತಿಳಿಸಿದರು.

ನಗರದ ಚಿಂತಾಮಣಿ ರಸ್ತೆಯ ಶ್ರೀ ಆಂಜನೇಯಸ್ವಾಮಿ ದೇವಾಲಯದಲ್ಲಿ ಹಮ್ಮಿಕೊಂಡಿದ್ದ ಕೈವಾರ ತಾತಯ್ಯ ಅವರ 299 ನೇ ಜಯಂತಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೈವಾರ ತಾತಯ್ಯ ನವರು ನುಡಿದಿರುವ ಅನೇಕ ಭವಿಷ್ಯವಾಣಿಗಳು ಇಂದು ನಿಜವಾಗುತ್ತಿದ್ದು, ಅವರ ಅನೇಕ ತತ್ವಗಳು, ಸಂಕೀರ್ತನೆಗಳು ನಿರಂತರವಾದವವು ಎಂದರು.

ಸದ್ಗುರು ಶ್ರೀಯೋಗಿ ನಾರೇಯಣ ತಾತಯ್ಯ ಅವರ ಉತ್ಸವವನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ನೆರವೇರಿಸಲಾಯಿತು. ಕೇರಳ ತಂಡದ ಚಂಡೆ ವಾದ್ಯವು ಆಕರ್ಷಣೀಯವಾಗಿತ್ತು.



ಈ ಸಂದರ್ಭದಲ್ಲಿ ಮಾಜಿ ಸಚಿವರಾದ ವಿ.ಮುನಿಯಪ್ಪ, ಮಾಜಿ ಶಾಸಕ ಎಂ.ರಾಜಣ್ಣ, ತಹಶೀಲ್ದಾರ್ ಬಿ.ಎನ್.ಸ್ವಾಮಿ, ಕಾಂಗ್ರೆಸ್ ಮುಖಂಡರಾದ ರಾಜೀವ್ ಗೌಡ, ಸಹನಾ ರಾಜೀವ್ ಗೌಡ, ಬಿಜೆಪಿ ಮುಖಂಡರಾದ ಸೀಕಲ್ ರಾಮಚಂದ್ರಗೌಡ, ಗ್ರಾಮಾಂತರ ಮಂಡಲ ಅಧ್ಯಕ್ಷ ಸೀಕಲ್ ಆನಂದ್‌ಗೌಡ, ಜೆಡಿಎಸ್ ಮುಖಂಡ ತಾದೂರು ರಘು, ಕನ್ನಡಸಾಹಿತ್ಯ ಪರಿಷತ್ ಅಧ್ಯಕ್ಷ ಪಟೇಲ್ ನಾರಾಯಣಸ್ವಾಮಿ, ಶ್ರೀ ವೀರಾಂಜನೇಯಸ್ವಾಮಿ ಬಲಿಜ ಸೇವಾ ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಹಾಜರಿದ್ದರು.

# ಲಕ್ಕೂರು ಹೋಬಳಿಯ ಶ್ರೀಪ್ರಸನ್ನ ಲಕ್ಷ್ಮಿವೆಂಕಟರಮಣಸ್ವಾಮಿ ರಥೋತ್ಸವ

ಮಾಲೂರು: ತಾಲೂಕಿನ ಲಕ್ಕೂರು ಹೋಬಳಿಯ ಡಿ.ಎನ್.ದೊಡ್ಡಿ ಗ್ರಾಮದ ಶ್ರೀ ಪ್ರಸನ್ನ ಲಕ್ಷ್ಮಿ ವೆಂಕಟರಮಣಸ್ವಾಮಿ ದೇಗುಲದ ಬ್ರಹ್ಮರಥೋತ್ಸವವು ಸಾವಿರಾರು ಭಕ್ತ ಸಮೂಹದ ನಡುವೆ ವಿಜೃಂಭಣೆಯಿಂದ ನಡೆಯಿತು.

ತಾಲೂಕಿನ ಗಡಿಭಾಗದಲ್ಲಿರುವ ದಾದಿನಾಯನಕನದೊಡ್ಡಿ ಗ್ರಾಮದ ಶ್ರೀ ಪ್ರಸನ್ನ ಲಕ್ಷ್ಮೀವೆಂಕಟರಮಣಸ್ವಾಮಿ ದೇಗುಲಕ್ಕೆ ನೂರಾರು ವರ್ಷಗಳ ಇತಿಹಾಸ ಇದೆ. ಚೋಳರ ಕಾಲದಲ್ಲಿ ಅಭಿವೃದ್ಧಿಗೊಂಡು ಇಂದಿಗೂ ಪ್ರತಿನಿತ್ಯ ಪೂಜಾ ಕೈಂಕರ್ಯಗಳನ್ನು ನೆರವೇರಿಸಿಕೊಂಡು ಬರಲಾಗುತ್ತಿದೆ

ದೇವರ ಉತ್ಸವ ಮೂರ್ತಿಯನ್ನು ಹೂವುಗಳಿಂದ ಸಿಂಗರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣ ಗೆ ನಡೆಸಿದ ನಂತರ ರಥದಲ್ಲಿ ಕುಳ್ಳರಿಸಿ ಪೂಜಿಸಿದ ಮೇಲೆ ರಥೋತ್ಸವ ವಿಶೇಷ ಮಂಗಳವಾದ್ಯಗಳು ಹಾಗೂ ತಮಟೆ ವಾದನಗಳೊಂದಿಗೆ ದೇಗುಲವನ್ನು ಪ್ರದಕ್ಷಿಣೆ ಹಾಕಿದ ರಥವನ್ನು ಮೂಲಸ್ಥಾನದಲ್ಲಿ ನಿಲ್ಲಿಸಿ ದೇವರಿಗೆ ಪೂಜೆ ಸಲ್ಲಿಸಿದ ನಂತರ ರಥೋತ್ಸವ ಕಾರ್ಯಕ್ರಮ ಮುಕ್ತಾಯವಾಯಿತು.




ರಥೋತ್ಸವ ಕಾರ್ಯಕ್ರಮವನ್ನು ವೀಕ್ಷಿಸಲು ದೊಡ್ಡಿ ಗ್ರಾ.ಪಂ. ವ್ಯಾಪ್ತಿಯ ಸುತ್ತ ಮುತ್ತಲ ಗ್ರಾಮಸ್ಥರು, ನೆರೆಯ ತಮಿಳುನಾಡಿನಿಂದ ಆಗಮಿಸಿದ ಭಕ್ತಾಧಿಗಳು ದೇವರ ದರ್ಶನ ಪಡೆದರು. ಹರಿಕೆ ಹೊತ್ತ ಭಕ್ತಾಧಿಗಳು ಹೂವು, ಬಾಳೆಹಣ್ಣು, ಧವನವನ್ನು ರಥದ ಮೇಲೆ ಎಸೆದು ತಮ್ಮ ಹರಿಕೆ ಸಲ್ಲಿಸಿದ ನಂತರ ರಥವನ್ನು ಎಳೆದರು. ಬಿಸಿಲಿನ ಬೇಗೆಯಿಂದ ಬಸವಳಿದ ಭಕ್ತಾಗಳಿಗೆ ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಲಾಯಿತು. ಶಾಸಕ ಕೆ.ವೈ.ನಂಜೇಗೌಡ, ಮುಖಂಡರಾದ ಬಂಟಹಳ್ಳಿ ನಾರಾಯಣಪ್ಪ, ತಿಮ್ಮರಾಯಪ್ಪ, ಸಾದೇಗೌಡ,ದರಖಾಸ್ತು ಸಮಿತಿ ಸದಸ್ಯ ನಾಗಪುರ ನವೀನ್, ಮಾಸ್ತಿ ಚೇತನ್, ದೊಡ್ಡಿ ವಸಂತ್, ದೊಡ್ಡಿ ವೇಣು, ಕೃಷ್ಣಪ್ಪ, ನಾರಾಯಣಪ್ಪ, ಬೆನ್ನಘಟ್ಟ ನಾಗರಾಜ್, ಆನಂದ ರೆಡ್ಡಿ, ಪಿಡಿಒ ನವೀನ್, ಲೋಕೇಶ್, ಕಾರ್ಯದರ್ಶಿ ದಯಾ ನಂದರೆಡ್ಡಿ, ಮುರುಳಿ, ಇನ್ನಿತರರು ಹಾಜರಿದ್ದರು.

# ಅಮೆರಿಕದಿಂದ ಸ್ವಯಂ ಗಡಿಪಾರಾದ ವಿದ್ಯಾರ್ಥಿನಿ

**ವಾಷಿಂಗ್ಟನ್:** ಹಿಂಸೆ ಮತ್ತು ಭಯೋತ್ಪಾದನೆಯನ್ನು ಪ್ರತಿಪಾದಿಸಿದ್ದಕ್ಕಾಗಿ ಹಾಗೂ ಹಮಾಸ್ ಬೆಂಬಲಿಸುವ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ಭಾರತೀಯ ವಿದ್ಯಾರ್ಥಿನಿಯ ವೀಸಾ ರದ್ದುಗೊಳಿಸಲಾಗಿದೆ. ಈ ಬೆಳವಣಿಗೆ ಹಿನ್ನೆಲೆ ವಿದ್ಯಾರ್ಥಿನಿ ಸ್ವಯಂಪ್ರೇರಿತವಾಗಿ ಅಮೆರಿಕ ದೇಶದಿಂದ ಹೊರ ನಡೆದಿದ್ದಾಳೆ.

ಭಾರತೀಯರಾಗಿರುವ ರಂಜನಿ ಶ್ರೀನಿವಾಸನ್ ಅವರು ಕೊಲಂಬಿಯಾ ವಿಶ್ವವಿದ್ಯಾಲಯದ ನಗರ ಯೋಜನೆಯಲ್ಲಿ ಡಾಕ್ಟರೇಟ್ ವಿದ್ಯಾರ್ಥಿಯಾಗಿ ಈ-1 ವಿದ್ಯಾರ್ಥಿ ವೀಸಾದಲ್ಲಿ ಅಮೆರಿಕಕ್ಕೆ ತೆರಳಿದ್ದರು. ಬಳಿಕ ಅಲ್ಲಿ ಹಮಾಸ್ ಬೆಂಬಲಿಸುವ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂದು ಅಮೆರಿಕ ಗೃಹ ಭದ್ರತಾ ಇಲಾಖೆ ಶುಕ್ರವಾರದ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಮಾರ್ಚ್ 5 ರಂದು ವಿದೇಶಾಂಗ ಇಲಾಖೆ ರಂಜನಿಯ ವೀಸಾವನ್ನು ರದ್ದುಗೊಳಿಸಿತ್ತು. ಮಾರ್ಚ್ 11 ರಂದು ಸ್ವಯಂ ಗಡೀಪಾರು ಮಾಡಲು ವಿದ್ಯಾರ್ಥಿನಿ ಕಸ್ಟಮ್ಸ್ ಮತ್ತು ಗಡಿ ರಕ್ಷಣೆ ಹೋಮ್ ಅಪ್ಲಿಕೇಶನ್ ಬಳಸುವ ವಿಡಿಯೋ ತುಣುಕುಗಳು ದೊರಕಿವೆ ಎಂದು



ಗೃಹ ಭದ್ರತಾ ಇಲಾಖೆ ತಿಳಿಸಿದೆ.

ಅಮೆರಿಕದಲ್ಲಿ ವಾಸಿಸಲು ಮತ್ತು ಅಧ್ಯಯನ ಮಾಡಲು ವೀಸಾ ಪಡೆಯುವುದು ಸವಾಲಾಗಿತ್ತು. ನೀವು ಹಿಂಸೆ ಮತ್ತು ಭಯೋತ್ಪಾದನೆ ಪ್ರತಿಪಾದಿಸಿದಾಗ, ಆ ಸವಲತ್ತನ್ನು ರದ್ದುಗೊಳಿಸಲಾಗುತ್ತದೆ ಮತ್ತು ನೀವು ಈ ದೇಶದಲ್ಲಿ ಇರಬಾರದು ಎಂದು ಗೃಹ ಭದ್ರತಾ ಕಾರ್ಯದರ್ಶಿ ಕ್ರಿಸ್ಟಿ ನೋಯೆಮ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಾರ್ಚ್ 10 ರಂದು ದೇಶದಲ್ಲಿ ಅಕ್ರಮವಾಗಿ ನೆಲೆಸಿರುವವರಿಗಾಗಿ ಸ್ವಯಂ - ಗಡೀಪಾರು ವರದಿ ಮಾಡುವ ವೈಶಿಷ್ಟ್ಯದೊಂದಿಗೆ ಗೃಹ ಭದ್ರತಾ ಇಲಾಖೆಯು ಅಃಕ ಹೋಮ್ ಎಂಬ ಅಪ್ಲಿಕೇಶನ್ ಅನ್ನು ಪರಿಚಯಿಸಿತ್ತು. ಇದರ ಮೂಲಕ ದೇಶದಲ್ಲಿ ಅಕ್ರಮವಾಗಿ ನೆಲೆಸಿರುವ ವ್ಯಕ್ತಿಗಳು ದೇಶವನ್ನು ತೊರೆಯಲು ಅರ್ಜಿ ಹಾಕಲು ಅಃಕ ಹೋಮ್ ಮೊಬೈಲ್ ಫೋನ್ ಅಪ್ಲಿಕೇಶನ್ ಅನ್ನು ಬಳಸಬಹುದು. ಅಃಕ ಅಪ್ಲಿಕೇಶನ್ ಸ್ವಯಂ - ಗಡೀಪಾರು ಮಾಡುವ ಆಯ್ಕೆಯನ್ನು ನೀಡುತ್ತದೆ. ಅಕ್ರಮ ನಿವಾಸಿಗಳು ಸ್ವಯಂ ಗಡಿಪಾರಾಗದಿದ್ದರೆ ಅಂತಹವರನ್ನು ನಾವು ಹುಡುಕಿ ಅವರನ್ನು ಗಡೀಪಾರು ಮಾಡುತ್ತೇವೆ ಎಂದು ಗೃಹ ಭದ್ರತಾ ಇಲಾಖೆ ತಿಳಿಸಿದೆ.

ಸದ್ಯ ಇದೇ ಅಪ್ಲಿಕೇಶನ್ ಮೂಲಕ ಭಾರತ ಮೂಲದ ವಿದ್ಯಾರ್ಥಿನಿ ರಂಜನಿ ಶ್ರೀನಿವಾಸನ್ ಸ್ವಯಂ ಗಡಿಪಾರಾಗಿದ್ದಾರೆ.

ವಿಶ್ವವಿದ್ಯಾನಿಲಯ ನಿಯಮ: ಕೊಲಂಬಿಯಾ ವಿಶ್ವವಿದ್ಯಾನಿಲಯದ ನ್ಯಾಯಾಂಗ ಮಂಡಳಿಯು ಕಳೆದ ವರ್ಷ ಗಾಜಾ ಪ್ರತಿಭಟನೆಗಳ ಸಮಯದಲ್ಲಿ ಹ್ಯಾಮಿಲ್ಟನ್ ಹಾಲ್ ಆಕ್ರಮಣಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಬಹು-ವರ್ಷದ ಅಮಾನತುಗಳು, ತಾತ್ಕಾಲಿಕ ಪದವಿ ರದ್ದತಿಗಳು ಮತ್ತು ಉಚ್ಚಾಟನೆಗಳು ಸೇರಿದಂತೆ ನಿರ್ಬಂಧಗಳನ್ನು ವಿಧಿಸಿತ್ತು. ಕೊಲಂಬಿಯಾ ವಿಶ್ವವಿದ್ಯಾನಿಲಯ ತನ್ನ ನಿಯಮಗಳು ಮತ್ತು ನೀತಿಗಳನ್ನು ಜಾರಿಗೊಳಿಸಲು ಮತ್ತು ನಮ್ಮ ಶಿಸ್ತು ಪ್ರಕ್ರಿಯೆಗಳನ್ನು ಸುಧಾರಿಸಲು ಬದ್ಧವಾಗಿದೆ ಎಂದು ಗುರುವಾರ ಹೇಳಿದೆ.

# ಇಬ್ಬರು ಮಕ್ಕಳನ್ನು ಕೊಂದ ಬಳಿಕ ತಂದೆ ಸಾವು

ಆಂಧ್ರ ಪ್ರದೇಶ: ಡೆತ್‌ನೋಟ್ ಬರೆದಿಟ್ಟ ತಂದೆಯೊಬ್ಬ ತನ್ನ ಇಬ್ಬರು ಮಕ್ಕಳನ್ನು ನೀರಿನಲ್ಲಿ ಮುಳುಗಿಸಿ ಕೊಲೆ ಮಾಡಿದ ಬಳಿಕ ತಾನೂ ಸಹ ಸಾವನ್ನಪ್ಪಿದ ಆಘಾತಕಾರಿ ಘಟನೆ ಕಾಕಿನಾಡದ ಸುಬ್ಬರಾವ್ ನಗರದಲ್ಲಿ ಶುಕ್ರವಾರ ನಡೆದಿದೆ.

ಡೆತ್ ನೋಟ್‌ನಲ್ಲಿ ಮಕ್ಕಳ ಭವಿಷ್ಯದ ಬಗ್ಗೆ ದುಃಖ ವ್ಯಕ್ತಪಡಿಸಿ 7 ವರ್ಷದ ಹಿರಿಯ ಮಗ ಮತ್ತು 6 ವರ್ಷದ ಕಿರಿಯ ಮಗ ಇಬ್ಬರ ಕೈ ಮತ್ತು ಕಾಲುಗಳನ್ನು ಹಗ್ಗದಿಂದ ಕಟ್ಟಿ ನೀರಿನಲ್ಲಿ ಮುಳುಗಿಸಿ ಕೊಲೆ ಮಾಡಿರುವ ತಂದೆ ಚಂದ್ರಕಿಶೋರ್, ಬಳಿಕ ತಾನೂ ಸಹ ಸಾವಿಗೆ ಶರಣಾಗಿದ್ದಾನೆ. ಸ್ಥಳದಲ್ಲಿ ಡೆತ್ ನೋಟ್ ಪತ್ತೆಯಾಗಿದೆ. ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗುವುದು ಎಂದು ಸರ್ಪವರಂ ಸಿಐ ಪೆದ್ದಿರಾಜು ಮಾಹಿತಿ ನೀಡಿದ್ದಾರೆ.

ಡೆತ್ ನೋಟ್‌ನಲ್ಲಿ ಮಕ್ಕಳ ಭವಿಷ್ಯದ ಬಗ್ಗೆ ಪ್ರಸ್ತಾಪ: ಸರ್ಕಾರಿ ನೌಕರನಾಗಿದ್ದ ಗೋದಾವರಿ ಜಿಲ್ಲೆಯ ವನಪಲ್ಲಿಯ ಚಂದ್ರಕಿಶೋರ್, ಪತ್ನಿ ತನುಜಾ ಮತ್ತು ತಮ್ಮಿಬ್ಬರ ಮಕ್ಕಳೊಂದಿಗೆ ಕಾಕಿನಾಡದಲ್ಲಿ ಕಳೆದು ಹಲವು ದಿನಗಳಿಂದ ವಾಸಿಸುತ್ತಿದ್ದರು. ತಮ್ಮ ಮಕ್ಕಳ ಶೈಕ್ಷಣಿಕ ಸಾಧನೆಯ ಬಗ್ಗೆ ಕಳವಳಗೊಂಡಿದ್ದ ಚಂದ್ರಕಿಶೋರ್, ಇತ್ತೀಚೆಗೆ ತಮ್ಮ ಮಕ್ಕಳ ಶಾಲೆಯನ್ನು ಬದಲಾಯಿಸಿದ್ದರು. ಆದರೆ, ಮಕ್ಕಳ ಭವಿಷ್ಯದ ಬಗ್ಗೆ ವಿನಾ ಕಾರಣ ಚಿಂತಿಸಿ ಹೀಗೆ ಮಾಡಿಕೊಂಡಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ತನ್ನ 'ಮಕ್ಕಳು ಈ ಸ್ಪರ್ಧಾತ್ಮಕ ಪ್ರಪಂಚದ ಒತ್ತಡವನ್ನು ನಿಭಾಯಿಸಲು ಸಮರ್ಥರಲ್ಲ, ಅವರಿಗೆ ಉತ್ತಮ ಭವಿಷ್ಯ ಕೂಡ ಇಲ್ಲ' ಎಂದು ಚಂದ್ರಕಿಶೋರ್ ಡೆತ್ ನೋಟ್‌ನಲ್ಲಿ ಉಲ್ಲೇಖಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಘಟನೆ ಹೋಳಿ ಹಬ್ಬದ ಸಂಭ್ರಮವನ್ನು ಕಿತ್ತುಕೊಂಡಿದೆ.

ದುರಂತ ಗೊತ್ತಾಗಿದ್ದು ಹೀಗೆ: ಶುಕ್ರವಾರ ಹೋಳಿ ಇದ್ದುದರಿಂದ ಚಂದ್ರಕಿಶೋರ್ ತನ್ನ ಹೆಂಡತಿ ಮತ್ತು ಮಕ್ಕಳನ್ನು ಹೋಳಿ ಆಚರಿಸಲು ತನ್ನ ಕಚೇರಿಗೆ ಕರೆದುಕೊಂಡು ಹೋಗಿದ್ದರು. ಕೆಲವು ನಿಮಿಷದ ಬಳಿಕ ಪತ್ನಿಯನ್ನು ಅಲ್ಲಿಯೇ ಬಿಟ್ಟು, ಮಕ್ಕಳಿಗೆ ಶಾಲಾ ಸಮವಸ್ತ್ರ ಕೊಡಿಸುವುದಿದೆ, ಅವರ ಅಳತೆಯನ್ನು ನೀಡಬೇಕು, ಹಾಗಾಗಿ ಟೈಲರ್ ಬಳಿ ಕರೆದುಕೊಂಡು ಹೋಗುತ್ತಿದ್ದೇನೆ, ಹತ್ತು ನಿಮಿಷಗಳಲ್ಲಿ ಹಿಂತಿರುಗುತ್ತೇನೆ ಎಂದು ಹೇಳಿ ಹೋಗಿದ್ದರು. ಗಂಟೆಯಾದರೂ ಪತಿ ಮತ್ತು ಮಕ್ಕಳು ಬಾರದ ಹಿನ್ನೆಲೆಯಲ್ಲಿ ಪತ್ನಿ ತನುಜಾ, ಫೋನ್ ಮಾಡಿದರೂ ಸ್ವೀಕರಿಸಿರಲಿಲ್ಲ. ಅನುಮಾನಗೊಂಡು ಅಲ್ಲಿದ್ದ ಪತಿಯ ಸಹೋದ್ಯೋಗಿಗಳೊಂದಿಗೆ ತಮ್ಮ ಅಪಾರ್ಟ್‌ಮೆಂಟ್‌ಗೆ ತೆರಳಿದ್ದಾರೆ. ಬಂದು ಕಿಟಕಿಯ ಮೂಲಕ ನೋಡಿದಾಗ, ತನ್ನ ಗಂಡ ಸೀಲಿಂಗ್ ಫ್ಯಾನ್‌ಗೆ ನೇತಾಡುತ್ತಿರುವ ಭಯಾನಕ ದೃಶ್ಯ ಕಂಡಿದ್ದಾರೆ. ಬಾಗಿಲನ್ನು ಒಡೆದು ಒಳ ಹೋಗಿ ನೋಡಿದಾಗ ನೀರು ತುಂಬಿದ ಬಕೆಟ್‌ಗಳಲ್ಲಿ, ಕೈ ಮತ್ತು ಕಾಲುಗಳನ್ನು ಕಟ್ಟಿಹಾಕಲಾದ ತನ್ನ ಮಕ್ಕಳ ಮೃತ ದೇಹಗಳನ್ನು ನೋಡಿ ತನುಜಾ ಆಘಾತದಿಂದ ಕುಸಿದುಬಿದ್ದಿದ್ದಾರೆ.

ಡೆತ್ ನೋಟ್‌ನಲ್ಲಿ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ದುಃಖ ವ್ಯಕ್ತಪಡಿಸಿದ್ದು, ಅದನ್ನು ವಶಕ್ಕೆ ಪಡೆಯಲಾಗಿದೆ. ಚಂದ್ರಕಿಶೋರ್ ಆರ್ಥಿಕವಾಗಿ ಚೆನ್ನಾಗಿದ್ದರು. ಅಷ್ಟು ಸುಲಭವಾಗಿ ತನ್ನ ಪ್ರಾಣವನ್ನು ತೆಗೆದುಕೊಳ್ಳುವ ವ್ಯಕ್ತಿಯಲ್ಲ, ಯಾವುದೇ ಆರ್ಥಿಕ ಸಮಸ್ಯೆಗಳಿರಲಿಲ್ಲ, ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಹೇಡಿ ಕೂಡ ಆಗಿರಲಿಲ್ಲ ಎಂದು ಮೃತನ ಸಹೋದರ ದೂರಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸಲಾಗುತ್ತದೆ ಎಂದು ಸರ್ಪವರಂ ಸಿಐ ಪೆದ್ದಿರಾಜು ಅವರು ಮಾಹಿತಿ ನೀಡಿದ್ದಾರೆ.

# ಪಾಕ್ ತರಾಟೆಗೆ ತೆಗೆದುಕೊಂಡ ಭಾರತ

ವಿಶ್ವಸಂಸ್ಥೆ: ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಬಗ್ಗೆ ಅನಾವಶ್ಯಕವಾಗಿ ಉಲ್ಲೇಖಿಸಿದ್ದಕ್ಕಾಗಿ ಭಾರತವು ಪಾಕಿಸ್ತಾನವನ್ನು ತರಾಟೆಗೆ ತೆಗೆದುಕೊಂಡಿದೆ. ಅಂತಹ ಹೇಳಿಕೆಗಳು ದೇಶದ ಹಕ್ಕನ್ನು ಮಾನ್ಯ ಮಾಡುವುದಿಲ್ಲ ಅಥವಾ ಗಡಿಯಾಚೆಗಿನ ಭಯೋತ್ಪಾದನೆಯ ಅಭ್ಯಾಸವನ್ನು ಸಮರ್ಥಿಸುವುದಿಲ್ಲ ಎಂದು ನವದೆಹಲಿ ಪ್ರತಿಪಾದಿಸಿದೆ.



ಜಮ್ಮು-ಕಾಶ್ಮೀರದ ಬಗ್ಗೆ ಅನಾವಶ್ಯಕವಾಗಿ ಮಾತನಾಡುವುದನ್ನು ಪಾಕಿಸ್ತಾನ ಅಭ್ಯಾಸ ಮಾಡಿಕೊಂಡಿದೆ. ಇದೇ ಚಾಳಿ ಮುಂದುವರಿಸಿರುವ ಪಾಕಿಸ್ತಾನದ ಮಾಜಿ ವಿದೇಶಾಂಗ ಕಾರ್ಯದರ್ಶಿ, ಜಮ್ಮು ಮತ್ತು ಕಾಶ್ಮೀರದ ಭಾರತೀಯ ಕೇಂದ್ರಾಡಳಿತ ಪ್ರದೇಶದ ಬಗ್ಗೆ ವಿನಾಕಾರಣ ಉಲ್ಲೇಖ ಮಾಡಿದ್ದಾರೆ ಎಂದು ವಿಶ್ವಸಂಸ್ಥೆಯ ಭಾರತದ ಖಾಯಂ ಪ್ರತಿನಿಧಿ, ರಾಯಭಾರಿ ಪಿ ಹರೀಶ್ ಹೇಳಿದ್ದಾರೆ. ಇಸ್ಲಾಮೋಫಾಬ್ ದಿನಾಚರಣೆಯ ಸ್ಮರಣಾರ್ಥವಾಗಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಡೆದ ಅನೌಪಚಾರಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪಾಕಿಸ್ತಾನದ ಆಗಾಗ್ಗೆ ಈ ಬಗ್ಗೆ ಉಲ್ಲೇಖ ಮಾಡುತ್ತಲೇ ಇರುತ್ತಾರೆ. ಹೀಗಾಗಿ ಈ ಮಾತುಗಳು ಅವರ ಹಕ್ಕನ್ನು ಮಾನ್ಯ ಮಾಡುವುದಿಲ್ಲ ಅಥವಾ ಗಡಿಯಾಚೆಗಿನ ಭಯೋತ್ಪಾದನೆಯ ಅವರ ಅಭ್ಯಾಸವನ್ನು ಸಮರ್ಥಿಸುವುದಿಲ್ಲ ಎಂದು ಹರೀಶ್ ಹೇಳಿದರು.

ಆ ರಾಷ್ಟ್ರದ ಮತಾಂಧ ಮನಸ್ಥಿತಿಯು ಎಲ್ಲರಿಗೂ ತಿಳಿದಿದೆ. ಜೊತೆಗೆ ಅದರ ಧರ್ಮಾಂಧತೆಯ ದಾಖಲೆಯೂ ವಿಶ್ವದ ಮುಂದಿದೆ. ಇಂತಹ ಪ್ರಯತ್ನಗಳು ಜಮ್ಮು ಮತ್ತು ಕಾಶ್ಮೀರವು ಈಗಿರುವ ಹಾಗೂ ಈ ಹಿಂದಿನ ಮತ್ತು ಯಾವಾಗಲೂ ಭಾರತದ ಅವಿಭಾಜ್ಯ ಅಂಗವಾಗಿದೆ ಎಂಬ ವಾಸ್ತವತೆಯನ್ನು ಬದಲಾಯಿಸುವುದಿಲ್ಲ ಎಂದು ಖಡಾಖಂಡಿತವಾಗಿ ಅವರು ಹೇಳಿದ್ದಾರೆ.

ಪಾಕಿಸ್ತಾನದ ಮಾಜಿ ವಿದೇಶಾಂಗ ಕಾರ್ಯದರ್ಶಿ ತೆಹ್ಮಿನಾ ಜಂಜುವಾ ಅವರು ಇಸ್ಲಾಮೋಫೋಬಿಯಾವನ್ನು ಎದುರಿಸಲು ಅಂತಾರಾಷ್ಟ್ರೀಯ ದಿನದ ಸ್ಮರಣಾರ್ಥ ಅನೌಪಚಾರಿಕ ಸಭೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಬಗ್ಗೆ ಉಲ್ಲೇಖಿಸಿ ಮಾತನಾಡಿದ್ದರು. ಅವರ ಈ ಹೇಳಿಕೆಗೆ ಹರೀಶ್ ಅವರು ಬಲವಾದ ತಿರುಗೇಟು ನೀಡಿದ್ದಾರೆ.

# ರಾಡ್‌ನಿಂದ ಮನಸೋ ಇಚ್ಛೆ ಹಲ್ಲೆ ಐವರಿಗೆ ಗಾಯ

**ಪಂಜಾಬ್:** ಸಿಖ್ಖರ ಪವಿತ್ರ ಕ್ಷೇತ್ರವಾಗಿರುವ ಸ್ವರ್ಣ ಮಂದಿರದೊಳಗೆ ವ್ಯಕ್ತಿಯೊಬ್ಬ ಕಬ್ಬಿಣದ ರಾಡ್‌ನಿಂದ ಮನಬಂದಂತೆ ದಾಳಿ ನಡೆಸಿದ್ದಾನೆ. ಇದರಿಂದ ಇಬ್ಬರು ಸೇವಾದಾರರು ಮತ್ತು ಮೂರು ಮಂದಿ ಭಕ್ತರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಹಲ್ಲೆ ನಡೆಸಿರುವ ವ್ಯಕ್ತಿ ಶುಕ್ರವಾರ ಸ್ವರ್ಣಮಂದಿರದ ಗುರು ರಾಮದಾಸ್ ನಿವಾಸ್ ಅಥವಾ ಗುರು ರಾಮದಾಸ್ ಸರೈನಲ್ಲಿ ಓಡಾಡುತ್ತಿರುವುದು ಕಂಡು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವ್ಯಕ್ತಿಯ ಪೂರ್ವಾಪರವನ್ನು ವಿಚಾರಿಸಿದಾಗ ಆತ ಈ ರೀತಿ ಹಿಂಸಾತ್ಮಕವಾಗಿ ವರ್ತಿಸಿದ್ದಾನೆ. ಎಸ್‌ಜಿಪಿಸಿ ಉದ್ಯೋಗಿಗಳು ಮತ್ತು ಇತರರ ಮೇಲೆ ಈ ವೇಳೆ ದಾಳಿ ನಡೆಸಲಾಗಿದೆ ಎಂದು ಶಿರೋಮಣಿ ಗುರುದ್ವಾರ ಪರಬಂಧಕ್ ಸಮಿತಿ (ಎಸ್‌ಜಿಪಿಸಿ) ಕಾರ್ಯದರ್ಶಿ ಪ್ರತಾಪ್ ಸಿಂಗ್ ಹೇಳಿದ್ದಾರೆ.

ಹಲ್ಲೆ ನಡೆಸಿದ ವ್ಯಕ್ತಿ ಹರಿಯಾಣ ಮೂಲದವನಾಗಿದ್ದು, ಘಟನೆ ಬಳಿಕ ಎಸ್‌ಜಿಪಿಸಿ ಆತನನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ದಾಳಿಗೆ ಕಾರಣ ಏನು ಎಂಬ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ

ಗಾಯಗೊಂಡ ಭಕ್ತರು ಮೊಹಾಲಿ, ಬಟಿಂಡಾ ಮತ್ತು ಪಾಟಿಯಾಲಾ ಮೂಲದವರಾಗಿದ್ದಾರೆ. ಇನ್ನಿಬ್ಬರು ಶ್ರೀ ದರ್ಬಾರ್ ಸಾಹಿಬ್ ನಲ್ಲಿನ ಸೇವಾದಾರರಾಗಿದ್ದು, ಓರ್ವ ಸೇವಾದಾರ ಗಂಭೀರವಾಗಿ ಯಾಗೊಂಡಿದ್ದಾರೆ. ಅವರನ್ನು ಶ್ರೀ ಗುರು ರಾಮದಾಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ದಾಳಿಕೋರ ಮತ್ತು ಆತನ ಸಹಚರನನ್ನು ಪೊಲೀಸರಿಗೆ ಒಪ್ಪಿಸಲಾಗಿದೆ ಎಂದು ಪ್ರತಾಪ್ ಸಿಂಗ್ ಹೇಳಿದರು. ಈ ಕುರಿತು ದೂರು ಸಲ್ಲಿಸಿರುವ ಎಸ್‌ಜಿಪಿಸಿ ಆರೋಪಿಗಳ ವಿರುದ್ಧ ಯಾವುದೇ ದಯೆ ತೋರದೇ ಕಠಿಣ ಕ್ರಮಕ್ಕೆ ಮುಂದಾಗಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದೆ.

# ಸುನೀತಾ, ಬುಚ್ ವಿಲ್ಮೋರ್ ಕರೆತರಲು ಸ್ಪೇಸ್‌ಎಕ್ಸ್ ನಾಸಾ ಕಾರ್ಯಾಚರಣೆ

ಅಂತಾರಾಷ್ಟ್ರೀಯ ಬಾಹ್ಯಾಕಾಶದಲ್ಲಿ ಭಾರಿ ಸದ್ದು ಮಾಡಿದ್ದ ಭಾರತೀಯ ಮೂಲದ ಅಮೆರಿಕದ ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಅವರ ಸಹವರ್ತಿ ಬುಚ್ ವಿಲ್ಮೋರ್ ಅವರನ್ನು ಭೂಮಿಗೆ ಕರೆದುಕೊಂಡು ಬರಲು ನಾಸಾ ಮತ್ತು ಸ್ಪೇಸ್‌ಎಕ್ಸ್ ಶುಕ್ರವಾರ ಬಹುನಿರೀಕ್ಷಿತ ಸಿಬ್ಬಂದಿಯೊಂದಿಗೆ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪ್ರಾರಂಭಿಸಿದೆ. ಕ್ರೂ ಡ್ರ್ಯಾಗನ್ ಕ್ಯಾಪ್ಸುಲ್ ನ್ನು ಈ ಕಾರ್ಯಚರಣೆಯಲ್ಲಿ ಉಪಯೋಗಿಸಲಾಗಿದೆ. ಬೋಯಿಂಗ್‌ನ ಸ್ಟಾರ್‌ಲೈನರ್ ಸಮಸ್ಯೆಗಳಿಂದಾಗಿ ಒಂಬತ್ತು ತಿಂಗಳಿನಿಂದ ಬಾಹ್ಯಾಕಾಶದಲ್ಲಿ ಸಿಲುಕಿಕೊಂಡಿದ್ದ ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ಮರಳಿ ಕರೆತರಲು ನಾಸಾ ಮತ್ತು ಸ್ಪೇಸ್‌ಎಕ್ಸ್ ಫ್ಲೋರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಕ್ರೂ-10 ಮಿಷನ್ ಅನ್ನು ಪ್ರಾರಂಭಿಸಿದೆ.



ಕ್ರೂ-10 ಕಾರ್ಯಾಚರಣೆಯಲ್ಲಿ ಫಾಲ್ಕನ್ 9 ರಾಕೆಟ್ ಡ್ರ್ಯಾಗನ್ ಬಾಹ್ಯಾಕಾಶ ನೌಕೆಯನ್ನು ಹೊತ್ತೊಯ್ದಿತು.ಈ ಕಾರ್ಯಾಚರಣೆಯು ನಾಲ್ಕು ಸಿಬ್ಬಂದಿಯನ್ನು ISSಗೆ ಕಳುಹಿಸಿತು. ನಾಸಾ ಗಗನಯಾತ್ರಿಗಳಾದ ಆನ್ ಮೆಕ್‌ಕ್ಲೇನ್ ಮತ್ತು ನಿಕೋಲ್ ಅಯರ್ಸ್, JAXA (ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೋರೇಶನ್ ಏಜೆನ್ಸಿ) ಗಗನಯಾತ್ರಿ ಟಕುಯಾ ಒನಿಶಿ ಮತ್ತು ರೋಸ್ಕೋಸ್ಮೋಸ್ ಗಗನಯಾತ್ರಿ ಕಿರಿಲ್ ಪೆಸ್ಕೋವ್ ಅವರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಲಾಯಿತು.

ಸ್ಪೇಸ್‌ಎಕ್ಸ್‌ನ ಮಾನವ ಬಾಹ್ಯಾಕಾಶ ಸಾರಿಗೆ ವ್ಯವಸ್ಥೆಯಡಿಯಲ್ಲಿ ಕ್ರೂ-10 10ನೇ ಸಿಬ್ಬಂದಿ ಸಂಪೂರ್ಣ ಕಾರ್ಯಾಚರಣೆಯಾಗಿದೆ ಮತ್ತು ಡೆಮೊ-2 ಪರೀಕ್ಷಾ ಹಾರಾಟ ಸೇರಿದಂತೆ ನಾಸಾದ ವಾಣಿಜ್ಯ ಸಿಬ್ಬಂದಿ ಕಾರ್ಯಚರಣೆ ಮೂಲಕ ISS ನಿಲ್ದಾಣಕ್ಕೆ ಸಿಬ್ಬಂದಿಯೊಂದಿಗೆ 11ನೇ ಹಾರಾಟವಾಗಿದೆ. ಕಳೆದ ವರ್ಷ ಜೂನ್‌ನಲ್ಲಿ ಐಎಸ್‌ಎಸ್‌ಗೆ ತಲುಪಿದ ನಂತರ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಒಂಬತ್ತು ತಿಂಗಳ ಕಾಲ ಅಲ್ಲಿಯೇ ಸಿಲುಕಿಕೊಂಡಿದ್ದಾರೆ. ಅವರು ಸುಮಾರು ಒಂದು ವಾರ ಅಲ್ಲಿಯೇ ಇರಬೇಕಿತ್ತು.

ಕ್ರೀಡೆ - ಸಿನಿಮಾ
ಮುಸ್ಸಂಜೆ



# 60ರ ಹರೆಯದಲ್ಲಿ ಅಮೀರ್‌ಖಾನ್ ಡೇಟಿಂಗ್

**ಮುಂಬೈ:** ಬಾಲಿವುಡ್ ನಟ ಅಮೀರ್ ಖಾನ್ 60ನೇ ವಸಂತಕ್ಕೆ ಕಾಲಿಟ್ಟಿದ್ದು, ಇದೇ ಸಂಭ್ರಮದಲ್ಲಿ ತಮ್ಮ ಹೊಸ ಸಂಗಾತಿಯ ಕುರಿತು ಮನಬಿಚ್ಚಿ ಮಾತನಾಡಿದ್ದಾರೆ. ಈಗಾಗಲೇ ಎರಡು ಮದುವೆಯಿಂದ ವಿಚ್ಛೇದನ ಪಡೆದಿರುವ ನಟ ಬೆಂಗಳೂರಿನ ಯುವತಿ ಜೊತೆ ತಾವು ಪ್ರೀತಿಯಲ್ಲಿರುವುದಾಗಿ ಅಧಿಕೃತವಾಗಿ ಹೇಳಿದ್ದಾರೆ.

ಮುಂಬೈನಲ್ಲಿ ತಮ್ಮ ಹುಟ್ಟುಹಬ್ಬದ ಮುನ್ನಾದಿನ ನಡೆದ ಸಂಭ್ರಮಾಚರಣೆಯಲ್ಲಿ ಮಾಧ್ಯಮಗಳೆದುರು ಮಾತನಾಡಿರುವ ಅವರು, ಗೌರಿ ಸ್ಪ್ರಾಟ್ ಜೊತೆ ತಾವು ಡೇಟಿಂಗ್ ನಡೆಸುತ್ತಿರುವುದಾಗಿ ತಿಳಿಸಿದರು.

ಈ ಹಿಂದೆ ಅಮೀರ್ ಖಾನ್, ರೀನಾ ದತ್ ಮತ್ತು ಕಿರಣ್ ರಾವ್ ಅವರನ್ನು ಮದುವೆಯಾಗಿದ್ದರು. ಮೊದಲ ಪತ್ನಿಯಿಂದ ಜುನೈದ್ ಮತ್ತು ಇರಾ ಎಂಬ ಮಕ್ಕಳನ್ನು ಪಡೆದಿದ್ದಾರೆ. 2005ರಲ್ಲಿ ಕಿರಣ್‌ರಾವ್ ಅವರನ್ನು ಮದುವೆಯಾಗಿದ್ದು, 2021ರಲ್ಲಿ ದೂರವಾದರು. ಇಬ್ಬರೂ ಒಟ್ಟಾಗಿ ಮಗ ಅಜಾದ್‌ನ ಪೋಷಕತ್ವ ನಿಭಾಯಿಸುತ್ತಿದ್ದಾರೆ.

ತಮ್ಮ ಹೊಸ ಸಂಗಾತಿಯ ಕುರಿತು ಮಾತ್ರವಲ್ಲದೇ, ತಮ್ಮ ಮುಂದಿನ ಸಿನಿಮಾಗಳ ಕುರಿತೂ ಮಾತನಾಡಿದ ಅಮೀರ್, 'ಮಹಾಭಾರತ'ವನ್ನು ಸಿನಿಮಾವಾಗಿ ಮಾಡುವ ಉತ್ಸುಕತೆ ಕುರಿತು ತಿಳಿಸಿದರು. ಇದೀಗ ಚಿತ್ರಕ್ಕೆ ಬರವಣಿಗೆ ಆರಂಭಿಸಿದ್ದು, ತಂಡದಲ್ಲಿ ಎಲ್ಲರನ್ನೂ ಕೂಡಿಸಿದ್ದು, ಹೇಗೆ ಸಾಗಲಿದೆ ಎಂಬುದನ್ನು ನೋಡಬೇಕಿದೆ ಎಂದರು.

ಹೋಳಿ ಸಂಭ್ರಮದ ದಿನದಂದೇ ಅಂದರೆ, ಮಾರ್ಚ್ 14ರಂದು ಅಮೀರ್ 60ನೇ ವಸಂತಕ್ಕೆ ಕಾಲಿಟ್ಟಿದ್ದಾರೆ. ಸದ್ಯ ಅಮೀರ್ ಅವರ 'ಸಿತಾರೇ ಜಾಮೀನ್ ಪರ್' ಚಿತ್ರ ತೆರೆಗೆ ಬರಲು ಸಜ್ಜಾಗಿದ್ದು, ನಟಿ ಜೆನಿಲಿಯಾ ಪ್ರಮುಖ ಪಾತ್ರದಲ್ಲಿದ್ದಾರೆ.

# ೫ ಪಂದ್ಯಗಳಿಗೆ ರೋಹಿತ್ ನಾಯಕ..!

ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಟೀಮ್ ಇಂಡಿಯಾ ನಾಯಕನಾಗಿ ರೋಹಿತ್ ಶರ್ಮಾ ಮುಂದುವರೆಯಲಿದ್ದಾರೆ. ಜೂನ್ 20 ರಿಂದ ಶುರುವಾಗಲಿರುವ ಈ ಸರಣಿಗಾಗಿ ಹೊಸ ನಾಯಕನನ್ನು ಆಯ್ಕೆ ಮಾಡಲು ಬಿಸಿಸಿಐ ಹಿಂದೇಟು ಹಾಕಿದೆ ವರದಿಯಾಗಿದೆ. ಬದಲಾಗಿ ಹಿಟ್‌ಮ್ಯಾನ್‌ಗೆ ಮತ್ತೊಂದು ಅವಕಾಶ ನೀಡಲು ಮುಂದಾಗಿದ್ದಾರೆ.

ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್–ಗವಾಸ್ಕರ್ ಟೆಸ್ಟ್ ಸರಣಿ ಸೋಲಿನ ಬೆನ್ನಲ್ಲೇ ಭಾರತ ಟೆಸ್ಟ್ ತಂಡದ ನಾಯಕ ಬದಲಾಗಲಿದ್ದಾರೆ ಎಂಬ ಸುದ್ದಿಗಳು ಹರಿದಾಡಿದ್ದವು. ಅದರಲ್ಲೂ ಜಸ್‌ಪ್ರೀತ್ ಬುಮ್ರಾಗೆ ಟೆಸ್ಟ್ ತಂಡ ಕ್ಯಾಪ್ಟನ್ಸಿ ನೀಡಲಿದ್ದಾರೆ ಎಂದು ವರದಿಯಾಗಿತ್ತು.

ಆದರೆ ಇದೀಗ ಚಾಂಪಿಯನ್ಸ್ ಟ್ರೋಫಿ ಗೆದ್ದಿರುವ ರೋಹಿತ್ ಶರ್ಮಾ ಅವರನ್ನೇ ಟೆಸ್ಟ್ ತಂಡದ ನಾಯಕರನ್ನಾಗಿ ಮುಂದುವರೆಸಲು ನಿರ್ಧರಿಸಲಾಗಿದೆ. ಅದರಂತೆ ಇಂಗ್ಲೆಂಡ್ ವಿರುದ್ಧದ 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಹಿಟ್‌ಮ್ಯಾನ್ ಕ್ಯಾಪ್ಟನ್ ಆಗಿ ಕಾಣಿಸಿಕೊಳ್ಳಲಿದ್ದಾರೆ.



**5 ಪಂದ್ಯಗಳ ಬಳಿಕ?:** ಒಂದು ವೇಳೆ ರೋಹಿತ್ ಶರ್ಮಾ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲೂ ವಿಫಲರಾದರೆ, ಬಿಸಿಸಿಐ ಟೆಸ್ಟ್ ತಂಡಕ್ಕೆ ಹೊಸ ನಾಯಕನನ್ನು ಆಯ್ಕೆ ಮಾಡುವುದು ಖಚಿತ. ಅಂದರೆ ಇದು ಟೆಸ್ಟ್ ತಂಡದಲ್ಲಿ ರೋಹಿತ್ ಶರ್ಮಾ ಅವರಿಗೆ ಕೊನೆಯ ಅವಕಾಶ. ಏಕೆಂದರೆ ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್–ಗವಾಸ್ಕರ್ ಟೆಸ್ಟ್ ಸರಣಿಯಲ್ಲಿ ರೋಹಿತ್ ಶರ್ಮಾ 5 ಇನಿಂಗ್ಸ್‌ಗಳಲ್ಲಿ ಕಲೆಹಾಕಿದ್ದು ಕೇವಲ 31 ರನ್‌ಗಳು ಮಾತ್ರ. ಹೀಗಾಗಿಯೇ ಅವರನ್ನು ಟೆಸ್ಟ್ ತಂಡದಿಂದ ಕೈ ಬಿಡಬೇಕೆಂಬ ಕೂಗುಗಳು ಕೇಳಿ ಬಂದಿದ್ದವು.

ಆದರೀಗ ಚಾಂಪಿಯನ್ಸ್ ಟ್ರೋಫಿಯಲ್ಲಿ ರೋಹಿತ್ ಶರ್ಮಾ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದ್ದಲ್ಲದೇ, ನಾಯಕನಾಗಿಯೂ ಯಶಸ್ವಿಯಾಗಿದ್ದಾರೆ. ಹೀಗಾಗಿ ಇದೀಗ ಟೆಸ್ಟ್ ತಂಡದ ನಾಯಕತ್ವದಿಂದ ಅವರನ್ನು ಕೆಳಗಿಸಿಳಿದರೆ ತಪ್ಪು ಸಂದೇಶ ರವಾನೆಯಾದಂತಾಗುತ್ತದೆ ಎಂಬ ನಿರ್ಧಾರಕ್ಕೆ ಬಿಸಿಸಿಐ ಆಯ್ಕೆ ಸಮಿತಿ ಬಂದಿದೆ. ಇದೇ ಕಾರಣದಿಂದ ಇದೀಗ ರೋಹಿತ್ ಶರ್ಮಾ ಅವರಿಗೆ ಮತ್ತೈದು ಪಂದ್ಯಗಳಲ್ಲಿ ಅವಕಾಶ ನೀಡಲು ನಿರ್ಧರಿಸಲಾಗಿದೆ. ಅದರಂತೆ ಜೂನ್ 20 ರಿಂದ ಶುರುವಾಗಲಿರುವ ಇಂಗ್ಲೆಂಡ್ ವಿರುದ್ಧದ ಪ್ರತಿಷ್ಠಿತ ಟೆಸ್ಟ್ ಸರಣಿಯಲ್ಲಿ ಟೀಮ್ ಇಂಡಿಯಾವನ್ನು ರೋಹಿತ್ ಶರ್ಮಾ ಅವರೇ ಮುನ್ನಡೆಸಲಿದ್ದಾರೆ.ಇನ್ನು ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಹಿಟ್‌ಮ್ಯಾನ್ ವಿಫಲರಾದರೆ ಮುಂದಿನ ಸರಣಿಗೂ ಮುನ್ನ ಭಾರತ ಟೆಸ್ಟ್ ತಂಡದ ನಾಯಕ ಬದಲಾಗುವುದು ಖಚಿತ ಎಂದೇ ಹೇಳಬಹುದು.

# 2000 ಕೋಟಿ ಕಲೆಕ್ಷನ್ ಮಾಡಿದ ಹೀರೋಯಿನ್!

ಕಾಲ ಎಂದಿಗೂ ಒಂದೇ ರೀತಿ ಇರುವುದಿಲ್ಲ. ತಮ್ಮ ಗುರಿಗಳಿಗಾಗಿ ಹೋರಾಡುವವರಿಗೆ ಒಂದು ದಿನ ಒಳ್ಳೆಯ ಸಮಯ ಬರುತ್ತದೆ. ಬೇರೆಯವರು ಮಾಡುತ್ತಾರೆಂದು ಕಾಯುತ್ತಾ ಕುಳಿತುಕೊಳ್ಳದೆ ಎಲ್ಲರೂ ತಮ್ಮ ಕೆಲಸ ಮಾಡಬೇಕು. ಚಿತ್ರರಂಗದಲ್ಲಿ ಈ ರೀತಿ ಕಷ್ಟಪಡುತ್ತಿರುವ ಅನೇಕ ಜನರಿದ್ದಾರೆ. ಅವರಲ್ಲಿ ಕೆಲವರು ಪ್ರತಿಭೆ ಮತ್ತು ಅದೃಷ್ಟವೂ ಕೂಡಿ ಸ್ಟಾರ್‌ಗಳಾಗಿ ಮೆರೆದಿದ್ದಾರೆ, ಮೆರೆಯುತ್ತಿದ್ದಾರೆ. ಉದ್ಯಮದಲ್ಲಿ ಅಂತಹವರು ಅನೇಕರಿದ್ದಾರೆ. ಅಂತಹ ನಾಯಕಿಯ ಬಗ್ಗೆ ತಿಳಿದುಕೊಳ್ಳೋಣ.

ಈ ನಾಯಕಿ ಚಿತ್ರರಂಗದಲ್ಲಿ ನೆಪೋಟಿಸಂ ಸೋಲಿಸುವ ಮೂಲಕ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಅವರು ಯಾವುದೇ ಚಲನಚಿತ್ರ ಹಿನ್ನೆಲೆ ಇಲ್ಲದೆ ಚಿತ್ರರಂಗಕ್ಕೆ ಬಂದರು. ಯಾರ ಬೆಂಬಲವಿಲ್ಲದೆ ಅವಳು ಸ್ಟಾರ್ ನಟಿಯಾಗಿ ಬೆಳೆದು ನಿಂತರು. ಅವರು ತಮ್ಮ ವೃತ್ತಿಜೀವನದ ಆರಂಭದಲ್ಲಿ ಹಲವಾರು ಸವಾಲುಗಳನ್ನು ಎದುರಿಸಿದರು. ಅವರು ಬೇರೆ ಯಾರೂ ಅಲ್ಲ, ಸಾನ್ಯಾ ಮಲ್ಹೋತ್ರಾ. ಒಂದು ಕಾಲದಲ್ಲಿ ತಿಂಗಳಿಗೆ 15,000 ಸಂಬಳಕ್ಕೆ ಕೆಲಸ ಮಾಡುತ್ತಿದ್ದ ಈ ಸುಂದರಿ, ನಂತರ 2,000 ಕೋಟಿ ಕಲೆಕ್ಷನ್ ಮಾಡಿದ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದಾರೆ.

ಪ್ರಸ್ತುತ ಬಾಲಿವುಡ್ ಸ್ಟಾರ್ ನಟಿಯಾಗಿರುವ ಸಾನ್ಯಾ ಮಲ್ಹೋತ್ರಾ ದೆಹಲಿಯಲ್ಲಿ ಹುಟ್ಟಿ ಬೆಳೆದರು. ಪದವಿ ಪಡೆದ ನಂತರ, ಅವರು ಶಿಕ್ಷಕಿಯಾಗಿ ತಮ್ಮ ಜೀವನವನ್ನು ಪ್ರಾರಂಭಿಸಿದರು. ಆಗ ಸಿಗ್ತಿದ್ದು ಕೇವಲ 15,000 ತಿಂಗಳ ಸಂಬಳ. ಆಮಾ ನಟನೆಯ ಮೇಲಿನ ಪ್ರೀತಿಯಿಂದ ಪ್ರೇರಿತರಾಗಿ, ಚಲನಚಿತ್ರಗಳತ್ತ ಹೆಜ್ಜೆ ಇಡಲು ಕಾರಣರಾದರು. ಹಾಗಾಗಿ ಅವಳು ತನ್ನ ಶಿಕ್ಷಕಿ ವೃತ್ತಿಯನ್ನು ತೊರೆದಳು. ಅವಳ ಕನಸುಗಳನ್ನು ನನಸಾಗಿಸುವ ಧೈರ್ಯ ಅವಳಲ್ಲಿತ್ತು. ಅವರು ಡ್ಯಾನ್ಸ್ ಇಂಡಿಯಾ ಡ್ಯಾನ್ಸ್ ಎಂಬ ಡ್ಯಾನ್ಸ್ ರಿಯಾಲಿಟಿ ಶೋನಲ್ಲಿ ಭಾಗವಹಿಸಲು ಮುಂಬೈಗೆ ಬಂದರು. ಸನ್ಯಾ ಟಾಪ್ 100 ರಲ್ಲಿ ಆಯ್ಕೆಯಾದರು, ಆದರೆ ಮುಖ್ಯ ಆಡಿಷನ್‌ನಲ್ಲಿ ಆಯ್ಕೆಯಾಗಲಿಲ್ಲ.

ಕೇವಲ 10,000 ರೂಪಾಯಿಯೊಂದಿಗೆ ಸನ್ಯಾ ದೆಹಲಿಯಿಂದ ಮುಂಬೈಗೆ ಕಾಲಿಟ್ಟರು. ಡಿಐಡಿ ಆಡಿಷನ್‌ನಲ್ಲಿ ವಿಫಲವಾದ ನಂತರ, ಸನ್ಯಾ ಹತಾಶೆಗೊಳ್ಳಲಿಲ್ಲ ಮತ್ತು ಪ್ರಯತ್ನಿಸುತ್ತಲೇ ಇದ್ದರು. ಅವರು ಅನೇಕ ಟಿವಿ ಜಾಹೀರಾತುಗಳಲ್ಲಿ ಕ್ಯಾಮೆರಾಮೆನ್‌ಗಳಿಗೆ ಸಹಾಯಕಿಯಾಗಿ ಕೆಲಸ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಅವಕಾಶಗಳನ್ನು ಹುಡುಕುತ್ತಿರುವಾಗ, ಅವರಿಗೆ ಕಾಸ್ಟಿಂಗ್ ನಿರ್ದೇಶಕ ಮುಖೇಶ್ ಛಾಬ್ರಾ ಅವರ ಕಚೇರಿಯಿಂದ ಕರೆ ಬಂತು. ಸನ್ಯಾ ತಕ್ಷಣ ಹೋಗಿ ಒಂದು ಚಿತ್ರಕ್ಕೆ ಸಹಿ ಹಾಕಿದಳು. ಆದರೆ ಆ ನಂತರ ಆ ಸಿನಿಮಾ ನಿಂತುಹೋಯಿತು.

ಕೆಲವು ತಿಂಗಳುಗಳ ನಂತರ, ಸನ್ಯಾಗೆ ಛಾಬ್ರಾ ಅವರ ಕಚೇರಿಯಿಂದ ಮತ್ತೆ ಕರೆ ಬಂತು. ಈ ಬಾರಿ ಅವಳ ಅದೃಷ್ಟ ಬದಲಾಯಿತು. ಅವಳ ಜೀವನವನ್ನು ಬದಲಾಯಿಸುವ ಚಿತ್ರದಲ್ಲಿ ಅವಕಾಶ ಸಿಕ್ಕಿತು. ಇದು ಆಮಿರ್ ಖಾನ್ ಮಾಡಿದ ಪವಾಡವಲ್ಲದೆ ಬೇರೇನೂ ಅಲ್ಲ.. ಆಕೆಗೆ ದಂಗಲ್ ಚಿತ್ರದಲ್ಲಿ ಅವಕಾಶ ಸಿಕ್ಕಿತು. ಇದರಲ್ಲಿ ಸನ್ಯಾ ಬಬಿತಾ ಕುಮಾರಿ ಪಾತ್ರದಲ್ಲಿ ಕಾಣಿಸಿಕೊಂಡರು. ಆಮಿರ್ ಖಾನ್ ಅಭಿನಯದ ದಂಗಲ್ ಬಾಲಿವುಡ್‌ನಲ್ಲಿ ಅತಿ ದೊಡ್ಡ ಬ್ಲಾಕ್‌ಬಸ್ಟರ್ ಆಯಿತು.

ವಿಶ್ವಾದ್ಯಂತ ಇದುವರೆಗೆ 2000 ಕೋಟಿ ರೂ. ಗಳಿಸಿದ ಏಕೈಕ ಭಾರತೀಯ ಚಿತ್ರ ದಂಗಲ್. ದಂಗಲ್ ನಂತರ, ಸನ್ಯಾ ಬಧಾಯಿ ಹೋ, ಜವಾನ್ ಮತ್ತು ಸ್ಯಾಮ್ ಬಹದ್ದೂರ್ ಚಿತ್ರಗಳಲ್ಲಿ ನಟಿಸುವ ಮೂಲಕ ತಮ್ಮ ಯಶಸ್ವಿ ವೃತ್ತಿಜೀವನವನ್ನು ಮುಂದುವರೆಸಿದರು. ಹೀಗೆ, ಸನ್ಯಾ ಮಲ್ಹೋತ್ರಾ ಹಣವಿಲ್ಲದ ಸ್ಥಿತಿಯಿಂದ ಕೋಟಿಗಟ್ಟಲೆ



# ಭಿಕ್ಷಾಟನೆ ಮಾಡಿ ತಿನ್ನುತ್ತೇನೆ, ಆ ನಟನೊಂದಿಗೆ ನಟಿಸಲ್ಲ



ಅಜಿತ್ ಅಭಿನಯದ ಪೂವೆಲ್ಲಂ ಉನ್ ವಾಸಂ ಸಿನಿಮಾ ಮೂಲಕ ಸೋನಾ ಸಿನಿಮಾಗೆ ಪರಿಚಯವಾದರು. ಅಜಿತ್ ಸಿನಿಮಾ ನಂತರ ವಿಜಯ್ ಸಿನಿಮಾ ಶಾಜಹಾನ್‌ನಲ್ಲಿಯೂ ನಟಿಸಿದ್ದಾರೆ. ನಂತರ ಆಯುಧಂ, ಶಿವಪತಿಕಾರಂ, ಕೆಲ್ವಿಕುರಿ, ಮೃಗಂ, ಕುಸೇಲನ್ ಮುಂತಾದ ಅನೇಕ ಚಿತ್ರಗಳಲ್ಲಿ ನಟಿಸಿದ್ದಾರೆ. 2001 ರಿಂದ 2024 ರವರೆಗೆ ಅವರು ನಟಿಸಿದ ಸಿನಿಮಾಗಳು ಸತತವಾಗಿ ಬಿಡುಗಡೆಯಾದವು.

ತಮಿಳು ಜೊತೆಗೆ ತೆಲುಗು, ಮಲಯಾಳಂ ಭಾಷೆಗಳಲ್ಲೂ ಹಲವು ಚಿತ್ರಗಳಲ್ಲಿ ನಟಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸೋನಾ ರಾಸಿ ನಿರ್ದೇಶನದ ವೆಬ್ ಸರಣಿ ಸ್ಮೋಕ್. ಈ ವೆಬ್ ಸರಣಿಯನ್ನು ಅವರೇ ನಿರ್ಮಿಸಿದ್ದಾರೆ. ಅಂದರೆ, ಶಾರ್ಪ್‌ಫ್ಲಿಕ್ಸ್ ಓಟಿಟಿ ಸಂಸ್ಥೆಯೊಂದಿಗೆ ಯುನಿಕ್ ಪ್ರೊಡಕ್ಷನ್ ಸಂಸ್ಥೆಯ ಮೂಲಕ ಅವರು ಈ ವೆಬ್ ಸರಣಿಯನ್ನು ನಿರ್ಮಿಸಿದ್ದಾರೆ.

ನಟಿ ಸೋನಾ ಜೀವನ ಆಧಾರಿತ ಈ ವೆಬ್ ಸರಣಿ 2010 ರಿಂದ 2015 ರವರೆಗೆ ನಡೆದ ಘಟನೆಗಳನ್ನು ಆಧರಿಸಿದೆ. ಈ ವೆಬ್ ಸರಣಿಯ ಪ್ರಚಾರದಲ್ಲಿ ಬ್ಯುಸಿಯಾಗಿರುವ ಸೋನಾ ಸತತವಾಗಿ ಹಲವು ಸಂದರ್ಶನಗಳನ್ನು ನೀಡುತ್ತಿದ್ದಾರೆ.



ಆಗ ಆಕೆಯ ಬಗ್ಗೆ ಅನೇಕರಿಗೆ ತಿಳಿಯದ ಅನೇಕ ವಿಷಯಗಳು ತಿಳಿದವು. ಖಾಸಗಿ ಯೂಟ್ಯೂಬ್ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ, ನನ್ನ ಜೀವನದಲ್ಲಿ ನಾನು ಹೆಚ್ಚಾಗಿ ಮೋಸವನ್ನೇ ಎದುರಿಸಿದ್ದೇನೆ. ಆಗ ನನಗ್ಯಾರೂ ಇರಲಿಲ್ಲ. ಒಂದು ವೇಳೆ ಇದ್ದರೂ ಯಾರನ್ನೂ ನಂಬುತ್ತಿರಲಿಲ್ಲ. ನಿನಗಾಗಿ ನಾನು ಇದ್ದೇನೆ ಎಂದು ಹೇಳಿದರೂ ಅವರನ್ನು ನಾನು ನಂಬುತ್ತಿರಲಿಲ್ಲ. ಅದಕ್ಕೆ ಮುಖ್ಯ ಕಾರಣ ನಾನು ಎಲ್ಲರ ಬಳಿಯೂ ಮೋಸ ಹೋಗಿದ್ದೇನೆ.

ಹಾಗಿದ್ದಾಗ ನನಗೆ ನಟನೆ ಸಮಾಧಾನ ನೀಡಿತು. ಅದಕ್ಕೆ ನಾನು ಅನೇಕ ಸಿನಿಮಾಗಳಲ್ಲಿ ಶ್ರದ್ಧೆಯಿಂದ ನಟಿಸಿದೆ. ಅದರಲ್ಲಿಯೂ ನನಗೆ ಒಂದು ಸಮಸ್ಯೆ ಇದೆ. ನನ್ನನ್ನು ಎಲ್ಲರೂ ಗ್ಲಾಮರ್ ಆಗಿ ನೋಡಿದರು. ಇದರಿಂದ ಗ್ಲಾಮರ್‌ಗಾಗಿ ಬಂದ ಅವಕಾಶಗಳನ್ನು ನಾನು ಬೇಡವೆಂದೆ. ಒಂದು ಸಮಯದಲ್ಲಿ ನಟನೆಯ ಮೇಲೆ ಬೇಸರದಿಂದ ನನ್ನ ಜೀವನಕ್ಕೆ ಸಂಬಂಧಿಸಿದ ವಿಷಯಗಳನ್ನು ತೆಗೆಯಲು ಪ್ರಾರಂಭಿಸಿದೆ. ಗ್ಲಾಮರ್ ಕ್ವೀನ್ ಸಿಲ್ಕ್ ಸ್ಮಿತಾ ಮರಣದ ನಂತರ ಆಕೆಯ ಜೀವನ ಚರಿತ್ರೆ ಎಂದು ಅನೇಕರು ಹೇಳುತ್ತಾ ಬಂದರು. ಆದರೆ, ಅಲ್ಲಿಯವರೆಗೆ ಅಸಲಿ ಕಥೆ ಯಾರಿಗೂ ತಿಳಿದಿರಲಿಲ್ಲ. ಹಾಗೆಯೇ ನಾನು ಸತ್ತ ನಂತರವೂ ನನ್ನ ಬಗ್ಗೆ ಯಾರಾದರೂ ಒಂದು ಕಥೆ ಹೇಳಬಹುದು. ಅದಕ್ಕೆ ನನ್ನ ಕಥೆಯನ್ನು ನಾನೇ ಹೇಳಿಬಿಡಬೇಕೆಂದು ನಿರ್ಧರಿಸಿದೆ.

ಅಮ್ಮ ಸತ್ತಾಗ ಆಕೆಯನ್ನು ಹೂತು ಬಂದಾಗ ಒಬ್ಬ ವ್ಯಕ್ತಿ ಸೆಲ್ಫಿ ತೆಗೆದುಕೊಳ್ಳುತ್ತೇನೆಂದು ನನ್ನ ಬಳಿ ಬಂದ. ಆದರೆ, ನಾನು ಅಮ್ಮ ತೀರಿಕೊಂಡಿದ್ದಾರೆ ಆಗುವುದಿಲ್ಲ ಎಂದು ಹೇಳಿದಾಗ ಜಗತ್ತಿನಲ್ಲಿ ನಡೆಯದಿದ್ದೇನು ಈಗ ನಡೆದಿದೆ, ಒಂದು ಸೆಲ್ಫಿ ಅಷ್ಟೇ ಎಂದ. ನಾನು ಗ್ಲಾಮರ್ ನಟಿಯಾಗಿದ್ದಕ್ಕೆ ಅವನು ಹಾಗೆ ಮಾತನಾಡಿದ. ಅದಕ್ಕೆ ನಾನು ಗ್ಲಾಮರ್ ಆಗಿ ನಟಿಸುವುದನ್ನೇ ಬಿಟ್ಟೆ. ಈಗ ನನ್ನನ್ನು ಎಲ್ಲರೂ ಗೌರವಿಸುತ್ತಾರೆ. ಕುಸೇಲನ್ ಸಿನಿಮಾದಲ್ಲಿ ವಡಿವೇಲು ಜೊತೆ ನಟಿಸಿದ್ದೇನೆ. ಆ ಸಿನಿಮಾ ನಂತರ ಅವರೊಂದಿಗೆ ನಟಿಸಲು ನನಗೆ 16 ಸಿನಿಮಾಗಳಲ್ಲಿ ಅವಕಾಶ ಸಿಕ್ಕಿತು. ಆದರೆ, ನಾನು ನಟಿಸಲಿಲ್ಲ. ಅಗತ್ಯವಿದ್ದರೆ ಬೇಡಿಕೊಳ್ಳುತ್ತೇನೆ ಆದರೆ ವಡಿವೇಲು ಜೊತೆ ನಟಿಸುವುದಿಲ್ಲ ಎಂದು ಸೋನಾ ತಿಳಿಸಿದ್ದಾರೆ. ವಡಿವೇಲು ಜೊತೆ ಸೋನಾಗೆ ಎದುರಾದ ಸಮಸ್ಯೆಗಳೇ ಅದಕ್ಕೆ ಕಾರಣ ಎಂಬ ಪ್ರಚಾರ ನಡೆಯುತ್ತಿದೆ.

Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878